ಭಾನುವಾರ, ಏಪ್ರಿಲ್ 12, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂಜು ಶತಕ

ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟರ್ ಸಂಜು ಸ್ಯಾಮ್ಸನ್ (ಔಟಾಗದೇ 115; 56ಎ) ಅವರು ಶನಿವಾರ ಚೆನ್ನೈನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಶತಕ ಬಾರಿಸಿದರು

ಕ್ರೌರ್ಯ ನಿಲ್ಲಿಸಿ...

ಬೀದಿ ನಾಯಿಗಳ ಮೇಲಿನ ಕ್ರೌರ್ಯ ನಿಲ್ಲಿಸುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಮಹಿಳೆಯೊಬ್ಬರು ತಮ್ಮ ಸಾಕುನಾಯಿಯೊಂದಿಗೆ ಬಂದಿದ್ದರು

SAPTHAGIRI NPS UNIVERSITY

UNMATCHED EXCELLENCE,UNLIMITED POTENTIAL

ASSURED 100% PLACEMENT

G D Group

RANKED AS TOP UNIVERSITY IN KARNATAKA

The President of Sapthagiri NPS University Dr. K.P Gopal Krishna is a living legend, an educationalist, a popular person in education. He is the Founder, Chairman of the National Public Schools, and the recipient of the famous Karnataka Rajyotsava award in 2018. He always believes that innovation, creativity and problem solving abilities are the central of Sapthagiri NPS University. Under his stewardship, the youth to excel in the area of Medicine, Engineering, Commerce and Management in SNPSU.

Dr. K.P Gopalkrishna
Chairman, National Public School,
President- Sapthagiri NPS University

Admissions Open AY 2026-27

Courses Offered:

Undergraduate Programs

KCET(E-108)
COMEDK(E-116)

- **B.E** — 2,75,000 / Year
  in CSE, AI & ML, AI & DS, & Other areas
  - ECE — 2,50,000 / Year
  - EEE — 2,00,000 / Year
- **BCA** — 1,50,000 / Year
  in Cloud Computing, AI & ML, Data Science, & Other areas
- **BBA** — 1,25,000 / Year
  in Business Analytics, Financial Management, HRM, Avaiation Management & Other areas
- **B.COM** — 1,00,000 / Year
  in CA Foundation, Banking & Finance,& Other areas

UG COURSES | PG COURSES

- MBBS
- MD/ MS

Postgraduate Programs

PGCET(B027)
- **MBA** — 2,00,000 / Year
  in Business Analytics, Financial Management, HRM & Other areas

PGCET(C600)
- **MCA** — 1,50,000 / Year
  in CS & Forensics, AI & ML & Other areas
- **MTECH** — 1,00,000 / Year
  in CSE, AI & ML,VLSI Design

IBM's Immersive & Elite Global certification in AI with CSE and CSE (DS)

AFFILIATED TO RGUHS

UG Course
- BSC NURSING
- BSC ALLIED HEALTH SCIENCES
- BPT

IN ASSOCIATION WITH
IBM CISCO

SCHOLARSHIPS UPTO 100%

Apply Now

9900072632
admissions@snpsu.edu.in
www.snpsu.edu.in
#14/5, CHIKKASANDRA, HESARGHATTA MAIN RD, BENGALURU - 560057

Sponsored By
GDM Ventures
Plots & Developments

G D Group

VISIT US : www.gdgroup.co.in

8951474999
8792426999

ಜಯನಗರದ 42 ರಸ್ತೆಗಳಲ್ಲಿ ಪಾರ್ಕಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ಜಯನಗರದ 42 ರಸ್ತೆಗಳಲ್ಲಿ ಪಾರ್ಕಿಂಗ್ ನೀತಿಯನ್ನು ಜಾರಿಗೆ ತರಲಾಗುತ್ತಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಇದೇ ಮಾದರಿಯಲ್ಲಿ ಉಳಿದ ವಿಭಾಗಗಳಲ್ಲಿ ಪಾರ್ಕಿಂಗ್ ನೀತಿಯನ್ನು ಹಂತ-ಹಂತವಾಗಿ ಜಾರಿಗೆ ತರಲಾಗುವುದು ಎಂದರು.

ನಗರ ಪಾಲಿಕೆಯಲ್ಲಿರುವ ಸಮಸ್ಯೆಗಳ ಪರಿಹಾರಕ್ಕಾಗಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹೊಸ ತಂತ್ರಜ್ಞಾನ ಹಾಗೂ ಪರಿಹಾರಗಳೊಂದಿಗೆ ಮುಂದೆ ಬಂದರೆ ಪಾಲಿಕೆಯು ಕೈಜೋಡಿಸಲಿದೆ. ಕೋರಮಂಗಲದ ಅಪಾರ್ಟ್‌ಮೆಂಟ್‌ಗಳ ಮಾದರಿಯಲ್ಲಿ ಒಣ ಕಸವನ್ನು ತಾವೇ ವಿಂಗಡಿಸಿ ವಾರಕ್ಕೆರಡು ಬಾರಿ ಸಂಗ್ರಹಣಾ ಕೇಂದ್ರಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಈಶಾನ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಡೆ. ಚೀಫ್ ಸಿಗ್ನಲ್ & ಟೆಲಿಕಮ್ಯುನಿಕೇಶನ್ ಇಂಜಿನಿಯರ್/ಪ್ರಾಜೆಕ್ಟ್/ಎನ್.ಇ.ರೈಲ್ವೆ/ ವಾರಾಣಸಿ ಇವರು ಕೆಳಕಂಡ ಕಾಮಗಾರಿಗಳಿಗಾಗಿ, ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಲಾಗಿರುವ ಅರ್ಹತಾ ಮಾನದಂಡಗಳ ಪ್ರಕಾರ ಸಾಕಷ್ಟು ಅನುಭವವುಳ್ಳ ಗುತ್ತಿಗೆದಾರರಿಂದ ಇ–ಟೆಂಡರ್ (ದ್ವಿಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದ್ದಾರೆ:– **ಟೆಂಡರ್ ಪ್ರಕಟಣೆ ಸಂ. ಮತ್ತು ಕಾಮಗಾರಿ ವಿವರ:** ಎನ್ಇಆರ್_ಎಸ್ಎನ್‌ಟಿ_ಪ್ರಾಜೆಕ್ಟ್_ಬಿಎಸ್‌ಬಿ_01_2026 **ಕಾಮಗಾರಿ ಹೆಸರು:** ಈಶಾನ್ಯ ರೈಲ್ವೆಯ ವಾರಾಣಸಿ ಡಿವಿಜನ್‌ನಲ್ಲಿನ ಜಿಕೆಸಿ–ಸಿಎಚ್‌ಪಿಜಿ ಸೆಕ್ಷನ್‌ಗಳಲ್ಲಿನ ಸಿವಾನ್ ಜಂಕ್ಷನ್ ಮತ್ತು ಸಿಎಚ್‌ಪಿಜಿ ಸ್ಟೇಷನ್‌ಗಳ ನಡುವಿನ ಹಾಗೂ (ಎಸ್ಎನ್‌ಆರ್, ಸಿಸಿ, ಜಿಬಿ, ಬಿಎಲ್‌ಆರ್, ಡಿಇಒಎಸ್, ಎನ್‌ಆರ್‌ಎ, ಬಿಎಚ್‌ಟಿಆರ್, ಬಿಟಿಕೆ, ಎಂಡಬ್ಲ್ಯು, ಜೆಡ್‌ಆರ್‌ಡಿಇ, ಪಿಸಿಕೆ, ಡಿಡಿಎ, ಸಿಡಬ್ಲ್ಯು, ಇಎಂ, ಡಿಡಿಪಿ ಮತ್ತು ಕೆಪಿಎಸ್) (ಸೆಂಟ್ರಲೈಸ್ಡ್ ಟೈಪ್) ನಿಲ್ದಾಣಗಳ ನಡುವಿನ ಕಾಮಗಾರಿಗಾಗಿ ಸಾಮಗ್ರಿಗಳ ಪೂರೈಕೆಯೂ ಸೇರಿದಂತೆ, ಆರ್‌ಡಿಎಸ್‌ಒ ಸ್ಪೆಸಿಫಿಕೇಶನ್ ನಂ. ಆರ್‌ಡಿಎಸ್‌ಒ/ಎಸ್‌ಪಿಎನ್/192/2019 ವರ್ಗೀಕರಣಕ್ಕೆ ನಿಖರವಾಗಿರುವ ಅಥವಾ ಅತ್ಯಾಧುನಿಕ (ಇತ್ತೀಚೆಗಿನ ಯಾವುದೇ ತಿದ್ದುಪಡಿಗಳಿದ್ದಲ್ಲಿ, ಅವುಗಳಂತೆಗಿನ) ಎಸ್ಐಪಿ ಮೇರೆಗಿನ ಇಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ (ಇಐ) ಸಿಸ್ಟಮ್ ವಿನ್ಯಾಸ, ಪ್ರೊಗ್ರಾಮಿಂಗ್, ಅಳವಡಿಕೆ, ಪೂರೈಕೆ, ಟೆಸ್ಟಿಂಗ್ ಮತ್ತು ಕಮಿಷನಿಂಗ್ ಕಾಮಗಾರಿ. **ಅಂದಾಜು ಮೌಲ್ಯ:** ರೂ. 1335562573.92 ಬಿಡ್ **ಸೆಕ್ಯೂರಿಟಿ:** ರೂ. 26711300.00 **ಸ್ವೀಕೃತಿ ಹೊರಡಿಸಿದ ದಿನಾಂಕದಿಂದ ಕಾಮಗಾರಿ ಪೂರ್ಣಗೊಳಿಸುವ ಸಮಯ/ಅವಧಿ:** 18 ತಿಂಗಳು. **ಕ್ಲೋಸಿಂಗ್ ದಿನಾಂಕ ಮತ್ತು ಸಮಯ:** 26.05.2026 ರಂದು 15.00 ಗಂಟೆ. **ಸೂಚನೆ:** 1) ಆಫರ್ ಊರ್ಜಿತತ್ವವು ಟೆಂಡರ್ ಕ್ಲೋಸಿಂಗ್ ದಿನಾಂಕದಿಂದ **90 ದಿನಗಳು** ಆಗಿರುವುದು ಕಡ್ಡಾಯ. 2) ವಿವರವಾದ ಟೆಂಡರ್ ಪ್ರಕಟಣೆ, ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು http://www.ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. 3) ಇ–ಪೇಮೆಂಟ್ ಗೇಟ್‌ವೇ ಮೂಲಕವಾಗಲಿ ಅಥವಾ ಭಾರತದ ಯಾವುದೇ ಷೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ನಿಂದ ಪಡೆದಿರುವ ಬ್ಯಾಂಕ್ ಗ್ಯಾರಂಟೀ ಬಾಂಡ್ ಮೂಲಕವಾಗಲಿ ಅಥವಾ ಟೆಂಡರ್ ದಸ್ತಾವೇಜುಗಳಲ್ಲಿ ಉಲ್ಲೇಖಿಸಿರುವಂತೆ, ಬಿಡ್ ಸೆಕ್ಯೂರಿಟಿ ಮೊತ್ತವನ್ನು ಪಾವತಿಸುವುದು. ಬ್ಯಾಂಕ್ ಗ್ಯಾರಂಟೀ ಬಾಂಡ್, ಅನುಬಂಧ–1.1ರ (ಟೆಂಡರ್ ದಸ್ತಾವೇಜು) ಪ್ರಕಾರ ಇರತಕ್ಕದ್ದು ಮತ್ತು ಬಿಡ್ ವ್ಯಾಲಿಡಿಟಿ ದಿನಾಂಕ ಪೂರ್ಣಗೊಂಡ ಬಳಿಕ 90 ದಿನಗಳ ಅವಧಿಯವರೆಗೆ ಮಾನ್ಯತೆ ಹೊಂದಿರತಕ್ಕದ್ದು.

ಡೆ.ಸಿಎಸ್‌ಟಿಇ/ಪ್ರಾಜೆಕ್ಟ್/ವಾರಾಣಸಿ

ಸಿಪಿಆರ್‌ಒ/ಸಿಗ್ನಲ್–10

ರೈಲುಗಳಲ್ಲಿ ಬೀಡಿ/ಸಿಗರೇಟ್ ಸೇದಬಾರದು

‘₹38 ಸಾವಿರ ಕೋಟಿ ವೆಚ್ಚಕ್ಕೆ ಮಾಹಿತಿ ಇಲ್ಲ’

ನಗರದ ಕಾಮಗಾರಿಗಳಲ್ಲಿ ಪಾರದರ್ಶಕತೆ ಕೊರತೆ: ಅಧ್ಯಯನ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಬಿಎಂಆರ್‌ಸಿಎಲ್, ನಗರ ಪೊಲೀಸ್, ಬಿಎಂಟಿಸಿಗಳಿಂದ 2021–22ರಲ್ಲಿ ₹38 ಸಾವಿರ ಕೋಟಿ ವೆಚ್ಚವಾಗಿದ್ದರೂ, ಅದರ ಮಾಹಿತಿ ಸಾರ್ವಜನಿಕವಾಗಿ ಬಹಿರಂಗ ಆಗಿಲ್ಲ. ಪಾರದರ್ಶಕತೆ ಇಲ್ಲದೆ ಕಾಮಗಾರಿಗಳು ನಡೆಯುತ್ತಿವೆ ಎಂದು ಜನಾಗ್ರಹ ಸಂಸ್ಥೆ ವರದಿ ಪ್ರಕಟಿಸಿದೆ.

ಜನಾಗ್ರಹ ಸಂಸ್ಥೆಯ ‘ಬೆಂಗಳೂರು ಡಿಬೇಟ್ಸ್’ ತ್ರೈಮಾಸಿಕ ಸಂವಾದ ಸರಣಿಯಲ್ಲಿ ‘ಬೆಂಗಳೂರಿನಲ್ಲಿ ಸಾರ್ವಜನಿಕ ವೆಚ್ಚ– ಆಮೂಲಾಗ್ರ ಪಾರದರ್ಶಕತೆ’ ಎಂಬ ಅಧ್ಯಯನ ವರದಿಯನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಸಂಚಾರದ ದಟ್ಟಣೆ, ನೀರಿನ ಕೊರತೆ, ಪ್ರವಾಹ ಪರಿಸ್ಥಿತಿ , ಹದಗೆಟ್ಟ ರಸ್ತೆಗಳು ನಗರದ ನಾಗರಿಕರ ದಿನನಿತ್ಯದ ಸಂಕಷ್ಟಗಳು. ಅದಕ್ಕಾಗಿ, ಸಾರ್ವಜನಿಕ ಹಣ ಎಷ್ಟು ಖರ್ಚಾಗುತ್ತಿದೆ, ಯಾವ ಸಂಸ್ಥೆಗಳು ಅದನ್ನು ವೆಚ್ಚ ಮಾಡುತ್ತಿವೆ ಮತ್ತು ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂಬುದರ ಬಗ್ಗೆ ಸಮಗ್ರ ಮಾಹಿತಿ ಸಾರ್ವಜನಿಕರಿಗೆ ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ಜನಾಗ್ರಹ ಸಂಸ್ಥೆಯು, 70ಕ್ಕೂ ಹೆಚ್ಚು ದಾಖಲೆ ಮತ್ತು 12ಕ್ಕೂ ಹೆಚ್ಚು ಸಾರ್ವಜನಿಕ ಸಂಸ್ಥೆಗಳ ಮೂಲಕ ಮಾಹಿತಿ ಸಂಗ್ರಹಿಸಿ, 2021–22ನೇ ಸಾಲಿನಲ್ಲಿ ₹38 ಸಾವಿರ ಕೋಟಿಗೂ ಹೆಚ್ಚು ವೆಚ್ಚವಾಗಿರುವುದನ್ನು ಅಂಕಿ–ಅಂಶಗಳ ಮೂಲಕ ವರದಿಯಲ್ಲಿ ವಿವರಿಸಲಾಗಿದೆ.

‘ಕಾಮಗಾರಿಗಳ ವೆಚ್ಚದಲ್ಲಿ ಪಾರದರ್ಶಕತೆಯ ಕೊರತೆ ಇದ್ದು, ಒಟ್ಟಾರೆ ವೆಚ್ಚದಲ್ಲಿ ಶೇ 20ರಷ್ಟು ಮಾತ್ರ ಸ್ಥಳೀಯ ಆಡಳಿತವಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ವ್ಯಯವಾಗಿದೆ. ಉಳಿದ ವೆಚ್ಚವನ್ನು ಇತರೆ ಸಂಸ್ಥೆಗಳು ವೆಚ್ಚ ಮಾಡಿವೆ. ಈ ಸಂಸ್ಥೆಗಳು ತಮ್ಮ ಹಣಕಾಸು ಮಾಹಿತಿಯನ್ನು ಶೇ 34ರಷ್ಟು ಮಾತ್ರ ಸಾರ್ವಜನಿಕವಾಗಿ ಬಹಿರಂಗಪಡಿಸುತ್ತವೆ. ಬಹುತೇಕ ಸಂಸ್ಥೆಗಳಿಗೆ ಅದರ ಕಾನೂನುಬದ್ಧ ಬಾಧ್ಯತೆ ಇಲ್ಲ’ ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ವರದಿಯ ಆಧಾರದಲ್ಲಿ ‘ಸಾರ್ವಜನಿಕ ವೆಚ್ಚದಲ್ಲಿ ಪಾರದರ್ಶಕತೆ ಹೊಣೆಗಾರಿಕೆ’ ಎಂಬ ಸಂವಾದ ಶನಿವಾರ ನಡೆಯಿತು.

‘ಸಾರ್ವಜನಿಕ ವೆಚ್ಚಗಳ ಮಾಹಿತಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಉತ್ತಮ ಆಡಳಿತದ ಮೂಲಭೂತ ಅಂಶವಾಗಿದೆ. ಅದರ ಕೊರತೆ ನಾಗರಿಕರ ಮೇಲೆ ಮಾತ್ರವಲ್ಲದೆ ಸರ್ಕಾರದ ಮೇಲೆಯೂ ಪರಿಣಾಮ ಬೀರುತ್ತದೆ. ಸಂಯೋಜಿತ ಮತ್ತು ಸಮಯೋಚಿತ ಮಾಹಿತಿಗೆ ಲಭ್ಯ ಆಗದಿದ್ದರೆ, ನಾಗರಿಕರು ಸರ್ಕಾರವನ್ನು ಹೊಣೆಗಾರಿಕೆಗೆ ಒಳಪಡಿಸಲು ಸಾಧ್ಯ ಆಗುವುದಿಲ್ಲ. ಹಾಗೆಯೇ ಸರ್ಕಾರವೂ ಮಾಹಿತಿ ಆಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಪ್ರಗತಿಯನ್ನು ಅಳೆಯುವ ಸಾಮರ್ಥ್ಯದಲ್ಲಿ ನಿರ್ಬಂಧಿತ ಆಗಿರುತ್ತದೆ’ ಎಂಬುದು ಸಂವಾದದಲ್ಲಿ ತಜ್ಞರು ಅಭಿಪ್ರಾಯಪಟ್ಟರು.

‘ಮಾಹಿತಿ, ಅಂಕಿ–ಅಂಶಗಳನ್ನು ಪ್ರತ್ಯೇಕ ಆಡಳಿತಾತ್ಮಕ ಕಾರ್ಯವಾಗಿ ಪರಿಗಣಿಸಬಾರದು. ಬದಲಾಗಿ ಸಾರ್ವಜನಿಕ ಪ್ರಾಧಿಕಾರಗಳು ಯೋಜನೆ ರೂಪಿಸುವುದು, ವೆಚ್ಚ ಮಾಡುವುದು ಮತ್ತು ವರದಿ ಮಾಡುವ ವಿಧಾನದಲ್ಲೇ ಅದನ್ನು ಅಳವಡಿಸಬೇಕು. ಬಜೆಟ್, ಟೆಂಡರ್, ಯೋಜನಾ ವರದಿ ಮತ್ತು ಫಲಿತಾಂಶಗಳು ಪೂರ್ವನಿಯೋಜಿತವಾಗಿ ಎಲ್ಲರಿಗೂ ಲಭ್ಯವಾಗಬೇಕು. ಒಂದೇ ವೇದಿಕೆಯಲ್ಲಿ ಸಂಗ್ರಹವಾಗಿರಬೇಕು ಮತ್ತು ನಾಗರಿಕರು ಪ್ರಶ್ನೆ ಕೇಳಲು, ಸಂಬಂಧಿತ ಸಂಸ್ಥೆಗಳಿಂದ ಉತ್ತರಗಳನ್ನು ಪಡೆಯಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಬೇಕು’ ಎಂದರು.

ಶಿಫಾರಸು

- ಬೆಂಗಳೂರಿನ ಎಲ್ಲ ಸಾರ್ವಜನಿಕ ಪ್ರಾಧಿಕಾರಗಳನ್ನು ಸಾಮಾನ್ಯ ಹಣಕಾಸು ಪಾರದರ್ಶಕ ನಿಯಮಾವಳಿಗಳಡಿ ತರಬೇಕು.
- ನಗರ ಮಟ್ಟದಲ್ಲಿ ಸಮಗ್ರ ಸಾರ್ವಜನಿಕ ವೆಚ್ಚದ ‘ಡ್ಯಾಶ್‌ಬೋರ್ಡ್’ ಸೃಷ್ಟಿಸಬೇಕು.
- ಯೋಜನೆ ಮಟ್ಟದ ವಿವರಗಳು, ವಾರ್ಡ್‌ವಾರು ಮತ್ತು ವಲಯವಾರು ವೆಚ್ಚದ ಮಾಹಿತಿ ಹಾಗೂ ಸೇವಾ ವಿತರಣೆಯ ಫಲಿತಾಂಶಗಳನ್ನು ಪ್ರಕಟಿಸಬೇಕು.

ಸಂವಾದದಲ್ಲಿ ಮೀರಾ ಕೆ, ಅಬ್ದುಲ್ ವಾಜಿದ್, ಪದ್ಮನಾಭ ರೆಡ್ಡಿ, ಶ್ರೀಕಾಂತ್ ವಿಶ್ವನಾಥನ್ ಭಾಗವಹಿಸಿದ್ದರು

ತಜ್ಞರ ಅಭಿಪ್ರಾಯ



‘ಪಾರದರ್ಶಕತೆ ಪ್ರಾರಂಭಿಕ ಹಂತದಿಂದಲೇ ಆರಂಭವಾಗಬೇಕು. ಸ್ಥಳೀಯ ಸಂಸ್ಥೆಗಳು ಪಾರದರ್ಶಕವಾಗಿರದಿದ್ದರೆ, ನಾಗರಿಕರಿಗೆ ಅವುಗಳನ್ನು ಪ್ರಶ್ನಿಸುವ ಅಧಿಕಾರ ದೊರಯದಿದ್ದರೆ ಆಡಳಿತ ದುರ್ಬಲವಾಗುತ್ತದೆ. ಸಾರ್ವಜನಿಕ ಹಣದ ದೊಡ್ಡ ಮೊತ್ತಗಳನ್ನು ಹೇಗೆ ವ್ಯಯಿಸಲಾಗುತ್ತಿದೆ ಎಂಬುದರ ಬಗ್ಗೆ ಸ್ಪಷ್ಟತೆ ಕಡಿಮೆ ಇದೆ’ ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಪದ್ಮನಾಭ ರೆಡ್ಡಿ ಹೇಳಿದರು.

‘ಪಾರದರ್ಶಕತೆ ಪ್ರಜಾಪ್ರಭುತ್ವದ ಆಮ್ಲಜನಕವಾಗಿದೆ. ಅದಕ್ಕೆ ಹೊಣೆಗಾರಿಕೆ ಮತ್ತು ನಾಗರಿಕರ ಭಾಗವಹಿಸುವಿಕೆ ಸಹ ಅಗತ್ಯ. ಸರ್ಕಾರಗಳು ನಿರ್ಧಾರಗಳನ್ನು ತೆಗೆದುಕೊಳ್ಳಬಹುದಾದರೂ, ಜನರು ಆ ಪ್ರಕ್ರಿಯೆಯಿಂದ ದೂರವಾಗಿದ್ದಾರೆ ಎಂಬ ಭಾವನೆ ಮೂಡಿದಾಗ, ಸಂಸ್ಥೆಗಳ ಮೇಲೆ ಇರುವ ನಂಬಿಕೆ ಕುಸಿಯುತ್ತದೆ’ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಬ್ದುಲ್ ವಾಜಿದ್ ಅಭಿಪ್ರಾಯಪಟ್ಟರು.

‘ಖರೀದಿ ಪ್ರಕ್ರಿಯೆಗಳು, ಇಲಾಖೆಗಳ ಕಾರ್ಯಕ್ಷಮತೆ ಮತ್ತು ಸೇವಾ ವಿತರಣೆಯಂತಹ ಪ್ರಮುಖ ಅಂಶಗಳು ಪಾರದರ್ಶಕವಾಗಿಲ್ಲ. ಇದರಿಂದ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಲಾಗುತ್ತಿದೆ ಅಥವಾ ಫಲಿತಾಂಶಗಳನ್ನು ಹೇಗೆ ಮೌಲ್ಯಮಾಪನ ಮಾಡಬೇಕು ಎಂಬುದನ್ನು ನಾಗರಿಕರು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿದೆ’ ಎಂದು ಊರ್ವಾಣಿ ಫೌಂಡೇಷನ್‌ನ ಟ್ರಸ್ಟಿ ಮೀರಾ ಕೆ. ನುಡಿದರು.

‘ಬೆಂಗಳೂರಿನ ಜನರು, ರಾಜ್ಯ ಸರ್ಕಾರ, ಜಿಬಿಎ ಮತ್ತು ನಗರ ಪಾಲಿಕೆಗಳ ನಡುವೆ ವಿಶ್ವಾಸವನ್ನು ಪುನರ್‌ನಿರ್ಮಿಸುವ ಅಗತ್ಯವಿದೆ. ಸಾರ್ವಜನಿಕ ನಿಧಿಗಳು ನಿಖರವಾಗಿ ಎಲ್ಲಿಗೆ ಹೋಗುತ್ತಿವೆ, ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂಬುದರ ಜೊತೆಗೆ, ಬಜೆಟ್ ಮಾಡಲಾದ ವೆಚ್ಚ ಮತ್ತು ನಿಜವಾದ ವೆಚ್ಚ, ಅವಧಿ, ಗುತ್ತಿಗೆದಾರರ ವಿವರಗಳು, ಮಾಡಲಾದ ಪಾವತಿಗಳ ಮಾಹಿತಿ ಪ್ರತಿಯೊಬ್ಬರಿಗೂ ತಿಳಿದಿರಬೇಕು’ ಎಂದು ಜನಾಗ್ರಹ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಕಾಂತ್ ವಿಶ್ವನಾಥನ್ ಹೇಳಿದರು.

ಅನುರಾಗ್ಸ್ ಸಂಗೀತ ಗುರುಕುಲ ಸಂಸ್ಥೆಯು ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್) ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕನ್ನಡ ಮತ್ತು ಹಿಂದಿ ಗಜಲ್ ಗಾಯನದ ‘ಸಂಗೀತ ಸಂಜೆ’ ಕಾರ್ಯಕ್ರಮದಲ್ಲಿ ಸಮನ್ವಿತಾ ಶರ್ಮಾ ಅವರು ಗಾಯನ ಪ್ರಸ್ತುತಪಡಿಸಿದರು. ಗಾಯಕ ಅನುರಾಗ್ ಗದ್ದಿ ಉಪಸ್ಥಿತರಿದ್ದರು (ಎಡ ಚಿತ್ರ). ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ನಗರದ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ತ್ರಿಚೂರ್ ಸಹೋದರರಾದ ಶ್ರೀಕೃಷ್ಣ ಮೋಹನ್ ಮತ್ತು ರಾಮ್ ಕುಮಾರ್ ಮೋಹನ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಶನಿವಾರ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರಗಳು

ಸುದ್ದಿ 2 ನಿಮಿಷ

ಮಲ್ಲೇಶ್ವರ: 20ಕ್ಕೆ ಉದ್ಯೋಗ ಮೇಳ-ಅಶ್ವತ್ಥನಾರಾಯಣ

ಬೆಂಗಳೂರು: ಬಸವ ಜಯಂತಿ ಅಂಗವಾಗಿ ಮಲ್ಲೇಶ್ವರದ ಎಸ್‌ಎಚ್‌ವಿಎನ್‌ಎಂ ಸರ್ಕಾರಿ ಮಹಿಳಾ ಪದವಿಪೂರ್ವ ಕಾಲೇಜು ಆವರಣದಲ್ಲಿ ಯುವೋತ್ಸವ, ಉದ್ಯೋಗ ಮೇಳ–2026 ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಉದ್ಯೋಗ ಮೇಳವನ್ನು ಆಯೋಜನೆ ಮಾಡುತ್ತಾ ಬಂದಿದ್ದೇವೆ. ಏ.20ರಂದು ಬೆಳಿಗ್ಗೆ 8.30ರಿಂದ ಸಂಜೆ 4.30ರವರೆಗೆ ಉದ್ಯೋಗ ಮೇಳ ನಡೆಯಲಿದೆ’ ಎಂದರು.

‘ಮೇಳದಲ್ಲಿ ಯುವ ಸಬಲೀಕರಣಕ್ಕೆ ಸಹಾಯವಾಗಬಲ್ಲ ವೃತ್ತಿ ಮಾರ್ಗದರ್ಶನ, ಕೌಶಲ ಅಭಿವೃದ್ಧಿ ತರಬೇತಿ, ಉದ್ಯೋಗಮೇಳ, ಉದ್ಯಮಶೀಲತಾ ಅಭಿವೃದ್ಧಿ ಮತ್ತು ಆರ್ಥಿಕ ಸೇರ್ಪಡೆ ಕುರಿತು ಮಾಹಿತಿ ನೀಡಲಾಗುವುದು. ನೇರಸಂವಾದ, ನೇಮಕಾತಿ, ವೃತ್ತಿ ಅನ್ವೇಷಣೆಗೆ ವೇದಿಕೆಯನ್ನು ಮೇಳ ಒದಗಿಸಲಿದೆ. ಐಟಿ, ಉತ್ಪಾದನೆ, ಬ್ಯಾಂಕಿಂಗ್, ಆರೋಗ್ಯ, ಚಿಲ್ಲರೆ ವ್ಯಾಪಾರ, ಸರಕು ಮತ್ತು ಸೇವಾ ಕ್ಷೇತ್ರಗಳ ಸುಮಾರು 100ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಐದು ಸಾವಿರಕ್ಕೂ ಹೆಚ್ಚು ಉದ್ಯೋಗದ ನಿರೀಕ್ಷೆ ಇದೆ’ ಎಂದರು.

‘ಏ.13ರಿಂದಲೇ ಐದು ವಿಭಾಗದಲ್ಲಿ ಆನ್‌ಲೈನ್ ಮೂಲಕ ಮಾಹಿತಿ ನೀಡಲಾಗುವುದು. ಉದ್ಯೋಗ ಮೇಳದಂದು ಹ್ಯಾಕಥಾನ್ ಹಮ್ಮಿಕೊಳ್ಳಲಾಗಿದೆ. ಉದ್ಯಮಿಗಳು ಮಾಹಿತಿ ನೀಡಲಿದ್ದಾರೆ. ಪ್ರಾದೇಶಿಕ ಕೌಶಲ ಅಭಿವೃದ್ಧಿ ನಿರ್ದೇಶನಾಲಯ, ಜನಶಿಕ್ಷಣ ಸಂಸ್ಥಾನ್, ಎನ್‌ಎಸ್‌ಡಿಐ, ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ, ಅಂಚೆ ಇಲಾಖೆ ಸೇರಿದಂತೆ ವಿವಿಧ ಕಂಪನಿಗಳ ಮಳಿಗೆಗಳು ಇರುತ್ತವೆ. ಅಶ್ವತ್ಥನಾರಾಯಣ ಫೌಂಡೇಷನ್, ಭಾರತ್ ಕರಿಯರ್ ಕನೆಕ್ಟ್ ಸಹಯೋಗದಲ್ಲಿ ಮೇಳ ಆಯೋಜಿಸಲಾಗಿದೆ’ ಎಂದು ಹೇಳಿದರು.

ಬಿಎಂಟಿಸಿ ಸಿಬ್ಬಂದಿಗೆ ಆರೋಗ್ಯ ಅರಿವು ಕಾರ್ಯಕ್ರಮ

ಬೆಂಗಳೂರು: ಬಿಎಂಟಿಸಿಯ ಕಾರ್ಮಿಕ ಮತ್ತು ಕಲ್ಯಾಣ ವಿಭಾಗದಿಂದ ಬಿಎಂಟಿಸಿ ಘಟಕ 11ರ (ಪುಟ್ಟೇನಹಳ್ಳಿ) ಸಿಬ್ಬಂದಿಗೆ ಆರೋಗ್ಯ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಆರೋಗ್ಯ ಹಾಗೂ ಕಲ್ಯಾಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಘಟಕಗಳನ್ನು ಗುರುತಿಸಿ, ‘ಉತ್ತಮ ಘಟಕ’ ಪ್ರಶಂಸನಾ ಪತ್ರ ಹಾಗೂ ಸ್ಮರಣಿಕೆ ವಿತರಿಸಿ ಗೌರವಿಸಲಾಯಿತು.

ಬಿಎಂಟಿಸಿ ನಿರ್ದೇಶಕ (ಭದ್ರತೆ ಮತ್ತು ಜಾಗೃತಿ) ಅಬ್ದುಲ್ ಅಹದ್ ಮಾತನಾಡಿ, ‘ನೌಕರರು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಒತ್ತಡ ನಿವಾರಣೆಗಾಗಿ ವಿವಿಧ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಸುಲಭ ಯೋಗಾಭ್ಯಾಸ ಹಾಗೂ ಧ್ಯಾನಗಳನ್ನು ಮಾಡಬೇಕು. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ನೌಕರರ ಆರೋಗ್ಯಾಭಿವೃದ್ಧಿಗಾಗಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ ಪಿ.ವೈ. ನಾಯಕ್ ಮಾಹಿತಿ ನೀಡಿದರು.

ಸಂಸ್ಥೆಯ ಏಳು ವಲಯಗಳ ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಹಾಗೂ 51 ಘಟಕಗಳ ವ್ಯವಸ್ಥಾಪಕರು ಭಾಗವಹಿಸಿದ್ದರು.



ಭಾನುವಾರ, ಏಪ್ರಿಲ್ 12, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 101 | ಪುಟ 22
www.prajavani.net | prajavani.net | prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಶಸ್ತಿ ಸುತ್ತಿಗೆ ಆಯುಷ್
ಕನ್ನಡಿಗ ಆಯುಷ್ ಶೆಟ್ಟಿ, ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಥಾಯ್ಲೆಂಡ್‌ನ ಕಿಟಿದಿಸರನ್ ಕುನ್ಲಾವತ್ ವಿರುದ್ಧ ಗೆದ್ದು ಶನಿವಾರ ಫೈನಲ್‌ಗೆ ಲಗ್ಗೆ ಇಟ್ಟರು

ಐವರಿಗೆ 'ಅಂಬೇಡ್ಕರ್ ಪ್ರಶಸ್ತಿ' 4A | 'ಅಧಿಕಾರಕ್ಕೆ ಬಂದರೆ 6 ತಿಂಗಳಲ್ಲಿ ಯುಸಿಸಿ' 4B

ಗಿಗ್ ವಲಯ: ಬಗೆದಷ್ಟೂ ಬವಣೆ

ಒಳನೋಟ

● ಉ.ಮ.ಮಹೇಶ್

ಬೆಂಗಳೂರು: 'ಮಾಡಿದ ಕೆಲಸಕ್ಕೆ ಗೌರವ ಸಿಗುವುದಿಲ್ಲ. ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಗಂಟೆಗಟ್ಟಲೇ ನಿಲ್ಲಬೇಕು. ಮಳೆ ಬಂದಾಗ ನಮ್ಮ ಪಾಡು ಹೇಳುವುದೇ ಬೇಡ. ಪಾರ್ಸೆಲ್ ಪಡೆದು 2 ಕಿ.ಮೀ ಹೋದರೆ ಬರೀ ₹10 ಸಿಗುತ್ತದೆ'.

ಇದು ತುಮಕೂರಿನ ಗಿಗ್ ಕಾರ್ಮಿಕ ಚಂದ್ರರಾಜ್ ಅವರ ಬೇಸರದ ಮಾತು.

'ಆ್ಯಪ್ ಆಧರಿಸಿಯೇ ನಮ್ಮ ಕೆಲಸ ಸಾಗುವ ಕಾರಣ ಮಾಲೀಕರ ಜೊತೆಗೆ ನೇರ ಸಂವಹನವೇ ಆಗುವುದಿಲ್ಲ. ಆ್ಯಪ್‌ನಲ್ಲಿ ಸಂದೇಶ ಕಳಿಸಿ ಸಮಸ್ಯೆ ಪರಿಹರಿಸಿಕೊಳ್ಳಬೇಕು. ವಾದ ಮಾಡಿದರೆ 'ಐಡಿ' ನಿಷ್ಕ್ರಿಯ (ಬ್ಲಾಕ್) ಗೊಳಿಸಲಾಗುತ್ತಿದೆ. ಅನ್ಯಾಯ ಅಥವಾ ಸಮಸ್ಯೆ ವಿರುದ್ಧ ಧ್ವನಿ ಎತ್ತಲು ಅವಕಾಶವಿಲ್ಲ' ಇದು, ಹೆಸರು ಹೇಳಲು ಬಯಸದ ಮೈಸೂರಿನ ಗಿಗ್ ಕಾರ್ಮಿಕರೊಬ್ಬರ ನೋವು.

'ಕೆಲಸದ ವೇಳೆ ಅವಘಡಗಳು ಸಂಭವಿಸಿದರೆ ಕಂಪನಿಯಿಂದ ನಮಗೆ ಯಾವ ಸೌಲಭ್ಯವೂ ಸಿಗುವುದಿಲ್ಲ. ನಮ್ಮನ್ನೂ ಕಾರ್ಮಿಕರಂತೆಯೇ ಪರಿಗಣಿಸಬೇಕು' ಹಕ್ಕೊತ್ತಾಯ ಮಂಡಿಸುತ್ತಾರೆ ಶಿರಸಿಯ ಗೌರೀಶ ನಾಯ್ಕ.

–ಈ ಎಲ್ಲರೂ ಗಿಗ್ ಕಾರ್ಮಿಕರು. ಇವರದು ಅಸಂಘಟಿತ ವರ್ಗ. ಪ್ರಮುಖ, ಹೆಸರಾಂತ ಹೋಟೆಲ್‌ಗಳ ಬಳಿ ಬೈಕ್‌ಗಳನ್ನು ನಿಲ್ಲಿಸಿ ಯಾವಾಗ ಪಾರ್ಸೆಲ್ ಸಿಗುವುದೋ ಎಂದು ಕಾಯುವ ಶ್ರಮಿಕರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯಶೈಲಿ, ಒತ್ತಡ ಭಿನ್ನವಾಗಿರಬಹುದು. ಆದರೆ, ಬವಣೆಗಳು ಏಕರೂಪವಾಗಿವೆ.

ಆನ್‌ಲೈನ್‌ನಲ್ಲಿ ತಿಂಡಿ, ಊಟ, ಯಾವುದೊ ವಸ್ತುವಿಗೆ ಆರ್ಡರ್ ಮಾಡಿದರೆ ಮಳೆ ಇರಲಿ, ಬಿಸಿಲಿರಲಿ ಮನೆ ಬಾಗಿಲಿಗೇ ಬರುತ್ತದೆ. ಒಟಿಪಿ ನೀಡಿ ಪಾರ್ಸಲ್ ಪಡೆದರೆ, ಅದೇನೋ ಖುಷಿ, ನೆಮ್ಮದಿ. ಮತ್ತೊಂದೆಡೆ, ಅಷ್ಟೇ ನೆಮ್ಮದಿ ಅದನ್ನು ಮನೆ ಬಾಗಿಲಿಗೆ ತಲುಪಿಸುವ ಗಿಗ್ ಕಾರ್ಮಿಕನಿಗೂ ಇರುತ್ತದಾ?

ಸರಳ ಉತ್ತರ: ಇಲ್ಲ. ಕೆಲಸದ ಶೈಲಿ ಮತ್ತು ಒತ್ತಡವು ನೆಮ್ಮದಿ ಅಥವಾ ಖುಷಿ ಕಾರ್ಮಿಕ ಹತ್ತಿರ ಸುಳಿಯಲು ಬಿಡುವುದಿಲ್ಲ. ಬೇರೆ ಆದೇಶ ಇಲ್ಲ ಎಂಬ ಯೋಚನೆಯೊ, ಆರ್ಡರ್ ಇದ್ದರೆ ಅದನ್ನು ಸಂಬಂಧಿತ ವಿಳಾಸಕ್ಕೆ ಆದಷ್ಟು ಬೇಗ ತಲುಪಿಸಬಹುದು ಎಂಬ ಚಿಂತನೆ ಅವರನ್ನು ಆವರಿಸಿರುತ್ತದೆ. ಈ ಶ್ರಮಿಕರು ಅಸಂಘಟಿತರು. ಅನಿಶ್ಚಿತ ಕಾರ್ಯವೈಖರಿ. ದಿನದ ಗಳಿಕೆ ಎಷ್ಟು ಎಂಬುದರ ಖಾತರಿಯೂ ಇರುವುದಿಲ್ಲ. ಖಾತರಿಯಾಗಿ ಸಿಗುವುದು ನಿತ್ಯದ ಕೆಲಸ ಹೊತ್ತು ತರುವ ಧಾವಂತ ಹಾಗೂ ಆತಂಕಗಳಷ್ಟೆ.

ಬೆಂಗಳೂರು ಸೇರಿ ಮಹಾನಗರಗಳಲ್ಲಿ ತ್ವರಿತವಾಗಿ ಬೆಳೆಯುತ್ತಿರುವ 'ಗಿಗ್' ಕಾರ್ಯಕ್ಷೇತ್ರ ಮೈಸೂರು, ಮಂಗಳೂರು, ಹುಬ್ಬಳ್ಳಿ, ದಾವಣಗೆರೆ ಅಂತಹ ನಗರಗಳಲ್ಲೂ ಬೇರೂರುವ ಲಕ್ಷಣ ಸ್ಪಷ್ಟವಾಗಿವೆ. ಗಿಗ್ ಶ್ರಮಿಕರ ಪರಿಕಲ್ಪನೆ ಹುಟ್ಟಿಕೊಂಡಿದ್ದು ಫ್ಲಿಪ್‌ಕಾರ್ಟ್, ಅಮೆಜಾನ್ ಅಂತಹ ಸಂಸ್ಥೆಗಳು ವಹಿವಾಟು ಆರಂಭಿಸಿದ ಬಳಿಕ.

▶ 4

ರಾಜ್ಯದಲ್ಲಿ ವಿಮೆ ಭದ್ರತೆ

ಕರ್ನಾಟಕ ಸರ್ಕಾರ ಗಿಗ್ ಕಾರ್ಮಿಕರಿಗಾಗಿ ವಿಮಾ ಭದ್ರತೆ ಒದಗಿಸಲು 'ಗಿಗ್ ಕಾರ್ಮಿಕರ ವಿಮಾ ಯೋಜನೆ' ರೂಪಿಸಿದೆ. ಕರ್ನಾಟಕ ಇಂಥ ಯೋಜನೆ ಜಾರಿಗೊಳಿಸಿದ ಮೊದಲ ರಾಜ್ಯವು ಹೌದು.

ಯೋಜನೆ ಉಚಿತ. ಪ್ರೀಮಿಯಂ ಪಾವತಿಸುವ ಅಗತ್ಯತೆ ಇಲ್ಲ. ಡೆಲಿವರಿ ವೃತ್ತಿಯಲ್ಲಿ ತೊಡಗಿರುವ 18 ರಿಂದ 60 ವರ್ಷ ವಯಸ್ಸಿನ, ಆದಾಯ ತೆರಿಗೆ ಪಾವತಿಸದ, ಕರ್ನಾಟಕದಲ್ಲಿ ಗಿಗ್ ಸೇವೆಯಲ್ಲಿ ತೊಡಗಿರುವ ಎಲ್ಲ ಗಿಗ್ ಕಾರ್ಮಿಕರು ನೋಂದಣಿಗೆ ಅರ್ಹರು.

ಅಪಘಾತದಿಂದ ಮರಣ ಹೊಂದಿದಲ್ಲಿ ₹2 ಲಕ್ಷ ವಿಮೆ ಹಾಗೂ ₹2 ಲಕ್ಷ ಜೀವವಿಮೆ ಸೇರಿ ₹4 ಲಕ್ಷ ನೆರವು ಕುಟುಂಬದವರಿಗೆ ಸಿಗಲಿದೆ. ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ₹2 ಲಕ್ಷದವರೆಗೆ, ಆಸ್ಪತ್ರೆ ವೆಚ್ಚ ಮರುಪಾವತಿ ₹1 ಲಕ್ಷವರೆಗೆ ಸಿಗಲಿದೆ.

ಜೆಡಿಎಸ್ ಬೆಳ್ಳಿ ಹಬ್ಬ

ಪ್ರಜಾವಾಣಿ ಚಿತ್ರ: ರಂಜು ಪಿ

ಬೆಂಗಳೂರಿನ ಕೊಮ್ಮಘಟ್ಟ ಮೈದಾನದಲ್ಲಿ ಶನಿವಾರ ನಡೆದ ಜೆಡಿಎಸ್‌ನ ಜನತಾ ಸಮಾವೇಶ ಹಾಗೂ ಪಕ್ಷದ ಬೆಳ್ಳಿಹಬ್ಬದ ಸಂಭ್ರಮ ಸಮಾರಂಭದಲ್ಲಿ ಕರೆಮ್ಮ ಜಿ.ನಾಯಕ್, ಟಿ.ಎ ಶರವಣ, ನಿಖಿಲ್ ಕುಮಾರಸ್ವಾಮಿ, ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಮತ್ತು ಎಂ.ಕೃಷ್ಣಾರೆಡ್ಡಿ ಅವರು ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು

ಎಂಜಿನಿಯರಿಂಗ್ ಶುಲ್ಕ: ಶೇ 7.5 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು 2026–27ನೇ ಸಾಲಿಗೆ ಶೇ 7.5ರಷ್ಟು ಹೆಚ್ಚಿಸಲು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ತೀರ್ಮಾನಿಸಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಶೇ 10ರಿಂದ 15ವರೆಗೆ ಶುಲ್ಕ ಹೆಚ್ಚಳಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಸುದೀರ್ಘ ಚರ್ಚೆಯ ನಂತರ ಶೇ 7.5 ಹೆಚ್ಚಳಕ್ಕೆ ಸಭೆ ಸಮ್ಮತಿಸಿದೆ.

ಈ ನಿರ್ಧಾರದಿಂದ ಟೈಪ್-1 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸಿಇಟಿ ಸೀಟುಗಳ ಶುಲ್ಕ ₹81,800ರಿಂದ ₹87,935ಕ್ಕೆ ಏರಿಕೆಯಾಗಲಿದೆ. ಟೈಪ್-2 ಕಾಲೇಜುಗಳಲ್ಲಿ ₹91,000 ರಿಂದ ₹97,825ಕ್ಕೆ ಹೆಚ್ಚಳವಾಗಲಿದೆ. ಇದರಲ್ಲಿ ವಿಶ್ವವಿದ್ಯಾಲಯ ನೋಂದಣಿ, ಇತರೆ ಪ್ರಕ್ರಿಯಾ ಶುಲ್ಕಗಳು ಒಳಗೊಂಡಿಲ್ಲ.

▶ 7

ಪಶ್ಚಿಮ ಏಷ್ಯಾ ಬಿಕ್ಕಟ್ಟಿಗೆ ಪರಿಹಾರ: ಇಸ್ಲಾಮಾಬಾದ್‌ಗೆ ಅಮೆರಿಕ, ಇರಾನ್ ನಿಯೋಗ ಭೇಟಿ

ಶಾಂತಿ: ತ್ರಿಪಕ್ಷೀಯ ಮಾತುಕತೆ ಆರಂಭ

ಇಸ್ಲಾಮಾಬಾದ್/ಟೆಹರಾನ್ (ಎಎಫ್‌ಪಿ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇಸ್ಲಾಮಾಬಾದ್‌ನಲ್ಲಿ ಶನಿವಾರ ತ್ರಿಪಕ್ಷೀಯ ಮಾತುಕತೆ ಆರಂಭವಾಗಿದೆ.

'ತ್ರಿಪಕ್ಷೀಯ ಮಾತುಕತೆಯ ಎರಡು ಸುತ್ತು ಪೂರ್ಣಗೊಂಡಿದೆ, ಮೂರನೆಯ ಸುತ್ತು ಪ್ರಗತಿಯಲ್ಲಿದೆ' ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ಐಆರ್‌ಐಬಿ ಟಿವಿ ತಡರಾತ್ರಿ ವರದಿ ಮಾಡಿದೆ.

'ಇರಾನ್ ಮತ್ತು ಪಾಕಿಸ್ತಾನದೊಂದಿಗೆ ಉನ್ನತ ಮಟ್ಟದ ತ್ರಿಪಕ್ಷೀಯ ನೇರ ಮಾತುಕತೆ ಮುಂದುವರಿದಿದೆ' ಎಂದು ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಎರಡೂ ದೇಶಗಳ ಪ್ರತಿನಿಧಿಗಳು ಪ್ರತ್ಯೇಕ ಕೋಣೆಗಳಲ್ಲಿ ಕುಳಿತು ಮಧ್ಯವರ್ತಿಯ ಮೂಲಕ ಮಾತುಕತೆ ನಡೆಸುವ ಇತ್ತೀಚಿನ ಪದ್ಧತಿಗಿಂತ ಇದು ಭಿನ್ನವಾಗಿದೆ' ಎಂದು ಅವರು ಹೇಳಿದ್ದಾರೆ.

ಇಸ್ಲಾಮಾಬಾದ್ ಮಾತುಕತೆಯಲ್ಲಿ ಹೊರ್ಮುಜ್ ಜಲಸಂಧಿಯ ಕುರಿತು ಅಮೆರಿಕ 'ಅತಿಯಾದ ಬೇಡಿಕೆ'ಗಳನ್ನು ಮುಂದಿಟ್ಟಿದೆ ಎಂದು ಇರಾನ್ ಮಾಧ್ಯಮಗಳು ಹೇಳಿವೆ.

ಜೆ.ಡಿ. ವ್ಯಾನ್ಸ್ ಮತ್ತು ಶೆಹಬಾಜ್ ಶರೀಫ್ — ಪಿಟಿಐ ಚಿತ್ರ

ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ, ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ನೇತೃತ್ವದ ಇರಾನ್‌ನ ನಿಯೋಗ ಹಾಗೂ ಸಭೆಯ ಆತಿಥ್ಯ ವಹಿಸಿರುವ ಪ್ರಧಾನಿ ಶೆಹಬಾಜ್ ಶರೀಫ್ ಸಭೆಯಲ್ಲಿ ಪಾಲ್ಗೊಂಡಿದ್ದು, ಎಲ್ಲ ಪ್ರತಿನಿಧಿಗಳ ನಡುವೆ ನೇರ ಮಾತುಕತೆ ನಡೆಯಿತು ಎಂದು ಪಾಕಿಸ್ತಾನ ಮಾಧ್ಯಮಗಳು ವರದಿ ಮಾಡಿವೆ.

ಇರಾನ್ ಬೇಡಿಕೆ: ಯುದ್ಧದ ಆರ್ಥಿಕ ಹಾನಿಯನ್ನು ತುಂಬಿಕೊಡುವ ಮಾರ್ಗವನ್ನು ಕಂಡುಕೊಳ್ಳಲು ಇರಾನ್ ಪ್ರಮುಖವಾಗಿ ಮಾತುಕತೆ ಮೂಲಕ ಪ್ರಯತ್ನಿಸುತ್ತಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

ಇರಾನ್ ಅಧಿಕಾರಿಗಳು ಮತ್ತು ಇಬ್ಬರು ಅರ್ಥಶಾಸ್ತ್ರಜ್ಞರು ಅಂದಾಜಿಸಿರುವಂತೆ ಪಶ್ಚಿಮ ಏಷ್ಯಾ ಸಂಘರ್ಷದಿಂದ ಇರಾನ್‌ಗೆ ಅಂದಾಜು 300 ಬಿಲಿಯನ್ ಡಾಲರ್‌ನಿಂದ 1 ಟ್ರಿಲಿಯನ್ ಡಾಲರ್‌ನಷ್ಟು ನಷ್ಟವಾಗಿದೆ. ಇದರ ಚೇತರಿಕೆಗೆ ವರ್ಷಗಳೇ ಬೇಕಾಗುತ್ತವೆ. ಯುದ್ಧದಿಂದ 10 ಲಕ್ಷಕ್ಕಿಂತ ಹೆಚ್ಚಿನ ಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಈ ವರದಿ ಹೇಳಿದೆ.

ಹೊರ್ಮುಜ್ ದಾಟಿದ ಅಮೆರಿಕದ ಯುದ್ಧನೌಕೆ

ಇಸ್ಲಾಮಾಬಾದ್‌ನಲ್ಲಿ ಮಾತುಕತೆ ಆರಂಭಗೊಂಡ ಬೆನ್ನಲ್ಲೇ ಅಮೆರಿಕದ ಎರಡು ಯುದ್ಧನೌಕೆಗಳು ಶನಿವಾರ ಹೊರ್ಮುಜ್ ಜಲಸಂಧಿ ದಾಟಿವೆ.

ಸಭೆ ಆರಂಭಕ್ಕೂ ಮುನ್ನ, ಹೊರ್ಮುಜ್ ಜಲಸಂಧಿಯನ್ನು ಸಂಚಾರ ಮುಕ್ತವಾಗಿಸುವ ಸಂಬಂಧ, ಜಲಮಾರ್ಗವನ್ನು ತೆರವುಗೊಳಿಸುವ ಕಾರ್ಯವನ್ನು ಅಮೆರಿಕ ಸೇನೆ ಆರಂಭಿಸಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು.

'ಹೊರ್ಮುಜ್‌ನಲ್ಲಿ 28 ಜಲಬಾಂಬ್ ಅಳವಡಿಸಲು ಇರಾನ್ ನಿಯೋಜನೆ ಮಾಡಿದ್ದ ಎಲ್ಲ ನೌಕೆಗಳು ಮುಳುಗಿವೆ' ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದರು. ಗುರಿ ನಿರ್ದೇಶಿತ ಕ್ಷಿಪಣಿ ನಾಶಕಗಳನ್ನು ಹೊತ್ತ ಅಮೆರಿಕ ನೌಕಪಡೆಯ ಯುದ್ಧನೌಕೆಗಳು ಸಾಗಿದ್ದು, ಯಾವುದೇ ಸಮಸ್ಯೆ ಎದುರಾಗಲಿಲ್ಲ ಎಂದು ಅಮೆರಿಕ ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ.

'ಕೈ' ಒಳಜಗಳ ಸ್ಫೋಟ ಜಬ್ಬಾರ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಬಳಿಕ ಕಾಂಗ್ರೆಸ್‌ನ ಮುಸ್ಲಿಂ ಸಮುದಾಯದ ನಾಯಕರ ನಡುವಿನ ಭಿನ್ನಮತ ಸ್ಫೋಟಗೊಂಡಿದೆ. ಈ ಬೆನ್ನಲ್ಲೇ, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿರುವ ಸಂಗತಿ ಬಹಿರಂಗಗೊಂಡಿದೆ.

ಅಬ್ದುಲ್ ಜಬ್ಬಾರ್

ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಸಿಗದ ಕಾರಣಕ್ಕೆ ಕಾಂಗ್ರೆಸ್‌ನ ಕೆಲವು ಪ್ರಭಾವಿ ಮುಸ್ಲಿಂ ನಾಯಕರು ಪ್ರಚಾರದಿಂದ ದೂರ ಉಳಿದಿದ್ದರು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಕೊನೆಗಳಿಗೆಯಲ್ಲಿ ದಾವಣಗೆರೆಯಲ್ಲಿ ಪ್ರಚಾರ ನಡೆಸಿದ್ದರು. ಹಾಗಿದ್ದರೂ, ಜಮೀರ್ ಅಹಮದ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಹಾಗೂ ಪರಿಷತ್ ಸದಸ್ಯರೂ ಆಗಿರುವ ಅಬ್ದುಲ್ ಜಬ್ಬಾರ್ ಅವರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಲಿಲ್ಲ ಎಂಬ ದೂರು ವರಿಷ್ಠರಿಗೆ ಸಲ್ಲಿಕೆಯಾಗಿತ್ತು. ಪಕ್ಷದ ನಾಯಕರ ಜತೆ ಸಮಾಲೋಚಿಸಿದ್ದ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ತ ಅವರು ಹೈಕಮಾಂಡ್‌ಗೆ ಈ ಬಗ್ಗೆ ವರದಿ ನೀಡಿದ್ದಾರೆ ಎಂದು ಗೊತ್ತಾಗಿದೆ.

ಗುರುವಾರ ಸುದ್ದಿಗೋಷ್ಠಿ ನಡೆಸಿದ್ದ ವಿಧಾನಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ 'ಪಕ್ಷದ ಅಭ್ಯರ್ಥಿ ಸೋಲಿಗೆ ತಮ್ಮ ಸಮುದಾಯದ ಕೆಲವು ಹಿರಿಯ ನಾಯಕರು ಷಡ್ಯಂತ್ರ ನಡೆಸಿದ್ದಾರೆ' ಎಂದು ದೂರಿದ್ದರು.

▶ 7

ಎಸ್ಸೆಸ್ಸೆಲ್ಸಿ ಪರೀಕ್ಷೆ: ಕನ್ನಡ 'ತೇರ್ಗಡೆ'ಗೆ 16 ಶಿಫಾರಸು

● ವರುಣ ಹೆಗಡೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಕನ್ನಡ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿರುವ ಬಗ್ಗೆ ಸಂಶೋಧನಾತ್ಮಕ ವರದಿ ಸಿದ್ಧಪಡಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಭಾಷೆಯಲ್ಲಿ ಎಲ್ಲ ವಿದ್ಯಾರ್ಥಿಗಳು ತೇರ್ಗಡೆಯಾಗುವಂತಾಗಲು ವಿದ್ಯಾರ್ಥಿ ವೇತನದ ಪ್ರೋತ್ಸಾಹ, ಭಾಷಾ ಕಲಿಕೆಯ ಬಗ್ಗೆ ನಿರಂತರ ಮೌಲ್ಯಮಾಪನ ಸೇರಿದಂತೆ 16 ಶಿಫಾರಸುಗಳನ್ನು ಮಾಡಿದೆ.

2024–25ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗಿದ್ದ 8.40 ಲಕ್ಷ ವಿದ್ಯಾರ್ಥಿಗಳಲ್ಲಿ, 1.65 ಲಕ್ಷ ಮಕ್ಕಳು ಕನ್ನಡ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರು. ಶೇ 22ರಷ್ಟು ಮಕ್ಕಳು ತೇರ್ಗಡೆಯಾಗಿರಲಿಲ್ಲ. ರಾಜ್ಯಭಾಷೆಯಾದ ಕನ್ನಡದಲ್ಲಿಯೇ ಇಷ್ಟೊಂದು ವಿದ್ಯಾರ್ಥಿಗಳು ಉತ್ತೀರ್ಣರಾಗದೇ ಇರುವುದು ಕನ್ನಡ ಭಾಷಾ ಶಿಕ್ಷಣದ ಗುಣಮಟ್ಟದ ಬಗ್ಗೆ ಚರ್ಚೆಗೆ ಎಡೆಮಾಡಿಕೊಟ್ಟಿತ್ತು. ಹೀಗಾಗಿ, ಇದಕ್ಕೆ ಕಾರಣ ತಿಳಿಯಲು 2025ರ ಜುಲೈನಲ್ಲಿ ನಡೆದ ಪ್ರಾಧಿಕಾರದ ಸರ್ವ ಸದಸ್ಯರ ಸಭೆಯಲ್ಲಿ ಎಂಟು ಶಿಕ್ಷಕರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಪ್ರಾಧಿಕಾರದ ಸದಸ್ಯರೂ ಆಗಿರುವ ಶಿಕ್ಷಣತಜ್ಞ ವಿ.ಪಿ. ನಿರಂಜನಾರಾಧ್ಯ ಅವರ ಮಾರ್ಗದರ್ಶನದಲ್ಲಿ ವರದಿ ತಯಾರಿಸಿದೆ.

▶ 7

'ಮಾತೃಭಾಷೆಯ ಕುಸಿತದ ಸಂಕೇತ'

'ಕರ್ನಾಟಕದಲ್ಲಿ ತಾಯ್ನುಡಿಯಲ್ಲಿಯೇ ಮಕ್ಕಳು ಅನುತ್ತೀರ್ಣರಾಗುತ್ತಿರುವುದು ಆಘಾತವನ್ನುಂಟು ಮಾಡಿದೆ. ಅಂಕಿ–ಅಂಶಗಳು ಶಿಕ್ಷಣ ಕ್ಷೇತ್ರದಲ್ಲಿ ಮಾತೃಭಾಷೆಗಳು ಕುಸಿಯುತ್ತಿರುವುದನ್ನು ಸಂಕೇತಿಸುತ್ತದೆ. ಆದ್ದರಿಂದ ಪ್ರಾಧಿಕಾರವು ತನ್ನ ಇತಿಮಿತಿಯಲ್ಲಿ ವರದಿ ಸಿದ್ಧಪಡಿಸಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ತಿಳಿಸಿದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಭೂಮಿಗೆ ಮರಳಿದ ಗಗನಯಾನಿಗಳು

ವಾಷಿಂಗ್ಟನ್ (ಪಿಟಿಐ): ನಾಸಾದ ಐತಿಹಾಸಿಕ ಚಂದ್ರಯಾನ ಯೋಜನೆ 'ಆರ್ಟೆಮಿಸ್–2' ಅನ್ನು ಪೂರ್ಣಗೊಳಿಸಿದ ನಾಲ್ವರು ಗಗನಯಾನಿಗಳು ಭೂಮಿಗೆ ಮರಳಿದ್ದಾರೆ. ಅವರನ್ನು ಹೊತ್ತಿದ್ದ ಗಗನನೌಕೆಯು ಪೆಸಿಫಿಕ್ ಸಾಗರದಲ್ಲಿ ಇಳಿದಿದೆ.

1972ರಲ್ಲಿ ಅಪೋಲೊ–17 ಯೋಜನೆ ಬಳಿಕ ನಾಸಾ ನಡೆಸಿದ ಮೊದಲ ಚಂದ್ರಯಾನ ಇದಾಗಿದೆ. 50 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಚಂದ್ರನನ್ನು ತೀರಾ ಹತ್ತಿರದಿಂದ ನೋಡುವ ಮೂಲಕ ಈ ಗಗನಯಾನಿಗಳು ದಾಖಲೆ ಬರೆದಿದ್ದಾರೆ.

▶ 4A



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬೆಂಅಪ್ರಾ/ಕಾಪಾಅ/ಉತ್ತರ/ಟೆಂಡರ್/42/2026–27 ದಿ: 10.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ)

ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು, ಸಿಪಿಡಬ್ಲೂಡಿ/ಕೆಪಿಡಬ್ಲೂಡಿ/ ರೈಲ್ವೇ/ಎಂಇಎಸ್‌ನಲ್ಲಿ ನೋಂದಾಯಿತ ಅಥವಾ ಯಾವುದೇ ರಾಜ್ಯ ಸರ್ಕಾರದ ಏಜೆನ್ಸಿಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ **"ಅರ್ಕಾವತಿ ಬಡಾವಣೆ, ಸಂಪಿಗೆಹಳ್ಳಿ ಗ್ರಾಮದ ಸರ್ವೇ ನಂ. 37 ರಲ್ಲಿರುವ ಜಿ.ಟಿ.ಎಸ್. ಟವರ್‌ಗೆ ಚೈನ್ ಲಿಂಕ್ ಬೇಲಿ ಒದಗಿಸುವುದು ಮತ್ತು ಅಳವಡಿಸುವುದು"** ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 62.00 ಲಕ್ಷಗಳು.** ಇಎಂಡಿ: **ಕೆಪಿಪಿ ಪೋರ್ಟಲ್‌ನಲ್ಲಿ ನೋಡುವುದು.** ಪೂರ್ಣಗೊಳಿಸುವ ಅವಧಿ: **06 ತಿಂಗಳು.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.04.2026, 16.00 ಗಂಟೆ ವರೆಗೆ.** ಹೆಚ್ಚಿನ ವಿವರಗಳಿಗೆ ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ 080–4601 0000 /6894 8777 ಸಂಪರ್ಕಿಸುವುದು.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬೆಂ.ಅ.ಪ್ರಾ. ಬೆಂಗಳೂರು

ಲಿಂಗತ್ವ ಅಲ್ಪಸಂಖ್ಯಾತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯನ್ನು ಹಿಂಪಡೆಯಬೇಕು ಹಾಗೂ ಸಮಾನತೆ ಕಾಪಾಡಿ ಮಾನವ ಹಕ್ಕುಗಳನ್ನು ಗೌರವಿಸುವ ನೂತನ ಕಾಯ್ದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ರಾಜ್ಯ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಸಮುದಾಯದ ಪ್ರತಿನಿಧಿಗಳೊಂದಿಗೆ ಚರ್ಚೆ ಇಲ್ಲದೇ ಸರ್ವಾಧಿಕಾರಿ ಧೋರಣೆ ಮೂಲಕ ಕೇಂದ್ರ ಸರ್ಕಾರ ತಿದ್ದುಪಡಿ ಕಾಯ್ದೆ ಜಾರಿಗೊಳಿಸಲು ಮುಂದಾಗಿದೆ. ಇದು ಲಿಂಗತ್ವ ಅಲ್ಪಸಂಖ್ಯಾತರ ರಕ್ಷಣೆ ಬದಲಾಗಿ ಸಂವಿಧಾನಾತ್ಮಕವಾದ ಹಕ್ಕುಗಳನ್ನು ಉಲ್ಲಂಘಿಸುವ ಕಾಯ್ದೆ ಎಂದರು.

ರಾಜ್ಯ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು – ಪ್ರಜಾವಾಣಿ ಚಿತ್ರ

ಚಿಂತಕ ಶಿವಸುಂದರ್ ಮಾತನಾಡಿ, 'ಸಂವಿಧಾನದ ಪೀಠಿಕೆಯಲ್ಲಿ ಲಿಂಗತ್ವ ಆಧಾರಿತ ಪದ ಬಳಕೆಯಾಗಿಲ್ಲ. ಬದಲಾಗಿ ಸಮಾನತೆ ಹಕ್ಕನ್ನು ಪ್ರತಿಪಾದಿಸಲಾಗಿದೆ. ಆದರೆ, ಕೇಂದ್ರವು ಲಿಂಗತ್ವ ಅಲ್ಪಸಂಖ್ಯಾತರ ರಕ್ಷಣೆ ಹೆಸರಿನಲ್ಲಿ ಜಾರಿಗೊಳಿಸಲು ಮುಂದಾಗಿರುವ ಕಾಯ್ದೆಯಲ್ಲಿ ಸಂಪೂರ್ಣ ವ್ಯಕ್ತಿಯ ಗೌರವ, ಖಾಸಗಿ ಹಕ್ಕುಗಳ ಉಲ್ಲಂಘನೆಯಾಗಲಿದೆ' ಎಂದರು.

ಲಿಂಗತ್ವ ಅಲ್ಪಸಂಖ್ಯಾತ ಪ್ರತಿನಿಧಿ ಮಲ್ಲುಕುಂಬಾರ ಮಾತನಾಡಿ, 'ಲಿಂಗತ್ವ ಅಲ್ಪಸಂಖ್ಯಾತರು 25 ವರ್ಷಗಳಿಂದಲೂ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. 2019 ಕಾಯ್ದೆಯನ್ನು ಪೂರ್ವಭಾವಿ ಚರ್ಚೆಗಳಿಲ್ಲದೇ ಜಾರಿಗೊಳಿಸಲು ಮುಂದಾಗಿರುವುದು ಸರಿಯಲ್ಲ' ಎಂದರು.

ಪ್ರತಿಭಟನೆ ಬೆಂಬಲಿಸಿ ಸಾಮಾಜಿಕ ಹೋರಾಟಗಾರ ನಟ ಚೇತನ್, ಸುಂದರೇಶ್, ನೂರ್ ಶ್ರೀಧರ್, ಮುಖಂಡರಾದ ಆಶಮ್ಮ ಮಾಲಕ್, ಜ್ಯೋತಿ ಪಾಲ್ಗೊಂಡಿದ್ದರು.

ಐದು ಹಸು ಸಾವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಇಮ್ರಾನ್

ಬೆಂಗಳೂರು: ದನದ ಕೊಟ್ಟಿಗೆಗೆ ಬೆಂಕಿ ಇಟ್ಟು ಐದು ಹಸುಗಳ ಸಜೀವ ದಹನಕ್ಕೆ ಕಾರಣನಾಗಿದ್ದ ಆರೋಪಿಯನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ.ಹಳ್ಳಿ ನಿವಾಸಿ ಮೊಹಮ್ಮದ್ ಇಮ್ರಾನ್ (49) ಬಂಧಿತ. ಶಾಂಪುರ ರಸ್ತೆಯಲ್ಲಿನ ಪ್ಲೈವುಡ್ ಅಂಗಡಿಯಲ್ಲಿ ಮಂಗಳವಾರ ಬೆಳಗಿನ ಜಾವ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಪಕ್ಕದಲ್ಲಿದ್ದ ಶ್ರೀನಿವಾಸ್ ಎಂಬುವರಿಗೆ ಸೇರಿದ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಐದು ಹಸುಗಳು ಸಜೀವ ದಹನವಾಗಿದ್ದವು.

ಅಲ್ಲದೇ ಎರಡು ಪ್ಲೈವುಡ್ ಅಂಗಡಿಗಳು, ಟಾಟಾ ಏಸ್ ಮತ್ತು ನಾಲ್ಕು ದ್ವಿಚಕ್ರ ವಾಹನಗಳು ಸುಟ್ಟು ಹೋಗಿದ್ದವು. ಅಂದಾಜು ₹15.20 ಲಕ್ಷ ನಷ್ಟವಾಗಿತ್ತು. ಇದು ಬೆಂಕಿ ಅವಘಡ ಆಕಸ್ಮಿಕವಲ್ಲ, ಬದಲಾಗಿ ಕಿಡಿಗೇಡಿಗಳ ಕೃತ್ಯ ಎಂದು ದೂರು ದಾಖಲಾಗಿತ್ತು.

ಮೊಹಮ್ಮದ್ ಬೆಂಕಿ ಹಚ್ಚಿ ಬಂದಿರುವ ದೃಶ್ಯ ಪಕ್ಕದ ಮಳಿಗೆಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. 'ರಸ್ತೆಯಲ್ಲಿ ನಡೆದು ಹೋಗುವಾಗ ನಾಯಿಗಳು ಅಟ್ಟಾಡಿಸಿದ್ದವು. ಅವುಗಳನ್ನು ಹೆದರಿಸಲು ರಸ್ತೆಯ ಬದಿಯಲ್ಲಿದ್ದ ಕಸಕ್ಕೆ ಬೆಂಕಿ ಹಚ್ಚಿದೆ. ಅದು ಕೊಟ್ಟಿಗೆಗೆ ತಗುಲಿ ಹಸುಗಳು ಸುಟ್ಟು ಹೋಗಿದ್ದು, ಅವುಗಳನ್ನು ಕೊಲ್ಲುವ ಉದ್ದೇಶ ಇರಲಿಲ್ಲ' ಎಂದು ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ' ಎಂದು ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.

15ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಸರೋಜಮ್ಮ
(ದಿ॥ ಗುತ್ತಲಗೌಡರ ಧರ್ಮಪತ್ನಿ, ಮಾಜಿ ಅಧ್ಯಕ್ಷರು, ಒಕ್ಕಲಿಗರ ಸಂಘ)
ಜನನ: 15.06.1928 | ಮರಣ: 12.04.2011
ನೀವು ನಮ್ಮನ್ನಗಲಿ 15 ವರ್ಷವಾದರು ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುವ.....
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಕುಟುಂಬವರ್ಗದವರು

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಇ–ಮೇಲ್: smm.rwfblr@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:
ಆರ್ ಡಬ್ಲ್ಯೂಎಫ್ /ಎಸ್/01/2026–27
ದಿನಾಂಕ: 08/04/2026

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ತಯಾರಕರಿಂದ ಈ ಕೆಳಕಂಡ ವಸ್ತುಗಳನ್ನು ಪೂರೈಸಲು ಎಲೆಕ್ಟ್ರಾನಿಕ್ ಓಪನ್ ಟೆಂಡರ್ ಗಳನ್ನು www.ireps.gov.in ಮೂಲಕ ಆಹ್ವಾನಿಸುತ್ತಿದ್ದಾರೆ. ಟೆಂಡರ್ ವಿವರಗಳು: **ಕ್ರಮ ಸಂಖ್ಯೆ:** 1, **ಟೆಂಡರ್ ಸಂಖ್ಯೆ:** ಪಿ2265149, **ವಸ್ತುವಿನ ವಿವರಣೆ:** ತಾಂತ್ರಿಕ ವಿಶೇಷಣ ಸಂಖ್ಯೆ ಆರ್ ಡಬ್ಲ್ಯೂಎಫ್/ಎಂ/ಎಂ&ಪಿ/ ಎಎಂಎಸ್ /2025/10ಟಿ ಗೋಲಿಯಾತ್ ಕ್ರೇನ್‌ಗಳ ಅನ್ವಯ, ರೆಡಿ ಆಕ್ಸಲ್ ಸಂಗ್ರಹ ಮತ್ತು ಡಿಸ್ಪ್ಯಾಚ್ ಸಂಕೀರ್ಣಕ್ಕಾಗಿ 10 ಟನ್ ಗೋಲಿಯಾತ್ ಕ್ರೇನ್‌ಗಳ ಪೂರೈಕೆ, ಅಳವಡಿಕೆ ಮತ್ತು ಕಾರ್ಯಾರಂಭ, **ಪ್ರಮಾಣ:** 2 ಸಂಖ್ಯೆಗಳು, **ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:** 11/05/2026, ಮಧ್ಯಾಹ್ನ 2:00 ಗಂಟೆಗೆ, **ಪೂರ್ವ–ಬಿಡ್ ಸಭೆಯ ದಿನಾಂಕ ಮತ್ತು ಸಮಯ:** 23/04/2026, ಮಧ್ಯಾಹ್ನ 3:00 ಗಂಟೆಗೆ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿಗಳನ್ನು ವಿವರಗಳನ್ನು www.rwf.indianrailways.gov.in ಅಥವಾ www.ireps.gov.in ವೆಬ್ ಸೈಟ್ ಗಳಲ್ಲಿ ನೋಡಬಹುದು. ಟೆಂಡರ್ ದಸ್ತಾವೇಜು ಮತ್ತು ತಿದ್ದುಪಡಿ ಪೋರ್ಟಲ್ ನಲ್ಲಿ ಮಾತ್ರ ಲಭ್ಯವಿರುತ್ತದೆ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಬೈಕ್ ಸವಾರ ಸಾವು

ಬೆಂಗಳೂರು: ಸಿಟಿ ಮಾರುಕಟ್ಟೆ ಮೇಲ್ಸೇತುವೆಯಲ್ಲಿ ಶುಕ್ರವಾರ ರಾತ್ರಿ ಚಲಿಸುತ್ತಿದ್ದ ಲಾರಿಗೆ ಬೈಕ್ ತಗುಲಿ, ಸವಾರ, ಕೆ.ಪಿ. ಅಗ್ರಹಾರ ನಿವಾಸಿ ರವಿಕುಮಾರ್ (45) ಅವರು ಮೃತಪಟ್ಟಿದ್ದಾರೆ.

ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ರವಿಕುಮಾರ್ ಅವರ ಬೈಕ್ ಮೈಸೂರು ರಸ್ತೆ ಕಡೆ ಹೋಗುತ್ತಿದ್ದ ಲಾರಿಗೆ ತಾಗಿದೆ. ಕೆಳಗೆ ಬಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಬಿಟ್ಟು ಪರಾರಿಯಾಗಿರುವ ಚಾಲಕನ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಸಿಟಿ ಮಾರುಕಟ್ಟೆ ಸಂಚಾರ ಠಾಣೆ ಪೊಲೀಸರು ಹೇಳಿದರು.

ನಿಧನ ವಾರ್ತೆ

ತ್ಯಾಗರಾಜು

ಬೆಂಗಳೂರು: ಯಶವಂತಪುರದ ನಿವಾಸಿ, ಪತ್ರಿಕಾ ವಿತರಕ ತ್ಯಾಗರಾಜು (53) ಅವರು ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ತ್ಯಾಗರಾಜು ಅವರು 35 ವರ್ಷಗಳಿಂದ ದಿನಪತ್ರಿಕೆಗಳನ್ನು ವಿತರಣೆ ಮಾಡುವ ಕೆಲಸ ಮಾಡುತ್ತಿದ್ದರು.

ಡಬಲ್ ಡೆಕರ್ ರಸ್ತೆ: ಶುರುವಾಗದ ಸಂಚಾರ

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಕೇಂದ್ರ ರೇಷ್ಮೆ ಮಂಡಳಿ– ರಾಗಿಗುಡ್ಡ ಮೇಲ್ಸೇತುವೆ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ನಿರ್ಮಾಣಗೊಂಡಿರುವ ರಾಗಿಗುಡ್ಡ– ಕೇಂದ್ರ ರೇಷ್ಮೆ ಮಂಡಳಿವರೆಗಿನ ಡಬಲ್ ಡೆಕರ್ ಉದ್ಘಾಟನೆಗೊಂಡಿದ್ದರೂ, ಇನ್ನೊಂದು ಬದಿಯ (ಕೇಂದ್ರ ರೇಷ್ಮೆ ಮಂಡಳಿ– ರಾಗಿಗುಡ್ಡ) 'ಡಬಲ್ ಡೆಕರ್' ಎರಡು ವರ್ಷವಾದರೂ ಉದ್ಘಾಟನೆಯಾಗಿಲ್ಲ.

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೋಡ್ ಕಂ ರೈಲ್ (ಡಬಲ್ ಡೆಕರ್) ಮೇಲ್ಸೇತುವೆ ಯೋಜನೆಯು ₹449 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಅದರಲ್ಲಿ ರಾಗಿಗುಡ್ಡ ದಿಂದ ಕೇಂದ್ರ ರೇಷ್ಮೆ ಮಂಡಳಿವರೆಗಿನ ಕಾಮಗಾರಿಯು ಎರಡು ವರ್ಷಗಳ ಹಿಂದೆ ಪೂರ್ಣಗೊಂಡಿತ್ತು. 2024ರ ಜೂನ್‌ನಲ್ಲಿ ಒಂದು ಬದಿಯ ವಾಹನ ಸಂಚಾರ ಆರಂಭವಾಗಿತ್ತು.

ರಾಗಿಗುಡ್ಡದಿಂದ ಎಚ್‌ಎಸ್‌ಆರ್ ಲೇಔಟ್ ಮತ್ತು ಹೊಸೂರು ರಸ್ತೆಯನ್ನು ತಲುಪಲು ಈ ಮೇಲ್ಸೇತುವೆಯಲ್ಲಿ ಸಿಗ್ನಲ್‌ಗಳು ಇಲ್ಲದೇ ಇರುವುದರಿಂದ ವಾಹನಗಳು ಸುಗಮವಾಗಿ ಸಂಚರಿಸಲು ಸಾಧ್ಯವಾಗಿದೆ. ಕೆ.ಆರ್.ಪುರ ಮತ್ತು ಹೊಸೂರು ರಸ್ತೆ ಕಡೆಗೆ ಹೋಗುವ ಪ್ರಯಾಣಿಕರಿಗೆ ಅನುಕೂಲವಾಗಿದೆ. ವಾಹನಗಳು ಒಮ್ಮೆ ಮೇಲ್ಸೇತುವೆ ಏರಿದರೆ 3.3 ಕಿ.ಮೀ. ಮಧ್ಯೆ ಎಲ್ಲಿಯೂ ಇಳಿಯಲು ಅವಕಾಶವಿಲ್ಲ. ತಿರುಗಿ ಬರಲು ಮೂರು ಯು ಟರ್ನ್‌ಗಳಿವೆ.

3.36 ಕಿ.ಮೀ ಉದ್ದದ ರಸ್ತೆ ಮೇಲ್ಸೇತುವೆಯಲ್ಲಿ ರ‍್ಯಾಂಪ್ ಎ. 1.10 ಕಿ.ಮೀ, ರ‍್ಯಾಂಪ್ ಬಿ. 280 ಮೀಟರ್, ರ‍್ಯಾಂಪ್ ಸಿ. 490 ಮೀಟರ್, ರ‍್ಯಾಂಪ್ ಡಿ. 1.14 ಕಿ.ಮೀ. ಹಾಗೂ ರ‍್ಯಾಂಪ್ ಇ. 230 ಮೀಟರ್ ಉದ್ದವಿದೆ. ರಾಗಿಗುಡ್ಡದಿಂದ ರೇಷ್ಮೆ ಮಂಡಳಿವರೆಗೆ ಲೂಪ್ ಮತ್ತು ಇಳಿಜಾರುಗಳೊಂದಿಗೆ ಮೇಲ್ಸೇತುವೆ 2024ರಲ್ಲಿ ನಿರ್ಮಾಣವಾಗಿತ್ತು. ರೇಷ್ಮೆ ಮಂಡಳಿಯಿಂದ ರಾಗಿಗುಡ್ಡ ಕಡೆಗೆ 1.37 ಕಿ.ಮೀ. ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಈ ರಸ್ತೆಯನ್ನು 2025ರ ಜೂನ್ ಒಳಗೆ ಲೋಕಾರ್ಪಣೆ ಮಾಡುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿತ್ತು.

ಶೀಘ್ರ ಉದ್ಘಾಟನೆ: '42 ಮೀಟರ್ ಸ್ಟೀಲ್ ಗರ್ಡರ್ ಅಳವಡಿಸಿದ್ದರಿಂದ ಇಳಿಜಾರುಗಳು ವಿಳಂಬವಾಗಿದ್ದವು ಆದರೆ ಕೆಲಸ ಇತ್ತೀಚೆಗೆ ಪೂರ್ಣಗೊಂಡಿದೆ. ಕಾಮಗಾರಿ ಪೂರ್ಣಗೊಂಡಿದ್ದು, ಸಂಚಾರ ಪೊಲೀಸ್ ಅಧಿಕಾರಿಗಳು, ಬಿಎಂಆರ್‌ಸಿಎಲ್ ಅಧಿಕಾರಿಗಳು ವಾರದ ಹಿಂದೆ ಪರಿಶೀಲನೆ ನಡೆಸಿದ್ದಾರೆ. ರಾಜ್ಯ ಮತ್ತು ಕೇಂದ್ರ ಸಚಿವರೊಂದಿಗೆ ಸಮಾಲೋಚನೆ ನಡೆಸಿ ಉದ್ಘಾಟನೆಗೆ ಶೀಘ್ರದಲ್ಲೇ ದಿನಾಂಕ ನಿಗದಿಪಡಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಅಂಕಿ ಅಂಶಗಳು

3.3 ಕಿ.ಮೀ.
ಡಬಲ್ ಡೆಕರ್ ಉದ್ದ

50 ಸಾವಿರ
ನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳ ಅಂದಾಜು ಸಂಖ್ಯೆ

₹449 ಕೋಟಿ
ಡಬಲ್ ಡೆಕರ್ ಯೋಜನೆ ವೆಚ್ಚ

8 ಮೀಟರ್
ಮೇಲ್ಸೇತುವೆಯ ಎತ್ತರ

16 ಮೀಟರ್
ಮೆಟ್ರೊ ಹಳದಿ ಮಾರ್ಗದ ಎತ್ತರ


ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಕೇಂದ್ರ ರೇಷ್ಮೆ ಮಂಡಳಿಯಿಂದ ರಾಗಿಗುಡ್ಡವರೆಗಿನ 'ಡಬಲ್ ಡೆಕರ್' ಮೇಲ್ಸೇತುವೆ

ಕಡಿಮೆಯಾಗಲಿರುವ ವಾಹನದಟ್ಟಣೆ

'ವಿಪರೀತ ವಾಹನದಟ್ಟಣೆಯ ರಸ್ತೆಗಳಲ್ಲಿ ರಾಗಿಗುಡ್ಡ–ರೇಷ್ಮೆ ಮಂಡಳಿ ರಸ್ತೆಯೂ ಒಂದಾಗಿದೆ. ಎಚ್‌ಎಸ್‌ಆರ್ ಲೇಔಟ್–ಜಯದೇವ ರಸ್ತೆಯಲ್ಲಿ ಬೆಳಿಗ್ಗೆ ಮತ್ತು ಸಂಜೆಯ ದಟ್ಟಣೆ ವೇಳೆ ವಾಹನಗಳು ಆಮೆ ವೇಗದಲ್ಲಿ ಸಾಗುತ್ತಿವೆ. ಡಬಲ್ ಡೆಕರ್ ರಸ್ತೆ ಈಗ ಒಂದು ಭಾಗವಷ್ಟೇ ಸಂಚಾರಕ್ಕೆ ತೆರೆದುಕೊಂಡಿದ್ದು, ಇನ್ನೊಂದು ಭಾಗವೂ ತೆರೆದುಕೊಂಡರೆ ದಟ್ಟಣೆ ಕಡಿಮೆಯಾಗಲಿದೆ' ಎಂದು ಐಟಿ ಉದ್ಯೋಗಿ ಬಾಲಾಜಿ ಅಭಿಪ್ರಾಯಪಟ್ಟರು.

ರಥೋತ್ಸವ: ಸಂಚಾರ ಮಾರ್ಪಾಡು

ಬೆಂಗಳೂರು: ಬಾಣಸವಾಡಿಯ ಆಂಜನೇಯಸ್ವಾಮಿ ದೇವಸ್ಥಾನದ ವತಿಯಿಂದ ಕೋದಂಡರಾಮಸ್ವಾಮಿ ದೇವರ ಬ್ರಹ್ಮರಥೋತ್ಸವ ನಡೆಯುವುದರಿಂದ ಏಪ್ರಿಲ್ 12 ರಿಂದ 15ರ ವರೆಗೆ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ. ದೊಡ್ಡ ಬಾಣಸವಾಡಿ ಮುಖ್ಯರಸ್ತೆ ಯಲ್ಲಿ (ಮುಕುಟಮ್ಮ ದೇವಸ್ಥಾನ ಬಸ್ ನಿಲ್ದಾಣದಿಂದ ಸಿಲ್ಕ್ ಫ್ಯಾಕ್ಟರಿ ಬಸ್ ನಿಲ್ದಾಣದವರೆಗೆ) ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ರಾಮಮೂರ್ತಿ ನಗರ ಕಡೆಯಿಂದ ಬೆಂಗಳೂರು ನಗರ ಕಡೆಗೆ ಸಂಚರಿಸುವ ವಾಹನ ಸವಾರರು ದೊಡ್ಡಬಾಣಸವಾಡಿ ಮುಖ್ಯ ರಸ್ತೆಯ ಮುಕುಟಮ್ಮ ದೇವಸ್ಥಾನದ ಬಳಿ ಬಲ ತಿರುವು ಪಡೆದು ಹೊರಮಾವು ಜಂಕ್ಷನ್ ತಲುಪಬೇಕು. ಅಲ್ಲಿಂದ 100 ಅಡಿ ರಸ್ತೆ ಕಡೆಗೆ ಎಡ ತಿರುವು ಪಡೆದು 100 ಅಡಿ ರಸ್ತೆ ಮೂಲಕ ವೇಮಣ್ಣ ಜಂಕ್ಷನ್ ತಲುಪಬೇಕು. ನಂತರ ಬಾಣಸವಾಡಿ ಮುಖ್ಯರಸ್ತೆ ಕಡೆಗೆ ಬಲ ತಿರುವು ಪಡೆದುಕೊಂಡು ನಗರ ಕಡೆಗೆ ಸಂಚರಿಸಬಹುದು.

ಬಾಣಸವಾಡಿ ಮುಖ್ಯರಸ್ತೆ ಮೂಲಕ ರಾಮಮೂರ್ತಿ ನಗರ ಹಾಗೂ ಕೆ.ಆರ್. ಪುರ ಕಡೆಗೆ ಸಂಚರಿಸುವ ವಾಹನ ಸವಾರರು ಬಾಣಸವಾಡಿ ಮುಖ್ಯ ರಸ್ತೆ ಮೂಲಕ ವೇಮಣ್ಣ ಜಂಕ್ಷನ್ ತಲುಪಬೇಕು. ಅಲ್ಲಿಂದ ನೇರವಾಗಿ ಚಲಿಸಿ ಸ್ಟೀಲ್ ಫ್ಯಾಕ್ಟರಿ ಬಳಿ ಬಲ ತಿರುವು ಪಡೆದು ಭುವನಗಿರಿ ರಸ್ತೆ ಮೂಲಕ ರಾಮಮೂರ್ತಿ ನಗರ ಹೊರವರ್ತುಲ ರಸ್ತೆ ತಲುಪಿ ಮುಂದೆ ಸಾಗಬೇಕು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಿವಿಧ ಕಾಲೇಜುಗಳ ಪಿಯುಸಿ ಸಾಧಕರು

ಕೆ.ಆರ್.ಪುರ ಶ್ರೀ ವೆಂಕಟೇಶ್ವರ ಪಿಯು ಕಾಲೇಜು

ರಕ್ಷಾ ಎಸ್. 585 (ಶೇ 97.5)
ಆಯೇಷಾ ಸಿದ್ಧಿಕಿ ಆರ್. 585 (ಶೇ 97.5)
ಕವನಾ ರಾಜ್ ವೈ. 584 (ಶೇ 97.33)
ತಸ್ಬಿಯಾ ಅರ್ಝಾಂ 584 (ಶೇ 97.33)
ತೇಜಸ್ವಿನಿ ಟಿ. 583 (ಶೇ 97.17)
ಪ್ರಜ್ಞಾ ಜಿ.ಪಿ. 582 (ಶೇ 97)
ನಿಖಿಲ್ ಎಚ್ ಆರ್. 580 (ಶೇ 96.67)

ಪೂಜಾ ಆರ್. ವಾಣಿಜ್ಯ ಶೇ 97 ಜೆಎಸ್ ಪಿಯು ಕಾಲೇಜು, ಮಲ್ಲತ್ತಹಳ್ಳಿ
ಇಶಾನ್ ಬಿ.ಆರ್. 591 (ಶೇ 98.5) ಹಾವನೂರು ಸೌಂದರ್ಯ ಪಿಯು ಕಾಲೇಜು
ಟಿ.ಎ. ಪೂರ್ಣಶ್ರೀ ವಾಣಿಜ್ಯ ಶೇ 97.6 ಹರ್ಷ ಪಿಯು ಕಾಲೇಜು
ಹಿತೇಶ್ ಜಿ.ರಾಜ್ ಶೇ 97.5 ಹರ್ಷ ಪಿಯು ಕಾಲೇಜು

ಶ್ರೀ ದಕ್ಷ ಅಕಾಡೆಮಿ ಸಾಧನೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶ್ರೀ ದಕ್ಷ ಅಕಾಡೆಮಿಯು ಉತ್ತಮ ಫಲಿತಾಂಶವನ್ನು ಪಡೆದಿದೆ.

ಮೋಹನ್ ಕುಮಾರ್ 590 (ಶೇ 98.33), ಪವನ್ ಎಸ್. 590 (ಶೇ 98.33), ಗಂಗಾ ಎಂ. 589 (ಶೇ 98.16), ಹರ್ಷ ಎಸ್.ಬಿ. 588 (ಶೇ 98), ತೇಜಸ್ವಿನಿ ಎನ್. 588 (ಶೇ 98), ಭಾಗ್ಯಶ್ರೀ ಆರ್. 587 (ಶೇ 97.83), ದೀಕ್ಷಿತಾ ಎಂ.ಕೆ. 584 (ಶೇ 97.33), ವರುಣ ಬಿ.ಕೆ. 583 (ಶೇ 97.16), ಚಂದನ ಎನ್. 582 (ಶೇ 97) ಉತ್ತಮ ಅಂಕ ಪಡೆದಿದ್ದಾರೆ. ರಾಜ್ಯದಲ್ಲಿ 11ರ ಒಳಗೆ ನಾಲ್ವರು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. 95 ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ, 154 ವಿದ್ಯಾರ್ಥಿಗಳು ಶೇ 90ಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಮೋಹನ್ ಕುಮಾರ್ | ಪವನ್ ಎಸ್. | ಗಂಗಾ ಎಂ.

ಹರ್ಷ ಎಸ್.ಬಿ. | ತೇಜಸ್ವಿನಿ ಎನ್. | ಭಾಗ್ಯಶ್ರೀ ಆರ್. | ದೀಕ್ಷಿತಾ ಎಂ.ಕೆ. | ವರುಣ ಬಿ.ಕೆ. | ಚಂದನ ಎನ್.

ಸಿಎಂಆರ್ ನ್ಯಾಷನಲ್ ಪಿಯು ಕಾಲೇಜು

ಬೆಂಗಳೂರು: ನಗರದ ವಿವಿಧೆಡೆ ಇರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಎಚ್‌ಆರ್ ಬಿಆರ್ ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಶೇಖ್ ಮುಹಮ್ಮದ್ ಝೈದ್ ಶೇ 97.30, ವಿಜ್ಞಾನ ವಿಭಾಗದಲ್ಲಿ ದೀಪೇಶ್ ಆರ್. ಶೇ 97.5 ಅಂಕ ಪಡೆದಿದ್ದಾರೆ.

ನಗರದ ಐಟಿಪಿಎಲ್ ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಜೋನ್ನಾ ಮೇರಿ ಗ್ರೇಸನ್ ಶೇ 97.2, ವಿಜ್ಞಾನ ವಿಭಾಗದಲ್ಲಿ ಲಲಿತ್ ಸಾಗರ್ ವಿ., ಮತ್ತು ಎಸ್. ಆದಿತ್ಯ ಸುಬ್ರಹ್ಮಣ್ಯ ಶೇ 98.17 ಅಂಕ ಗಳಿಸಿದ್ದಾರೆ ಎಂದು ಸಿಎಂಆರ್ ಸಮೂಹ ಕಾಲೇಜುಗಳ ಪ್ರಾಂಶುಪಾಲರು ತಿಳಿಸಿದ್ದಾರೆ.

ಶೇಖ್ ಮುಹಮ್ಮದ್ ಝೈದ್

ದೀಪೇಶ್ ಆರ್. | ಜೋನ್ನಾ ಮೇರಿ ಗ್ರೇಸನ್ | ಲಲಿತ್ ಸಾಗರ್ ವಿ. | ಎಸ್. ಆದಿತ್ಯ

25ನೇ ವಿಟಿಯು ಯುವ ಜನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲೇಜು ದಿನಗಳಲ್ಲಿ ಸಿಗುವ ವೇದಿಕೆ ಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಪ್ರತಿಭೆಯನ್ನು ಪ್ರದರ್ಶಿಸಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು' ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಕುಲಪತಿ ಎಸ್. ವಿದ್ಯಾಶಂಕರ್ ಹೇಳಿದರು.

ವಿಟಿಯು ಮತ್ತು ಆಚಾರ್ಯ ತಾಂತ್ರಿಕ ಮಹಾವಿದ್ಯಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ 25ನೇ ವಿಟಿಯು ಯುವ ಜನೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ವಿಟಿಯು ಪಠ್ಯಕ್ರಮ ಮಾತ್ರವಲ್ಲ, ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲಿದೆ. ಇದು ದೇಶದಲ್ಲಿ ಹೆಚ್ಚು ಪ್ರಾಮುಖ್ಯವನ್ನು ಪಡೆದಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಾವು ಮೊದಲ ಸೆಮಿಸ್ಟರ್‌ನಿಂದಲೇ ಐಡಿಯಾ ಲ್ಯಾಬ್ ತಂದಿದ್ದೇವೆ. ಎಲ್ಲರೂ ಚೆನ್ನಾಗಿ ಓದಬೇಕು. ಶೇಕಡ 80ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗಬೇಕು ಎಂಬುದು ನಮ್ಮ ಆಶಯ' ಎಂದರು.

'ಈ ಯುವಜನೋತ್ಸವ ಸಾಂಸ್ಕೃತಿಕ ಮತ್ತು ತಂತ್ರಜ್ಞಾನ ಆಧಾರಿತ ಸ್ಪರ್ಧೆಗಳ ಹಬ್ಬ. ವಿಟಿಯು ವ್ಯಾಪ್ತಿಯಲ್ಲಿರುವ 220 ಎಂಜಿನಿಯರಿಂಗ್ ಕಾಲೇಜುಗಳಿಂದ 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ ಎಂದು ಮಾಹಿತಿ ನೀಡಿದರು. ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಎಚ್.ಆರ್. ಸುದರ್ಶನ ರೆಡ್ಡಿ, ಆಚಾರ್ಯ ವಿದ್ಯಾಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಬಿ.ಎಂ. ಭೂಷಣ್, ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಕೆ. ಮರಿಗೌಡ ಭಾಗವಹಿಸಿದ್ದರು.

ನಗರದಲ್ಲಿ ಇಂದು

88ನೇ ಶ್ರೀರಾಮನವಮಿ ಸಂಗೀತೋತ್ಸವ: ಬೆಳಿಗ್ಗೆ 8ಕ್ಕೆ ಶ್ರೀರಾಮನ ಪಟ್ಟಾಭಿಷೇಕ, ಸಂಜೆ 6ಕ್ಕೆ 'ಎಸ್‌ವಿಎನ್ ಗ್ಲೋಬಲ್ ಅವಾರ್ಡ್' ಪ್ರದಾನ: ಸ್ವೀಕರಿಸುವವರು: ಎನ್. ರಾಜಮ್, 7ರಿಂದ ಸಂಗೀತ ಕಛೇರಿ: ಪಿಟೀಲು ವಾದನ: ಎನ್. ರಾಜಮ್, ಸಂಗೀತಾ ಶಂಕರ್, ನಂದಿನಿ ಶಂಕರ್, ತಬಲಾ: ರವೀಂದ್ರ ಯಾವಗಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ.

ವಿಶ್ವ ಹೋಮಿಯೋಪಥಿ ದಿನ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ. ಲಕ್ಷ್ಮಿಕಾಂತನಂದ, ಸುನಿಲ್ ಪನ್ವರ್, ಅಧ್ಯಕ್ಷತೆ: ಡಾ. ವೀರಬ್ರಹ್ಮಚಾರಿ, ಆಯೋಜನೆ: ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್, ಸ್ಥಳ: ಎ.ವಿ. ರಾಮರಾವ್ ಸಭಾಂಗಣ, ಕೆಮಿಕಲ್ ಸೈನ್ಸಸ್ ಕಟ್ಟಡ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಸಿ.ವಿ. ರಾಮನ್ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 8.30ರಿಂದ

ಬಹು-ನಗರ ನೃತ್ಯೋತ್ಸವ: ಆಯೋಜನೆ: ಸಂಸ್ಕೃತಿಕಿ, ಕಥಾನೃತ್ಯ ಆಂಗನ್, ಸ್ಥಳ: ಬಸವಭವನ, ಬಸವೇಶ್ವರ ವೃತ್ತ, ಬೆಳಿಗ್ಗೆ 9.30ರಿಂದ

'ನಮ್ಮ ಕುಲಶಿಲ್ಪಿಗಳು' ಉಪನ್ಯಾಸ ಮಾಲೆ ಉದ್ಘಾಟನೆ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಅತಿಥಿಗಳು: ಜಾಣಗೆರೆ ವೆಂಕಟರಾಮಯ್ಯ, ಜಯರಾಮ್ ರಾಯಪುರ, ಟಿ. ತಿಮ್ಮೇಗೌಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಗೌಡತಿಯರ ಸೇನೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಡಾ. ರಾಜಕುಮಾರ್ ಸ್ಮರಣೆ, ತಿಂಗಳ ಕವಿಗೋಷ್ಠಿ, ಗೀತ-ಗಾಯನ, ಪ್ರಶಸ್ತಿ ಪ್ರದಾನ: ವಿ. ಮಲ್ಲಿಕಾರ್ಜುನಯ್ಯ, ಅಧ್ಯಕ್ಷತೆ: ವಿ. ರೇಣುಕಾಪ್ರಸನ್ನ, ಉಪಸ್ಥಿತಿ: ಬಿ. ಶೃಂಗೇಶ್ವರ್, ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಸ್ವೀಕರಿಸುವವರು: ಕುಣಿಗಲ್ ರಾಮಚಂದ್ರ ಟಿ., ಬಿ.ಎನ್. ವಾಸುದೇವ ರಾಜು, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ರಾಜಕುಮಾರ್

ಡಾ. ರಾಜಕುಮಾರ್ ಅವರ ಆತ್ಮಚರಿತ್ರೆ 'ಕಥಾನಾಯಕನ ಕಥೆ' ಬಿಡುಗಡೆ, ಡಾ. ರಾಜಕುಮಾರ್ ಅವರ 'ಕಲಾಬದುಕಿನ ಛಾಯಾಚಿತ್ರಗಳ ಗ್ಯಾಲರಿ' ಉದ್ಘಾಟನೆ: ಶಿವರಾಜಕುಮಾರ್, ಗೀತಾ ಶಿವರಾಜಕುಮಾರ್, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಗ್ಯಾಲರಿ ಉದ್ಘಾಟನೆ: ಬಿ. ರಮೇಶ್, ಅತಿಥಿಗಳು: ಜಯಮಾಲಾ, ಭಾರ್ಗವ, ಅಧ್ಯಕ್ಷತೆ: ಡಿ.ವಿ. ಪರಮಶಿವಮೂರ್ತಿ, ಆಯೋಜನೆ: ನಾಡೋಜ ಡಾ. ರಾಜಕುಮಾರ್ ಅಧ್ಯಯನ ಪೀಠ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

'ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮ'ದ ಅಂಗವಾಗಿ ಅಂಚೆಚೀಟಿಗಳ ಬಿಡುಗಡೆ: ಅತಿಥಿಗಳು: ವಿ. ನಾರಾಯಣನ್, ಶುಭಾಂಶು ಶುಕ್ಲಾ, ಅಧ್ಯಕ್ಷತೆ: ಕೆ. ಪ್ರಕಾಶ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಘದೂತ್ ಸಭಾಂಗಣ, ಜಿಪಿಒ, ಬೆಳಿಗ್ಗೆ 11


ಶುಭಾಂಶು ಶುಕ್ಲಾ

ಎಆರ್‌ಸಿ ಕ್ಯಾನ್ಸರ್ ಆಸ್ಪತ್ರೆಯ ಉದ್ಘಾಟನೆ: ದಿನೇಶ್ ಗುಂಡೂರಾವ್, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ತೇಜಸ್ವಿ ಸೂರ್ಯ, ಡಾ.ಸಿ.ಎನ್. ಮಂಜುನಾಥ್, ರಾಮಲಿಂಗಾರೆಡ್ಡಿ, ಕೃಷ್ಣಬೈರೇಗೌಡ, ಕೆ.ಎಚ್. ಮುನಿಯಪ್ಪ, ಉದಯ್ ಬಿ. ಗರುಡಾಚಾರ್, ಆಯೋಜನೆ: ಎಆರ್‌ಸಿ ಕ್ಯಾನ್ಸರ್ ಆಸ್ಪತ್ರೆ, ಸ್ಥಳ: 210, ಹೊಂಬೇಗೌಡನಗರ, ಹೊಸೂರು ಮುಖ್ಯರಸ್ತೆ, ವಿಲ್ಸನ್ ಗಾರ್ಡನ್, ಬೆಳಿಗ್ಗೆ 11.30


ನಿರ್ಮಲಾನಂದನಾಥ ಸ್ವಾಮೀಜಿ

'ನೆಲದ ನಂಬಿಕೆ' ಕುರಿತು ಚರ್ಚೆ: ಮಾತನಾಡುವವರು: ಎಚ್.ಎಸ್. ಶಿವಪ್ರಕಾಶ್, ಎನ್. ಗಾಯತ್ರಿ, ಅಶ್ವಿನಿ ಬೋಧ್, ಆಯೋಜನೆ: ಬಹುತ್ವ ಕರ್ನಾಟಕ, ಸ್ಥಳ: ಲೊಯೋಲಾ ಹಾಲ್, ಆಶೀರ್ವಾದ, ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 4ರಿಂದ

ವೀಕೆಂಡ್ ನಾಟಕೋತ್ಸವ: 'ಪಾಕ ಕ್ರಾಂತಿ' ನಾಟಕ ಪ್ರದರ್ಶನ: ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಬಿ. ಅಶೋಕ್, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

'ಅನವರತ' ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಎಸ್. ಚಿದಾನಂದ್, ಆಯೋಜನೆ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸ್ಮಿತಾ ರಾಮಣ್ಣ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸ್ಮಿತಾ ರಾಮಣ್ಣ, ಅತಿಥಿಗಳು: ರಾಮಲಿಂಗಾರೆಡ್ಡಿ, ಶಶಿಧರ ಕೋಟೆ, ಶ್ರುತಿ ಕೆಜಾಕೆಪುರಂ, ಪುರುಷೋತ್ತಮ್, ಎಲ್.ವೈ. ರಾಜೇಶ್, ನಸ್ರೀನ್ ಇಸಾಕ್, ಸ್ಥಳ: ಮೀನಾಕ್ಷಿ ರಂಗಮಂಚ್ ಸಭಾಂಗಣ, ದೊಡ್ಡಕಲ್ಲಸಂದ್ರ, ಸಂಜೆ 5.30

ಕನ್ನಡ ನಾಟಕೋತ್ಸವ-2026: 'ಹಗ್ಗದ ಕೊನೆ' ನಾಟಕ ಪ್ರದರ್ಶನ, ಪ್ರಸ್ತುತಿ: ದೃಶ್ಯರಂಗ ಕಲಾಸಂಘ, ನಿರ್ದೇಶನ: ಟಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಆರ್.ವಿ. ಅಕ್ಷಯ್, ಆರ್.ವಿ. ಅಭಿಷೇಕ್, ಪಿಟೀಲು: ಜಿ. ಪ್ರಣವಿ, ಮೃದಂಗ: ಪ್ರಣವ್ ಬಾಲಕೃಷ್ಣ, ಪಿಟೀಲು-ವೀಣಾ ವಾದನ: ಎಚ್.ಕೆ. ವೆಂಕಟ್‌ರಾಮ್, ಜಯಂತಿ ಕುಮರೇಶ್, ಮೃದಂಗ: ತುಮಕೂರು ಬಿ. ರವಿಶಂಕರ್, ಮೋರ್ಸಿಂಗ್: ಪ್ರಮಥ್ ಕಿರಣ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಗಿಗ್ ವಲಯ ಬಗೆದಷ್ಟೂ ಬವಣೆ

ಒಂದನೇ ಪುಟದಿಂದ...

ಈಗ ಸ್ವಿಗ್ಗಿ, ಜೊಮ್ಯಾಟೊ ಅಂತಹ ತಿನಿಸು/ಆಹಾರ ವಿತರಣೆ ಸೇವಾ ಸಂಸ್ಥೆಗಳು, ಬಿಗ್ ಬಾಸ್ಕೆಟ್, ಪೋರ್ಟರ್, ಫಾರ್ಮಸಿ, ಬ್ಲಿಂಕ್ ಇಟ್, ಡಾಮಿನೋಜ್ ಸೇರಿದಂತೆ ಇಂತಹ ಕಾರ್ಮಿಕರನ್ನು ಸೇವೆಗೆ ನಿಯೋಜಿಸುವ ಸಂಸ್ಥೆಗಳು ಹಾಗೂ ಸೇವಾ ವೇದಿಕೆಗಳ ಪಟ್ಟಿ ದೊಡ್ಡದಿದೆ.

ಕರ್ನಾಟಕದಲ್ಲಿ ಸದ್ಯ ಸುಮಾರು 4 ಲಕ್ಷ ಗಿಗ್ ಕಾರ್ಮಿಕರಿದ್ದಾರೆ. ಈ ಪೈಕಿ ಬೆಂಗಳೂರಿನಲ್ಲೇ 2 ಲಕ್ಷ ಮಂದಿ ಇದ್ದಾರೆ. ಮಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ ನಗರಗಳಲ್ಲಿ ಈ ಶೈಲಿಯ ವಹಿವಾಟು ಬೆಳೆಯುತ್ತಿದೆ. ಮುಖ್ಯವಾಗಿ ಆನ್‌ಲೈನ್ ವೇದಿಕೆ ಅವಲಂಬಿಸುವ ಪ್ರವೃತ್ತಿ ಹೆಚ್ಚಿದಂತೆ ಫ್ಲಿಪ್‌ಕಾರ್ಟ್, ಅಮೆಜಾನ್ ಸಂಸ್ಥೆಗಳ ಸೇವೆಗಳು ಈಚೆಗೆ ಅರೆಪಟ್ಟಣಗಳಿಗೂ ತಲುಪುತ್ತಿದೆ.

ಕರ್ನಾಟಕ ಸೇರಿದಂತೆ ದೇಶವ್ಯಾಪಿ 'ಗಿಗ್' ಕಾರ್ಮಿಕರ ವಲಯ ವಿಸ್ತರಿಸುತ್ತಿದ್ದರೂ, ಎಷ್ಟು ಕಾರ್ಮಿಕರು ಈ ಕ್ಷೇತ್ರ ಅವಲಂಬಿಸಿದ್ದಾರೆ ಎಂಬ ನಿಖರ ಮಾಹಿತಿ ಇಲ್ಲ. ನೀತಿ ಆಯೋಗದ ಅಂದಾಜಿನಂತೆ, 2024–25ರಲ್ಲಿ ಈ ಕ್ಷೇತ್ರದ ಕಾರ್ಮಿಕರ ಸಂಖ್ಯೆ ಆಸುಪಾಸು 1 ಕೋಟಿ. 2029–30ರ ವೇಳೆಗೆ 2.35 ಕೋಟಿ ತಲುಪಬಹುದು.

ಕೇಂದ್ರ ಕಾರ್ಮಿಕ ಸಚಿವಾಲಯವು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಆರಂಭಿಸಿರುವ 'ಇ–ಶ್ರಮ್' ಪೋರ್ಟಲ್‌ನಲ್ಲಿ ಆಗಸ್ಟ್ 3, 2025ರಲ್ಲಿ ಇದ್ದಂತೆ ಅಸಂಘಟಿತ ವಲಯದ ಒಟ್ಟು 30.98 ಕೋಟಿ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ. ಇವರಲ್ಲಿ ಗಿಗ್ ವಲಯದ ಕಾರ್ಮಿಕರ ಸಂಖ್ಯೆ ಕೇವಲ 3.7 ಲಕ್ಷ.

ಅಸಂಖ್ಯ ಶ್ರಮಿಕರನ್ನು ಸೆಳೆಯುತ್ತಿದ್ದರೂ ಗಿಗ್ ಕಾರ್ಮಿಕರ ವಲಯ ಅಸಂಘಟಿತವಾಗಿದೆ. ಈ ಕಾರ್ಮಿಕರಿಗೆ ಕಾನೂನು ಭದ್ರತೆ ಒದಗಿಸಲು ಕರ್ನಾಟಕದಲ್ಲಿ ಇತ್ತೀಚೆಗೆ ಪ್ರತ್ಯೇಕ ಕಾಯ್ದೆ ರಚನೆಯಾಗಿದ್ದರೆ, ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿದ ಸಾಮಾಜಿಕ ಭದ್ರತೆ ಸಂಹಿತೆಯಡಿ ಈ ವಲಯವನ್ನೂ ಉಲ್ಲೇಖಿಸಿದೆ. ಸಾಮಾಜಿಕ ಭದ್ರತೆ ಸಂಹಿತೆ 2020 ಒಂಬತ್ತು ಕಾರ್ಮಿಕ ಕಾಯ್ದೆಗಳ ನಿಯಮಗಳನ್ನು ಆಧರಿಸಿದ ಸಮಗ್ರ ರೂಪವಾಗಿದೆ.

ಆನ್‌ಲೈನ್ ವೇದಿಕೆ ಆಧರಿಸಿದ ಸೇವೆ ನಂಬಿರುವ ಈ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಇಲ್ಲ ಎಂಬುದನ್ನು ನೀತಿ ಆಯೋಗ ಗುರುತಿಸಿದೆ. ಆರೋಗ್ಯ ಭದ್ರತೆ ಒದಗಿಸಲು 'ಇ–ಶ್ರಮ್'ನಲ್ಲಿ ನೋಂದಣಿಯಾದ ಕಾರ್ಮಿಕರಿಗೆ ಆರೋಗ್ಯ ಭದ್ರತೆ ಒದಗಿಸಲು ಒತ್ತು ನೀಡಿದೆ. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯಡಿ ಕಾರ್ಮಿಕರ ಕುಟುಂಬ ವರ್ಗದವರಿಗೆ 5 ಲಕ್ಷದವರೆಗೂ ಚಿಕಿತ್ಸೆ ಭರವಸೆ ಇದೆ. ಗಿಗ್ ಕಾರ್ಮಿಕರು ಸೇರಿ ಕರ್ನಾಟಕದ ಒಟ್ಟು 1.09 ಕೋಟಿ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ.

'ದಿನಕ್ಕೆ 12 ಗಂಟೆ ಕೆಲಸ ಮಾಡುತ್ತೇನೆ. ಹೆಚ್ಚುವರಿ ಅವಧಿಗೆ ವೇತನ ಸಿಕ್ಕರೆ ಅನುಕೂಲ. ಕೆಲ ಸಂಸ್ಥೆಗಳಷ್ಟೇ ಅಪಘಾತ ವಿಮಾ ಭದ್ರತೆ ಒದಗಿಸುತ್ತವೆ' ಎಂಬುದು ಮಂಗಳೂರಿನ ಗಿಗ್ ಕಾರ್ಮಿಕ ಗಣೇಶ್ ಅಭಿಪ್ರಾಯ. ಗ್ರಾಹಕರು ಉತ್ಪನ್ನ ಅಥವಾ ಸೇವೆಗಳನ್ನು ನಿರಾಕರಿಸಿದಾಗಲೂ ಗಿಗ್ ಕಾರ್ಮಿಕರಿಗೇ ದಂಡ ವಿಧಿಸಲಾಗುತ್ತದೆ. ಇಂಥ ಸ್ಥಿತಿಯು ಬದಲಾಗಬೇಕು ಎಂಬುದು ಹೆಸರು ಹೇಳಲು ಬಯಸದ ಕಾರ್ಮಿಕರೊಬ್ಬರ ಆಗ್ರಹ.

'ಗಿಗ್' ಕಾರ್ಮಿಕರ ಬವಣೆಗಳು ಕಾಲದೊಂದಿಗೆ ಓಡುವ ಬೆಂಗಳೂರಿನಂತಹ ಮಹಾನಗರಕ್ಕೆ ಸೀಮಿತವಾಗಿಲ್ಲ. ಬೆಂಗಳೂರಿನ ಜೀವನಶೈಲಿ ಸಹಜವಾಗಿ ಇಂತಹ ಕಾರ್ಮಿಕರಿಗೆ ಒತ್ತಡ ಉಂಟು ಮಾಡಬಹುದು. ಆದರೆ, ಪ್ರಗತಿಯಲ್ಲಿರುವ ಇತರೆ ನಗರಗಳಲ್ಲಿಯೂ ಕಾರ್ಮಿಕರ ಪರಿಸ್ಥಿತಿ ಅಷ್ಟೇನೂ ಭಿನ್ನವಾಗಿಲ್ಲ.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ಖರೀದಿ, ಹೋಟೆಲ್‌ಗಳಿಂದ ತಿನಿಸು ತರಿಸುವ ರೂಢಿ ಹೆಚ್ಚುತ್ತಿದ್ದಂತೆಯೇ ಗಿಗ್ ಕಾರ್ಮಿಕರ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ.

ಕಲಬುರಗಿ ನಗರದಲ್ಲೇ ಅಂದಾಜು ಒಂದು ಸಾವಿರ ಗಿಗ್ ಕಾರ್ಮಿಕರಿದ್ದಾರೆ. 'ಮೊದಲು ಎಲ್ಲ ಹೋಟೆಲ್‌ಗಳಿಂದ ಗಿಗ್ ಕಾರ್ಮಿಕರಿಗೆ ಪ್ರತಿ ಆರ್ಡರ್‌ಗೆ ₹ 80 ಕೊಡುತ್ತಿದ್ದರು. ಈಗ ಮಾನದಂಡ ಬದಲಾಗಿದೆ. ಈಗ ಪ್ರತಿ ಕಿ.ಮೀ.ಗೆ ₹10 ಕೊಡುತ್ತಿದ್ದಾರೆ. ಆದಾಯ ಕಡಿಮೆಯಾಗಿದೆ ಎಂಬುದು ಗಿಗ್ ಕಾರ್ಮಿಕ, ಅಂಕುಶ್ ಪೂಜಾರಿ ಮಾತು.

ಅಂಕುಶ್ ಅವರು ಬೆಂಗಳೂರಿನಲ್ಲಿ ಫುಡ್ ಡೆಲಿವರಿ ಕಾರ್ಮಿಕನಾಗಿದ್ದರು. ಅಪಘಾತವಾಗಿ ತೀವ್ರ ಪೆಟ್ಟಾಯಿತು. ಚೇತರಿಕೆ ಬಳಿಕ ಕಲಬುರಗಿಗೆ ಮರಳಿ ತ್ರಿಚಕ್ರ ವಾಹನದಲ್ಲಿ ಕಾಯಕ ಮುಂದುವರಿಸಿದ್ದಾರೆ. 'ಕಿ.ಮೀ. ಲೆಕ್ಕದಲ್ಲಿ ಕಮಿಷನ್ ಸಿಗುವ ಕಾರಣ ಆದಾಯ ಕುಸಿದಿದೆ. ಬೇರೆ ಕೆಲಸ ಮಾಡಲಾಗದೇ ಇದನ್ನೇ ಮುಂದುವರಿಸಿದ್ದೇನೆ. ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಹೇಳಿದರು.

ಕಲಬುರಗಿ ಉಪ ಕಾರ್ಮಿಕ ಆಯುಕ್ತರ ಕಚೇರಿ ವ್ಯಾಪ್ತಿಯ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ 1331 ಗಿಗ್ ಕಾರ್ಮಿಕರು ಸದ್ಯ 'ಸೇವಾ ಸಿಂಧು' ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ ಕಾರ್ಮಿಕ ಇಲಾಖೆ ಉಪ ಆಯುಕ್ತ ವೆಂಕಟೇಶ ಶಿಂಧಿಹಟ್ಟಿ.

ಸಾಂಸ್ಕೃತಿಕ ನಗರ ಮೈಸೂರಿನಲ್ಲೂ ಗಿಗ್ ಕಾರ್ಮಿಕರ

> **ರಾಜ್ಯದಲ್ಲಿ ಗಿಗ್ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತೆ ಕಾಯ್ದೆ ರಚನೆಯಾಗಿದೆ. ಅದರ ಅನುಷ್ಠಾನ ಕುರಿತು ಕಾರ್ಮಿಕ ಸಚಿವರು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಾರೆ. ಕಟ್ಟುನಿಟ್ಟಾಗಿ ಪಾಲನೆಯಾಗಲಿದೆ**
> **ಮಂಜುನಾಥ್ ಜಿ.,** ಹೆಚ್ಚುವರಿ ಆಯುಕ್ತ, ಕಾರ್ಮಿಕ ಇಲಾಖೆ

ಕಾರ್ಯಕ್ಷೇತ್ರ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿದೆ. 25-40 ವರ್ಷದವರು ಈ ಕ್ಷೇತ್ರದತ್ತ ಆಕರ್ಷಿತರಾಗುತ್ತಿದ್ದಾರೆ. ಪದವಿ ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ನಿತ್ಯದ ಖರ್ಚು ನಿಭಾಯಿಸಲು ಅವಲಂಬಿಸಿದ್ದಾರೆ.

ಎಐಡಿವೈಒ ಸಂಘಟನೆ 2 ಎರಡು ವರ್ಷದ ಹಿಂದೆ 'ಯುನೈಟೆಡ್ ಟ್ರೇಡ್ ಫುಡ್ ಡೆಲಿವರ್ ಪಾರ್ಟ್ನರ್' ಎಂಬ ವಿಭಾಗ ಸ್ಥಾಪಿಸಿ ಈ ಶ್ರಮಿಕರ ಸಮಸ್ಯೆಗಳನ್ನು ಕಲೆಹಾಕಿತ್ತು. 'ಗಿಗ್ ಪಾರ್ಟ್ನರ್ ಹಾಗೂ ಆ್ಯಪ್ ಮಾಲೀಕರ ನಡುವೆ ನೇರ ಸಂಬಂಧ ಇದದ್ದು, ಅವರನ್ನು ಕಾರ್ಮಿಕರು ಎಂದು ಘೋಷಿಸಬೇಕು' ಎಂಬುದು ನಮ್ಮ ಬೇಡಿಕೆ ಎಂದು ಎಐಡಿವೈಒನ ನೀತಾ ಪ್ರತಿಪಾದಿಸುತ್ತಾರೆ.

'10 ಡೆಲಿವರಿ ಪೂರೈಸಿದ ಬಳಿಕ ಪ್ರೋತ್ಸಾಹಧನ ದೊರೆಯುತ್ತದೆ. ಆದರೆ, ಒಂಬತ್ತು ಆದೇಶ ಸುಲಭವಾಗಿ ಸಿಗುತ್ತದೆ. ನಂತರದ್ದೆ ಸಮಸ್ಯೆ. ಹೀಗಾಗಿ ಪ್ರೋತ್ಸಾಹಧನ ಸಿಗುವುದೇ ಇಲ್ಲ. ಆದರೆ ಸೇವೆ ವಿತರಣೆ ವಿಳಂಬವಾದರೂ ದಂಡ ಬೀಳುತ್ತದೆ' ಎನ್ನುತ್ತಾರೆ ಮೈಸೂರು ವಿಜಯನಗರದ ಗಿಗ್ ಕಾರ್ಮಿಕ ಅಭಿಷೇಕ್.

ತುಮಕೂರು ನಗರದಲ್ಲಿ ಗಿಗ್ ಕ್ಷೇತ್ರ ವೇಗ ಪಡೆಯುತ್ತಿದೆ. ಸದ್ಯ ನಗರದಲ್ಲಿ ಗಿಗ್ ಕಾರ್ಮಿಕ ವಿಮಾ ಯೋಜನೆಗೆ 176 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚಿನವರಿಗೆ 'ಈ ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿಕೊಳ್ಳಲೂ ಹಿಂಜರಿಕೆ. ಅಭದ್ರತೆ ಕಾಡುತ್ತಿದೆ. ಗಿಗ್ ನೌಕರರಲ್ಲಿ ಶೇ 70ರಷ್ಟು ವಿದ್ಯಾರ್ಥಿಗಳು. ಶುಲ್ಕ ಪಾವತಿ, ಖರ್ಚಿನ ಹೊಂದಾಣಿಕೆ ಕ್ಷೇತ್ರ ಆಯ್ಕೆಗೆ ಕಾರಣ.

'ಕೆಲ ಗ್ರಾಹಕರು ಅಸಭ್ಯವಾಗಿ ನಡೆದುಕೊಳ್ಳುತ್ತಾರೆ. ಹಲ್ಲೆಗೂ ಮುಂದಾಗುತ್ತಾರೆ. ಗ್ರಾಹಕರ ಮನಃಸ್ಥಿತಿ ಅರ್ಥ ಮಾಡಿಕೊಳ್ಳಲಾಗದು' ಎಂಬುದು ತುಮಕೂರಿನ ಚಂದ್ರರಾಜ್ ಅನುಭವ.

'ಮೂರು ವರ್ಷಗಳಿಂದ ಜೊಮ್ಯಾಟೊಗಾಗಿ ಕೆಲಸ ಮಾಡುತ್ತಿದ್ದೇನೆ. ಪದವಿ ಶಿಕ್ಷಣ ಮುಗಿದಿದೆ. ಪಿ.ಜಿ ಶಿಕ್ಷಣಕ್ಕೆ ಶುಲ್ಕ ಹೊಂದಾಣಿಸಬೇಕು' ಎಂದು ಹೆಸರೇಳಲು ಇಚ್ಛಿಸದ ಕಾರ್ಮಿಕರೊಬ್ಬರು ಅನುಭವ ಹಂಚಿಕೊಂಡರು.

ಆಧುನಿಕ ಜೀವನಶೈಲಿಯನ್ನು ಅವಾಹಿಸಿಕೊಂಡಿರುವ ಕರಾವಳಿಯ ಮಂಗಳೂರು ಮಹಾನಗರದಲ್ಲಿ ಹಣ್ಣು, ತರಕಾರಿ, ಬೇಳೆ-ಕಾಳು, ಅಗತ್ಯ ಸಾಮಗ್ರಿಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕೆಲವು ಸ್ಥಳೀಯ ಆ್ಯಪ್‌ಗಳು ಸಕ್ರಿಯವಾಗಿದ್ದವು. ಈಗ ಅವುಗಳನ್ನು ಇ–ಕಾಮರ್ಸ್ ತಾಣಗಳು ಹಿಂದಿಕ್ಕಿವೆ.

ಹಳದಿ, ಕೆಂಪು, ಹಸಿರು ಬಣ್ಣದ ಅಂಗಿ ತೊಟ್ಟ ಫುಡ್‌ಡೆಲಿವರಿ, ಇ- ಕಾಮರ್ಸ್ ಸಂಸ್ಥೆಗಳ ಡೆಲಿವರಿ ಹುಡುಗರು, ವಾಹನ ದಟ್ಟಣೆಯ ನಡುವೆ ನುಸುಳಿ ಮುನ್ನುಗ್ಗುವ ದೃಶ್ಯಗಳು ಸಾಮಾನ್ಯ. ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳು, ಯುವಕರೇ ಈ ವೃತ್ತಿಯನ್ನು ಆಯ್ದುಕೊಂಡವರು. 50 ವರ್ಷ ಮೇಲ್ಪಟ್ಟವರು ವಿರಳ ಸಂಖ್ಯೆಯಲ್ಲಿದ್ದಾರೆ.

ಈ ವೃತ್ತಿಯನ್ನು ಆಯ್ದುಕೊಂಡ ಯುವತಿಯರು ಕೆಲವರು ಕಾಣಸಿಗುತ್ತಾರಾದರೂ, ಹೆಚ್ಚಿನವರು ಮಾಸ್ಕ್ ಹಾಕಿಕೊಂಡು ಮುಖಚಹರೆ ಮರೆಮಾಚುತ್ತಾರೆ.

'ಅರ್ಧ ದಿನ ಕಾಲೇಜು, ಇನ್ನರ್ಧ ದಿನದಲ್ಲಿ ಗಿಗ್ ವರ್ಕ್. ದಿನಕ್ಕೆ ₹700ರವರೆಗೆ ಸಂಪಾದನೆ ಇದೆ. ಸರಾಸರಿ ₹500 ಉಳಿತಾಯವಾಗುತ್ತದೆ. ಶನಿವಾರ, ಭಾನುವಾರ ಪೂರ್ಣ ಅವಧಿ ಕೆಲಸ ಎನ್ನುತ್ತಾರೆ ಜೊಮಾಟೊದ ಫುಡ್‌ಡೆಲಿವರಿ ವೃತ್ತಿ ಮಾಡುವ ಮಂಗಳೂರಿನ ಜಯಲಕ್ಷ್ಮಿ ಶೆಣೈ.

'ಮಧ್ಯಾಹ್ನದ 12ರಿಂದ 3 ಗಂಟೆ, ಸಂಜೆ 7ರಿಂದ 10 ಗಂಟೆ ನಡುವಿನ ಅವಧಿಯಲ್ಲಿ ಆದಾಯ ಗಳಿಕೆ ತುಸು ಹೆಚ್ಚು. ಹೀಗಾಗಿ, ನಾನು ಈ ಸ್ಲಾಟ್ ನಲ್ಲೇ ಕಾರ್ಯನಿರ್ವಹಿಸುತ್ತೇನೆ. ಸ್ಲಾಟ್ ಬುಕ್ ಮಾಡಿಕೊಂಡು, ಮತ್ತೆ ರದ್ದುಗೊಳಿಸಿದರೆ, ₹10 ದಂಡ ಪಾವತಿಸಬೇಕಾಗುತ್ತದೆ. ದಿನಕ್ಕೆ 12–15 ಟ್ರಿಪ್ ಮಾಡಿದರೆ, ₹800 ಆದಾಯ ಗಳಿಸಬಹುದು. ರಾತ್ರಿ 10 ಗಂಟೆವರೆಗೆ ಕೆಲಸ ನಿರ್ವಹಿಸಿದ ದಿನಗಳು ಇವೆ. ಮಹಿಳೆಯಾಗಿ ಧೈರ್ಯ ತೋರುತ್ತಿದ್ದೀರಿ ಎಂದು ಪ್ರಶಂಸಿಸಿ, ಟಿಪ್ಸ್ ಕೊಡುವವರೂ ಇದ್ದಾರೆ. ಮುಜುಗರ ತರುವ ಅನುಭವ ಆಗಿಲ್ಲ' ಎಂದು ಪ್ರತಿಕ್ರಿಯಿಸಿದರು.

ಕಿತ್ತೂರು ಕರ್ನಾಟಕ ಭಾಗದಲ್ಲಿ ಹುಬ್ಬಳ್ಳಿ, ಬೆಳಗಾವಿ ನಗರಗಳೇ ಅಲ್ಲದೆ ಇ–ಕಾಮರ್ಸ್ ವಹಿವಾಟು ಪಟ್ಟಣ, ಗ್ರಾಮೀಣ ಪ್ರದೇಶಗಳಿಗೂ ವ್ಯಾಪಿಸಿದೆ. ಡೆಲಿವರಿ ಬಾಯ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ತಾತ್ಕಾಲಿಕ ಉದ್ಯೋಗವಾಗಿ ಉನ್ನತ ಶಿಕ್ಷಣ ಪಡೆದವರು ಒಲವು ತೋರುತ್ತಿದ್ದಾರೆ.

ಶಿರಸಿಯ ಹಳ್ಳಿಯೊಂದರ ಗೌರೀಶ ನಾಯ್ಕ, ಶೈಕ್ಷಣಿಕ ಸಾಲ ಪಡೆದು ಎಂಬಿಎ ಮುಗಿಸಿದ್ದಾರೆ. ಉದ್ಯೋಗ ಸಿಗದ ಕಾರಣ ಪಟ್ಟಣದಲ್ಲಿ ಇ–ಕಾಮರ್ಸ್ ತಾಣದ ಫ್ರಾಂಚೈಸಿಯೊಂದರಲ್ಲಿ ಡೆಲಿವರಿ ಬಾಯ್ ಆಗಿದ್ದಾರೆ. 'ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆವರೆಗೂ ಕೆಲಸ. ದಿನದ ಆದಾಯ ಮಾತ್ರ ಗರಿಷ್ಠ ₹800. 'ವಯಸ್ಸಾದ ಅಪ್ಪ-ಅಮ್ಮರನ್ನು ಬಿಟ್ಟು ದೊಡ್ಡ ನಗರಕ್ಕೆ ಹೋಗಲು ಸಾಧ್ಯವಿಲ್ಲ. ಶೈಕ್ಷಣಿಕ ಸಾಲ ಮರುಪಾವತಿಗೆ ಅನುಕೂಲ ಎಂದು ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೇನೆ. ಒಂದಷ್ಟು ಕಾಸು ಸಿಗುತ್ತದೆ' ಎನ್ನುತ್ತಾರೆ ಗೌರೀಶ.

'ರಸ್ತೆ ಸೌಲಭ್ಯ ಸಮರ್ಪಕವಾಗಿಲ್ಲದ ಪ್ರದೇಶದಲ್ಲಿ ಹೆಚ್ಚೆಂದರೆ ದಿನಕ್ಕೆ 15 ಆರ್ಡರ್ ತಲುಪಿಸಬಹುದು. ಕೆಲವರು ಆರ್ಡರ್ ಮಾಡಿಲ್ಲ ಎಂದು ಮರಳಿಸಬಹುದು. ಕೆಲವರು ಸಂಪರ್ಕಕ್ಕೇ ಸಿಗುವುದಿಲ್ಲ. ದಿನಕ್ಕೆ ₹300 ಸಂಪಾದಿಸುವುದು ಸಹ ಕಷ್ಟವಾಗುತ್ತದೆ' ಎಂದು ಹೊನ್ನಾವರದ ರಾಮಚಂದ್ರ ಮೇಸ್ತ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ, ಬಳ್ಳಾರಿ ನಗರ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅಮೆಜಾನ್, ಫ್ಲಿಫ್‌ಕಾರ್ಟ್, ಪೋರ್ಟರ್, ಫಾರ್ಮಸಿಯಂಥ ಇ–ಕಾಮರ್ಸ್ ಸಂಸ್ಥೆಗಳ ಜೊತೆಗೆ ಸ್ವಿಗ್ಗಿ, ಜೊಮಾಟೊ ಸೇವೆಗಳು ಇವೆ. ಕಾರ್ಮಿಕರಲ್ಲಿ 30 ವರ್ಷದ ಒಳಗಿನವರೇ ಅಧಿಕ. ಮಹಿಳೆಯರು ಕಡಿಮೆ.

ರಾಜಧಾನಿ ಒಳಗೊಂಡು ಉತ್ತರದಿಂದ ದಕ್ಷಿಣದವರೆಗೂ ಗಿಗ್ ಕಾರ್ಮಿಕರ ಕೆಲಸದ ಶೈಲಿ ಭಿನ್ನವಾದರೂ ಬವಣೆ ಹಾಗೂ ದುಮ್ಮಾನಗಳಿಗೆ ಏಕರೂಪತೆ ಇದೆ. ಕಾರ್ಮಿಕರ ಬವಣೆ ಬದಲಾಗಲು ಸರ್ಕಾರ, ಆಡಳಿತ ವರ್ಗದಲ್ಲಿ ಕಾರ್ಮಿಕ ಸ್ನೇಹಿ ಮನಸ್ಥಿತಿ ದೃಢವಾಗಬೇಕು. ಆಗಷ್ಟೇ, ಬಿಸಿಲು–ಮಳೆಗೆ ಅಂಜದೆ ಗ್ರಾಹಕರ ಸೇವೆಗಾಗಿ ದ್ವಿಚಕ್ರ ವಾಹನದಲ್ಲಿ ವೇಗವಾಗಿ ಸಾಗುವ ಗಿಗ್ ಕಾರ್ಮಿಕರ 'ಬದುಕು' ಗುರಿಮುಟ್ಟಬಹುದು.

ಪೂರಕ ಮಾಹಿತಿ: ಬಾಲಕೃಷ್ಣ ಪಿ.ಎಚ್., ಮನೋಜಕುಮಾರ್ ಗುದ್ದಿ, ಕೆ.ಜೆ. ಮರಿಯಪ್ಪ, ಸಂಧ್ಯಾ ಹೆಗಡೆ, ನಾಗರಾಜ್ ಬಿ.ಎನ್., ಶಿವಪ್ರಸಾದ್ ರೈ
ಪರಿಕಲ್ಪನೆ: ಯತೀಶ್ ಕುಮಾರ್ ಜಿ. ಡಿ

ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ಮಂಡಳಿ ರಚನೆ

ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು, ಹಿತರಕ್ಷಣೆಗೆ ಕರ್ನಾಟಕ ಸರ್ಕಾರ ಇತ್ತೀಚೆಗೆ ರೂಪಿಸಿದ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ 2025 ಅನುಸಾರ, 'ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ' ರಚನೆಯಾಗಿದೆ.

ಇದು ಸ್ವಾಯತ್ತ ಮಂಡಳಿಯಾಗಿದ್ದು, ಈ ಮೂಲಕ ಗಿಗ್ ಕಾರ್ಮಿಕರ ರಕ್ಷಣೆಗೆ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವುದು ಇದರ ಉದ್ದೇಶ.

ಮಂಡಳಿ ರಚನೆಯ ಅಧಿಸೂಚನೆ ಅನುಸಾರ, ಕಾರ್ಮಿಕ ಸಚಿವರು ಈ ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಕಾರ್ಮಿಕ ಇಲಾಖೆ, ಮಾಹಿತಿ ತಂತ್ರಜ್ಞಾನ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಮಂಡಳಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ಗಿಗ್ ಕಾರ್ಮಿಕರ ಸಂಘ ಹಾಗೂ ಆ್ಯಪ್ ಆಧಾರಿತ ಸಾರಿಗೆ ಸೇವೆ ಒದಗಿಸುವ ಸಂಸ್ಥೆಗಳ ನಾಲ್ವರು ಪ್ರತಿನಿಧಿಗಳು, ಪೋರ್ಟರ್, ಜೊಮ್ಯಾಟೊ, ಉಬೆರ್, ಅಮೆಜಾನ್ ಸಂಸ್ಥೆಗಳ ತಲಾ ಒಬ್ಬರು ಪ್ರತಿನಿಧಿ ಮಂಡಳಿಯಲ್ಲಿರುತ್ತಾರೆ. ಯುನೈಟೆಡ್ ಫುಡ್ ಡೆಲಿವರಿ ಪಾರ್ಟನರ್ಸ್ ಯೂನಿಯನ್, ಆ್ಯಪ್ ಆಧಾರಿತ ಸಾರಿಗೆ ನೌಕರರ ಒಕ್ಕೂಟ, ಎಐಟಿಯುಸಿ ಮತ್ತು ಒಲಾ ಉಬೆರ್ ಡ್ರೈವರ್ಸ್ ಅಂಡ್ ಓನರ್ಸ್ ಅಸೋಸಿಯೇಷನ್‌ನ ಒಬ್ಬ ಪ್ರತಿನಿಧಿಯೂ ಇರುತ್ತಾರೆ.

ಸಂಬಂಧಿತ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಎಲ್ಲ ಗಿಗ್ ಕಾರ್ಮಿಕರ ವಿವರಗಳನ್ನು ಸಲ್ಲಿಸಬೇಕು. ಈ ವಿವರಗಳನ್ನು ಆಧರಿಸಿ ಪ್ರತಿ ಗಿಗ್ ಕಾರ್ಮಿಕನಿಗೆ ವಿಶಿಷ್ಟ ಗುರುತು ಸಂಖ್ಯೆ ನೀಡಲಿದ್ದು, ಅದರ ಆಧಾರದಲ್ಲಿ ಸಾಮಾಜಿಕ ಭದ್ರತಾ ಅನುಕೂಲಗಳನ್ನು ನೀಡಲಾಗುತ್ತದೆ. ಸಂಸ್ಥೆಗಳಿಂದ ಸಂಗ್ರಹಿಸುವ ಶುಲ್ಕ, ಗಿಗ್ ಕಾರ್ಮಿಕರು ಸಲ್ಲಿಸುವ ನೆರವು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನವು ಈ ನಿಧಿಯನ್ನು ಒಳಗೊಂಡಿರಲಿದೆ.

ಆನ್‌ಲೈನ್ ಸೇವೆ ಒದಗಿಸುವ ವೇದಿಕೆಗಳು ಪ್ರತಿ ವಹಿವಾಟಿಗೆ ಮೇಲೆ ಶೇ 1 ರಿಂದ 5ರವರೆಗೆ ಸೆಸ್ ವಿಧಿಸುವುದು ಕಾಯ್ದೆ ಪ್ರಕಾರ ಕಡ್ಡಾಯ. ಸ್ವಿಗ್ಗಿ, ಜೊಮ್ಯಾಟೊ, ಒಲಾ, ಉಬೆರ್ ಸೇರಿ ಆನ್‌ಲೈನ್ ಸೇವೆ ಒದಗಿಸುವ ಸಂಸ್ಥೆಗಳ ಸೇವೆ ಸ್ವರೂಪ ಆಧರಿಸಿ ಸೆಸ್ ಪ್ರಮಾಣ ವ್ಯತ್ಯಾಸವಾಗಲಿದೆ.

ಆತುರದ ಸವಾರಿಯಲ್ಲಿ ಗಿಗ್ ಕಾರ್ಮಿಕ

ಬೆಂಗಳೂರಿನ ಬಡಾವಣೆಯೊಂದರಲ್ಲಿ ಆರ್ಡರ್‌ಗಾಗಿ ಕಾಯುತ್ತಿರುವ ಗಿಗ್ ಕಾರ್ಮಿಕರು

ಕೇಂದ್ರ ಸರ್ಕಾರದಿಂದ ಕರಡು ನಿಯಮ

ಉದ್ಯೋಗ ಭದ್ರತೆ ಇಲ್ಲ ಎಂಬ ಆತಂಕ ನಿವಾರಿಸಲು ಸಾಮಾಜಿಕ ಭದ್ರತೆ ಒದಗಿಸಲು ಹೊಸ ಸಾಮಾಜಿಕ ಭದ್ರತಾ ಸಂಹಿತೆಯಡಿ ಕೇಂದ್ರ ಕೆಲ ಕರಡು ನಿಯಮಗಳನ್ನು ರೂಪಿಸಿದೆ.

ಆ ಪ್ರಕಾರ, ಗಿಗ್ ಕಾರ್ಮಿಕರು ನಿರ್ದಿಷ್ಟ ಹಣಕಾಸು ವರ್ಷದಲ್ಲಿ ಒಂದೇ ಸೇವಾ ಸಂಸ್ಥೆಯಡಿ ಕನಿಷ್ಠ 90 ದಿನ ಅಥವಾ ವಿವಿಧ ಸೇವಾ ಸಂಸ್ಥೆಗಳಡಿ ಕನಿಷ್ಠ 120 ದಿನ ಕೆಲಸ ಮಾಡಿದ್ದಲ್ಲಿ ಸಾಮಾಜಿಕ ಭದ್ರತೆ ಅನುಕೂಲಗಳನ್ನು ಪಡೆಯಲು ಅರ್ಹರು.

ಒಬ್ಬ ಕಾರ್ಮಿಕ ಒಂದೇ ದಿನ ಮೂರು ವಿವಿಧ ಸೇವಾ ಸಂಸ್ಥೆಗಳಡಿ ಕಾರ್ಯ ನಿರ್ವಹಿಸಿದ್ದಲ್ಲಿ ಅದನ್ನು ಮೂರು ಸೇವಾ ದಿನ ಎಂದು ಹೊಸ ನಿಯಮಗಳ ಪ್ರಕಾರ ಪರಿಗಣಿಸಲಾಗುತ್ತದೆ.

ಹಿಂದಿನ ಹಣಕಾಸು ವರ್ಷದಲ್ಲಿ ಒಂದೇ ಸಂಸ್ಥೆಯಡಿ 90–120 ದಿನ ಕಾರ್ಯ ನಿರ್ವಹಿಸದೇ ಇದ್ದಲ್ಲಿ, 60 ವರ್ಷ ಮೀರಿದ್ದಲ್ಲಿ ಸಾಮಾಜಿಕ ಭದ್ರತಾ ಸೌಲಭ್ಯ ಸಿಗುವುದಿಲ್ಲ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 12-4-2001

- **ಹಿಂಸೆ, ಚರ್ಚೆ ಒಟ್ಟಿಗೇ ಸಾಗದು: ಪ್ರಧಾನಿ**

ಟೆಹರಾನ್, ಏ.11 (ಪಿಟಿಐ)- ನೆರೆ ದೇಶಗಳೊಂದಿಗಿನ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಲು ಭಾರತ ಸದಾ ಸಿದ್ಧ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಘೋಷಿಸಿದರು.

ಹಿಂಸೆಯ ಮಾರ್ಗವನ್ನು ತ್ಯಜಿಸುವಂತೆ ಪರೋಕ್ಷವಾಗಿ ಪಾಕಿಸ್ತಾನಕ್ಕೆ ಕರೆ ನೀಡಿದ ಅವರು, 'ಮಾತುಕತೆ ಮತ್ತು ಹಿಂಸೆ ಎರಡೂ ಒಟ್ಟಿಗೆ ಸಾಗುವುದು ಅಸಾಧ್ಯ' ಎಂದು ಮಾರ್ಮಿಕವಾಗಿ ನುಡಿದರು.

ನಾಲ್ಕು ದಿನಗಳ ಭೇಟಿಗಾಗಿ ಇಲ್ಲಿಗೆ ಆಗಮಿಸಿರುವ ಪ್ರಧಾನಿ, ಇರಾನ್ ಸಂಸತ್ತಿನಲ್ಲಿ ಮಾತನಾಡಿದರು.

75 ವರ್ಷಗಳ ಹಿಂದೆ

ಗುರುವಾರ, 12-4-1951

- **ವಿಶ್ವಸಂಸ್ಥೆ ಸೈನ್ಯದ ಹೊಸ ದಂಡನಾಯಕ ರಿಡ್ಜ್‌ವೆ**

ವಾಷಿಂಗ್ಟನ್, ಏ.11- ಅಧ್ಯಕ್ಷ ಟ್ರೂಮನ್ನರು ಜನರಲ್ ಮೆಕಾರ್ಥರರನ್ನು ಕೊರಿಯಾದಲ್ಲಿರುವ ವಿಶ್ವಸಂಸ್ಥೆ ಸೇನೆಗಳ ಮಹಾದಂಡ ನಾಯಕತ್ವದಿಂದ ವಜಾ ಮಾಡಿದ್ದಾರೆ.

ಅಧ್ಯಕ್ಷರು ಜನರಲ್ ರಿಡ್ಜ್‌ವೆಯವರನ್ನು ಜನರಲ್ ಮೆಕಾರ್ಥರರ ಸ್ಥಾನಕ್ಕೆ ನೇಮಿಸಿದ್ದಾರೆ. ಅಷ್ಟಮ ದಳದ ನಾಯಕತ್ವಕ್ಕೆ ಲೆಫ್ಟಿನೆಂಟ್ ಜನರಲ್ ಜೇಮ್ಸ್ ಎ. ವ್ಯಾರ್‌ಫ್ಲೀಟ್‌ರನ್ನು ನೇಮಿಸಲಾಗಿದೆ. 'ದಂಡನಾಯಕರು ಸರ್ಕಾರಿ ನೀತಿಗೂ ಆಜ್ಞೆಗಳಿಗೂ ಬದ್ಧರಾಗಿರಲೇಬೇಕು. ವಿಷಮ ಸಮಯಗಳಲ್ಲಂತೂ ಈ ತತ್ವವನ್ನು ತಪ್ಪದೆ ಪಾಲಿಸಬೇಕು' ಎಂಬುದಾಗಿ ಅಮೆರಿಕದ ಅಧ್ಯಕ್ಷರು ನುಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

12 ಏಪ್ರಿಲ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ಚೈತ್ರ ಕೃಷ್ಣ ನವಮಿ ಗಂ. 24-38, ನಕ್ಷತ್ರ: ಉತ್ತರಾಷಾಢ ಗಂ 13-40, ಯೋಗ: ಸಿದ್ಧ ಗಂ. 18-39, ಕರಣ: ತೈತಿಲ ಗಂ 12-02 ಮೀನ ಮಾಸದ 29 ನೇ ದಿನ. ಮಳೆ ನಕ್ಷತ್ರ: ರೇವತಿ 4 ನೇ ಪಾದ. ರಾಹುಕಾಲ: ಸಾಯಂಕಾಲ 04-30 - 06-00, ಸೂರ್ಯೋದಯ: 06-23, ಸೂರ್ಯಾಸ್ತ: 06-40, ಮುಸ್ಲಿಂ ದಿನಾಂಕ: 23 ಶವ್ವಾಲ್, ಅದೃಷ್ಟ ಸಂಖ್ಯೆ: 7, 10

ಮೇಷ: ಆರ್ಥಿಕ ಸ್ಥಿತಿಯು ಅವನತಿಯ ಹಂತವನ್ನು ತಲುಪುವ ಸ್ಥಿತಿ ಗೋಚರಕ್ಕೆ ಬರಬಹುದು, ಜಾಗ್ರತೆವಹಿಸಿ. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ.

ವೃಷಭ: ಸ್ವಯಂಕೃತ ಅಪರಾಧದಿಂದ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಮನದಲ್ಲಿ ಭಯ ತೋರಿಬಂದೀತು. ಸಹಕಾರ ಮನೋಭಾವದಿಂದ ಸಂಬಂಧಗಳು ಮತ್ತಷ್ಟು ಸುಧಾರಿಸಲಿದೆ.

ಮಿಥುನ: ವ್ಯಾಪಾರ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜೊತೆಯಲ್ಲಿ ಬುದ್ಧಿವಂತಿಕೆಯೂ ಮುಖ್ಯವಾಗುವುದೆಂದು ತಿಳಿದುಬರುವುದು. ತಂದೆ ತಾಯಿಯ ಇಷ್ಟಾರ್ಥಗಳು ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ.

ಕರ್ಕಾಟಕ: ರೈತಾಪಿವರ್ಗದವರು ತಮ್ಮ ವೃತ್ತಿಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ಕಾಣಬಹುದು. ನೋವಿನ ಸಂಗತಿಗಳೆಲ್ಲಾ ಕಳೆದು ನಲಿವಿನ ದಿನ ಇದಾಗಲಿದೆ.

ಸಿಂಹ: ಕಾಫಿ, ಕಾಳುಮೆಣಸು ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಲಾಭವನ್ನು ಎದುರು ನೋಡಬಹುದು. ಈ ದಿನ ನಡೆಯುವ ಎಲ್ಲಾ ವಿಷಯಗಳಲ್ಲಿಯೂ ನಿಮ್ಮ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ.

ಕನ್ಯಾ: ಪತ್ರಿಕಾ ವರದಿಗಾರರು ಕೆಲಸದಲ್ಲಿನ ದಕ್ಷತೆಯಿಂದ ಹೆಚ್ಚಿನ ಯಶಸ್ಸನ್ನು ಕಾಣುವರು. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು.

ತುಲಾ: ಹೂಡಿಕೆ ವಿಚಾರದಲ್ಲಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ವಾಯು ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ಅವಿವಾಹಿತರಿಗೆ ಕಂಕಣ ಬಲ ಕೂಡಿಬರುವುದು.

ವೃಶ್ಚಿಕ: ರಾಜಕೀಯ ಕ್ಷೇತ್ರದಲ್ಲಿ ಇರುವವರು ಪಕ್ಷ ಬಲಪಡಿಸಲು, ಅನುಯಾಯಿಗಳನ್ನು ಸಂಪಾದಿಸಿಕೊಳ್ಳಲು ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಭಾಗಿಯಾಗಿ ಸಂತೋಷವಾಗುವುದು.

ಧನು: ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಆದರೆ ಆ ಛಲವನ್ನು ಒಳ್ಳೆಯ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಿ. ಸಾಲ ತೆಗೆದುಕೊಂಡ ಹಣವನ್ನು ಹಿಂದುರುಗಿಸುವ ಬಗ್ಗೆ ಯೋಚಿಸಿ.

ಮಕರ: ನಿಮ್ಮ ದೈನಂದಿನ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವ ಆಲೋಚನೆ ಕೈಗೂಡಲಿದೆ. ರಹಸ್ಯವಾಗಿ ಸಿಗುವ ಬೆಂಬಲದಿಂದ ನಿಮ್ಮ ಕನಸುಗಳು ನನಸಾಗಲಿವೆ.

ಕುಂಭ: ಕೈಗೆಟಕುವ ಕಾರ್ಯವೊಂದು ನಿಮ್ಮ ಪ್ರಯತ್ನದಿಂದ ಆಶ್ಚರ್ಯಕರ ರೀತಿಯಲ್ಲಿ ಸಿದ್ಧಿಸಬಹುದು. ದಿನಸಿ ವ್ಯವಹಾರಗಳಲ್ಲಿ ಹೆಚ್ಚಿನ ಹೂಡಿಕೆಯಿಂದ ಲಾಭವಾಗುವುದು. ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ಮೀನ: ಕೇವಲ ಆಧ್ಯಾತ್ಮಿಕ ವಿಷಯಗಳತ್ತ ಮನಸ್ಸು ಹರಿಯುವುದರಿಂದ ಅದರಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯುವಂತಾಗುವುದು. ಇತರರ ಸಂತೋಷದಲ್ಲಿ ನಿಮ್ಮ ನೆಮ್ಮದಿ ಹಾಗೂ ಸಂತೋಷವನ್ನು ಪಡೆಯುವಿರಿ.

ಪದಬಂಧ 6371

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವೀರಶೈವರ ಸ್ಮಶಾನ ಇಲ್ಲಿದೆ (4)
3.ಕಾಡುಹರಟೆಯಿದು (3)
5.ವಿಸ್ತಾರವಾದ ಜಾಗವು ತಿರುಗಿದಾಗ ಕಾಣಿಸಿತಲ್ಲಾ! (3)
7.ನಾಕದಲ್ಲಿ ತೂರಿಸಿದ ಮೂಗು! (3)
8.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
11.ಇದು ಪುಷ್ಪದ ಶರ (3)
12.ಘಮ ಘಮ ಸುವಾಸನೆ ಬೀರುವ ಪುಷ್ಪ (3)
15.ಮಂದಿ ಬಳಿಯಿರುವ ತಾಯಿ (3)
16.ವಿದಾಯ ಹೇಳಲು ಸೇರಿದ ಗುಂಪು (4)

ಮೇಲಿಂದ ಕೆಳಕ್ಕೆ

1.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
2.ಇದು ಅಪ್ಪಟ ಸುಳ್ಳು (2)
3.ಪದ ಹೇಳಿ ಪಡೆದ ಬಿಲ್ಲೆ (3)
4.ಲಕ್ಷಿಸಲು ಯೋಗ್ಯವಾದುದು (4)
6.ದೇವರ ಹೆಸರಲ್ಲಿ ಬಿಟ್ಟ ಗೂಳಿ (3)
7.ಹೆಸರಿಡುವ ಶಾಸ್ತ್ರ (5)
9. ಸಾವು ಇಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆ (3)
10.ಕೊಬ್ಬಿದ ಆನೆಯಿದು (4)
11.ಸುಮಗಳನ್ನು ಜೋಡಿಸಿಡುವ ಕರಂಡಕ (3)
13.ಮೆಳೆಯ ಹತ್ತಿರ ಸ್ನೇಹಿತನಿದ್ದಾನಲ್ಲಾ (3)
14.ಆವರಣ ಚಿಹ್ನೆಯಿದು (2)



6370ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾಗಾಡಂಬರ 3.ವಿಧಾತ 5.ಗೆಹ 7.ನಸರಿ 8.ಸ್ಥಳ 9.ಬಹುವಚನ 11.ಧನ 13.ಪಲ್ಲವ 14.ನವ 16.ಯದೃಚ್ಛೆ 17.ಆಸೆಬುರುಕ

ಮೇಲಿಂದ ಕೆಳಕ್ಕೆ:
1.ವಾನಪ್ರಸ್ಥ 2.ಬಡಿಗೆ 4.ತಣಿರಿಪ 6.ಹಯವದನ 7.ನಯನ 9.ಬಡವ 10.ತಾಪತ್ರಯ 12.ನಳಪಾಕ 15.ವರಸೆ

ಸುಡೊಕು 6754

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5	4		7			3	
7			2			6		8
8				4			2	5
4		3		1		8		6
			9		4		7	
9		8		3		4		1
1		9	3		5		8	7
	6							
5		7	4		1	9		3

6753 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ತುಂಗಭದ್ರಾ: 26 ಗೇಟ್ ಪೂರ್ಣ, 7 ಬಾಕಿ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯಲ್ಲಿ 26 ಹೊಸ ಕ್ರೆಸ್ಟ್‌ಗೇಟ್‌ಗಳ ಅಳವಡಿಕೆ ಪೂರ್ಣಗೊಂಡಿದೆ. ಮೂರು ಗೇಟ್‌ಗಳ ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಹಳೆ ಗೇಟ್‌ಗಳನ್ನು ತೆಗೆಯುವ ಕೆಲಸ ಮುಗಿದಿದೆ. ಕೊನೆಯ ಗೇಟ್ ಫ್ಯಾಬ್ರಿಕೇಷನ್ ಕೆಲಸ ನಡೆದಿದೆ. ಮಾಸಾಂತ್ಯದೊಳಗೆ ಉಳಿದ 7 ಗೇಟ್‌ಗಳ ಅಳವಡಿಕೆ ಆಗಲಿದೆ' ಎಂದು ತಿಳಿಸಿದ್ದಾರೆ.

'ಈಗ ಅಳವಡಿಸಲಾದ 22 ಹೊಸ ಗೇಟ್‌ಗಳನ್ನು ಎತ್ತುವ, ಇಳಿಸುವ ಪ್ರಯೋಗ ಯಶಸ್ವಿ ಆಗಿದೆ. ತಿಂಗಳಾಂತ್ಯಕ್ಕೆ ಹೊಸ ಚೈನ್‌ಲಿಂಕ್ ಬರುವ ನಿರೀಕ್ಷೆ ಇದೆ' ಎಂದು ತಿಳಿಸಿದ್ದಾರೆ.

ಗಂಡು ಚಿರತೆ ಸಾವು

ಮುಳ್ಳು ಹಂದಿ ಜೊತೆಗಿನ ಕಾದಾಟದಲ್ಲಿ ಮೃತಪಟ್ಟ ಚಿರತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕುಂದಕೆರೆ ಅರಣ್ಯ ವಲಯದ ಬೊಮ್ಮನಹಳ್ಳಿಯಲ್ಲಿ ಶನಿವಾರ, ಮುಳ್ಳಹಂದಿ ಜೊತೆಗೆ ಕಾದಾಡಿದ ಗಂಡು ಚಿರತೆ ಮೃತಪಟ್ಟಿತು.

'2ರಿಂದ 3 ವರ್ಷದ ವಯಸ್ಸಿನ ಚಿರತೆಯ ಎದೆ, ಪಕ್ಕೆಲುಬು, ಮುಖಕ್ಕೆ ಹಂದಿಯ ಮುಳ್ಳುಗಳು ಚುಚ್ಚಿ ಚಿರತೆ ಮೃತಪಟ್ಟಿತು' ಎಂದು ಆರ್‌ಎಫ್‌ಒ ನಾಗೇಂದ್ರನಾಯಕ ತಿಳಿಸಿದರು.

'ಮರಣೋತ್ತರ ಪರೀಕ್ಷೆಗೆ ಅಂಗಾಂಗಗಳ ಮಾದರಿ ಕಳುಹಿಸಿದ್ದು, ಇಲಾಖೆ ಮಾರ್ಗಸೂಚಿ ಅನುಸಾರ ಕಳೇಬರ ಸುಡಲಾಗುವುದು' ಎಂದು ಎಸಿಎಫ್ ನವೀನ್ ಕುಮಾರ್ ತಿಳಿಸಿದರು

ಮೈಸೂರು ಭಾಗದಲ್ಲಿ ಗುಡುಗು ಸಹಿತ ಮಳೆ

ಮೈಸೂರು: ಮೈಸೂರು ಭಾಗದ ಮಂಡ್ಯ, ಚಾಮರಾಜನಗರ ಮತ್ತು ಕೊಡಗಿನ ಹಲವೆಡೆ ಶುಕ್ರವಾರ ರಾತ್ರಿ ಗುಡುಗು, ಬಿರುಗಾಳಿಗೆ ವಿದ್ಯುತ್ ಕಂಬಗಳು, ತೆಂಗಿನಮರಗಳು ಉರುಳಿವೆ.

ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿ ಸಮೀಪದ ಕುದೇರು ಗ್ರಾಮದ ರೈತ ವಿನಯ್ ಅವರ 4 ಎಕರೆ ಜಮೀನಿನಲ್ಲಿ ನೇಂದ್ರ ಬಾಳೆ ನೆಲಕಚ್ಚಿದೆ.

ಮಂಡ್ಯ ತಾಲ್ಲೂಕಿನ ಹೊಳಲು ಗ್ರಾಮದಲ್ಲಿ 15 ವಿದ್ಯುತ್ ಕಂಬಗಳು, ತೆಂಗಿನ ಮರಗಳು ನೆಲಕ್ಕುರುಳಿವೆ. ಗದ್ದೆಗಳು ಜಲಾವೃತಗೊಂಡಿವೆ. ತೆಂಗಿನ ತೋಟಕ್ಕೂ ಹಾನಿಯಾಗಿದೆ.

ಕೊಲೆ ಆರೋಪಿಗಳ ಬಂಧಕ್ಕೆ ಆಗ್ರಹ

ಧಾರವಾಡ: ಹಾಶ್ಮಿನಗರದಲ್ಲಿ ಯುವ ಕಾಂಗ್ರೆಸ್ ಮುಖಂಡ ಫೈರೋಜ್ ಪಠಾಣ್ ಹತ್ಯೆ ಮಾಡಿದ ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಅವರ ಬೆಂಬಲಿಗರು ಹಾಗೂ ಕುಟುಂಬ ಸದಸ್ಯರು ಉಪನಗರ ಠಾಣೆ ಎದುರು ಶವ ಇಟ್ಟು ಪ್ರತಿಭಟನೆ ನಡೆಸಲು ಯತ್ನಿಸಿದ ಘಟನೆ ಶನಿವಾರ ನಡೆಯಿತು.

ಶುಕ್ರವಾರ ರಾತ್ರಿ ಫೈರೋಜ್ ಮನೆಗೆ ದುಷ್ಕರ್ಮಿಗಳು ನುಗ್ಗಿ ಹತ್ಯೆ ಮಾಡಿದ್ದಾರೆ. ಆರೋಪಿಗಳನ್ನು ಈವರೆಗೆ ಪೊಲೀಸರು ಅವರನ್ನು ಬಂಧಿಸಿಲ್ಲ ಎಂದು ಪ್ರತಿಭಟನಾಕಾರರು ದೂರಿದರು. ಆರೋಪಿಗಳನ್ನು ಬಂಧಿಸುವುದಾಗಿ ಭರವಸೆ ನೀಡಿದರು.

ಆರೋಪಿಗಳ ಪತ್ತೆಗೆ ಆರು ತಂಡ ರಚಿಸಲಾಗಿದೆ ಎಂದು ಎಸಿಪಿ ಪ್ರಶಾಂತ್ ಸಿದ್ದನಗೌಡ್ರ 'ಪ್ರಜಾವಾಣಿ'ಗೆ ತಿಳಿಸಿದರು.

ವಂದೇ ಭಾರತ್ ಸ್ಲೀಪರ್: ವರ್ಷದಲ್ಲಿ ಪರೀಕ್ಷಾರ್ಥ ಸಂಚಾರ

ನವದೆಹಲಿ (ಪಿಟಿಐ): ವಂದೇ ಭಾರತ್ ಸ್ಲೀಪರ್ ರೈಲನ್ನು ಮೂಲ ವಿನ್ಯಾಸಕ್ಕೆ ಅನುಗುಣವಾಗಿ ರೈಲು ವಿಕಾಸ ನಿಗಮ ಲಿಮಿಟೆಡ್ ನೇತೃತ್ವದ ಜಂಟಿ ಸಂಸ್ಥೆಗಳು ತಯಾರಿಸಿದ್ದು, ವರ್ಷದೊಳಗಾಗಿ ಇದು ಪರೀಕ್ಷಾರ್ಥ ಸಂಚಾರಕ್ಕೆ ಲಭ್ಯವಾಗಲಿದೆ ಎಂದು ರೈಲ್ವೆ ಮಂಡಳಿಯ ಮುಖ್ಯಸ್ಥ ಸತೀಶ್ ಕುಮಾರ್ ಅವರು ಹೇಳಿದರು.

ರೈಲು ವಿಕಾಸ ನಿಗಮ ಲಿಮಿಟೆಡ್‌ನ 21ನೇ ವಾರ್ಷಿಕ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ರೈಲ್ವೆ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ನವರತ್ನ ಸಾರ್ವಜನಿಕ ಸಂಸ್ಥೆಯು ವಂದೇ ಭಾರತ್ ಸ್ಲೀಪರ್ ರೈಲುಗಳನ್ನು ತಯಾರಿಸಲಿದೆ. ಪರೀಕ್ಷಾರ್ಥ ಸಂಚಾರದ ಬಳಿಕ 120 ರೈಲುಗಳನ್ನು ಸಂಸ್ಥೆ ಪೂರೈಸಲಿದೆ' ಎಂದು ಹೇಳಿದರು.

'ಅಧಿಕಾರ ಕೊಟ್ಟರೆ ಗ್ರಹಣ ಬಿಡಿಸುವೆ'

ಜೆಡಿಎಸ್ ಸಮಾವೇಶದಲ್ಲಿ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವತಂತ್ರ ಸರ್ಕಾರ ರಚಿಸಲು ಜೆಡಿಎಸ್‌ಗೆ ಅವಕಾಶ ನೀಡಿ. ಬೆಂಗಳೂರು ಮತ್ತು ರಾಜ್ಯದಲ್ಲಿ ಅಭಿವೃದ್ಧಿಗೆ ಬಡಿದಿರುವ ಗ್ರಹಣವನ್ನು ಬಿಡಿಸುತ್ತೇನೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಪಕ್ಷದ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ 'ಜೆಡಿಎಸ್ ಗ್ರೇಟರ್ ಬೆಂಗಳೂರು ಸಮಾವೇಶ'ವನ್ನು ಉದ್ದೇಶಿಸಿ ಅವರು ಮಾತನಾಡಿದರು. 'ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದೆ. ನಂತರ ಬಂದ ಸರ್ಕಾರಗಳು ಆ ಕಾರ್ಯಕ್ರಮಗಳನ್ನು ಕಡೆಗಣಿಸಿದವು' ಎಂದರು.

'ನಗರದ ಬಸವೇಶ್ವರ ವೃತ್ತದಿಂದ ಹೆಬ್ಬಾಳ ವೃತ್ತದವರೆಗೆ ನಾಲ್ಕು ಪಥಗಳ ಸುರಂಗ ರಸ್ತೆ ನಿರ್ಮಿಸಲು ಟೆಂಡರ್ ಕರೆದಿದ್ದೆವು. ನಮ್ಮ ಸರ್ಕಾರ ಹೋದ ಮೇಲೆ ಆ ಯೋಜನೆಯೂ ಹೋಯಿತು. ಈಗಿನ ಸರ್ಕಾರ ಅಂಥದ್ದೇ ಯೋಜನೆ ಜಾರಿಗೆ ಮುಂದಾಗಿದೆ. ನಾನು ₹3,000 ಕೋಟಿ ವೆಚ್ಚದ ಯೋಜನೆ ರೂಪಿಸಿದ್ದರೆ, ಇವರು ₹28,000 ಕೋಟಿ ವೆಚ್ಚ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ನಗರದಲ್ಲಿ ಯಾವೊಂದು ರಸ್ತೆಗಳೂ ಗುಂಡಿಗಳಿಂದ ಮುಕ್ತವಾಗಿಲ್ಲ. ಕಸದ ರಾಶಿ ಎಲ್ಲೆಡೆ ಬಿದ್ದಿದೆ. ಅಭಿವೃದ್ಧಿ ಕಾರ್ಯಗಳು ನನೆಗುದಿಗೆ ಬಿದ್ದಿವೆ. ಇವುಗಳಿಂದ ನಗರ ಮುಕ್ತವಾಗಬೇಕು ಅಂದರೆ ನಮ್ಮ ಸರ್ಕಾರ ಬರಬೇಕು. ಆಗ ಯಾರ ಎದುರೂ ಕೈಜೋಡಿಸುವ ಸ್ಥಿತಿ ಬರುವುದಿಲ್ಲ. ಅಭಿವೃದ್ಧಿ ಕಾರ್ಯ ನಡೆಸಬಹುದು. ನಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಗಳ ಚುನಾವಣೆಗಳಿಂದಲೇ ಆಗಬೇಕು. ಟಿಕೆಟ್ ಆಕಾಂಕ್ಷಿಗಳು, ಪಕ್ಷದ ನಾಯಕರು ಪ್ರತಿ ವಾರ್ಡ್‌ನಲ್ಲಿ ದಿನ ಒಂದು ಗಂಟೆ ಸಮಯ ವಿನಿಯೋಗಿಸಿದರೂ ನಾವು ಗೆಲ್ಲಬಹುದು' ಎಂದರು.

ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ, 'ಈ ಸರ್ಕಾರಕ್ಕೆ ಜಿಬಿಎ ಪಾಲಿಕೆಗಳ ಚುನಾವಣೆ ನಡೆಸುವ ಉದ್ದೇಶವಿಲ್ಲ. ನ್ಯಾಯಾಲಯ ಆದೇಶಿಸಿದೆ ಎಂಬ ಮಾತ್ರಕ್ಕಷ್ಟೇ ಚುನಾವಣೆ ನಡೆಯಬೇಕು. ಅದು ಯಾವಾಗ ನಡೆದರೂ, ನಾವು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಪ್ರಮುಖರ ಸಮಿತಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಪಕ್ಷದ ಜಿಬಿಎ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ ಸಮಾವೇಶದಲ್ಲಿ ಭಾಗಿಯಾಗಿದ್ದರು.

'ಗಾರ್ಬೇಜ್, ಬ್ಯಾಡ್‌ರೋಡ್'

'ಬಿಬಿಎಂಪಿಯ ಹೆಸರನ್ನು ಜಿಬಿಎ ಬದಲಾಯಿಸಿದ್ದಷ್ಟೇ ಈ ಸರ್ಕಾರದ ಸಾಧನೆ. ಜಿ ಅಂದರೆ ಗಾರ್ಬೇಜ್, ಬಿ ಅಂದರೆ ಬ್ಯಾಡ್‌ರೋಡ್, ಎ ಅಂದರೆ ಎ ಖಾತಾ ಹಗರಣ ಎಂಬಂತಾಗಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಬೆಂಗಳೂರು ಅಭಿವೃದ್ಧಿಗೆ ದೇವೇಗೌಡರ ಕೊಡುಗೆ ಏನು ಎಂಬುದು ನಗರದ ಜನರ ಮನಸ್ಸಿನಲ್ಲಿ ಇದೆ. ಅವರು ಅಧಿಕಾರದಲ್ಲಿ ಇದ್ದಾಗ, ಸಿಂಗಪೂರ ಸರ್ಕಾರದ ಜತೆ ಮಾತನಾಡಿ ವೈಟ್‌ಫೀಲ್ಡ್‌ನಲ್ಲಿ 40,000 ಉದ್ಯೋಗ ಸೃಷ್ಟಿಸಿದ್ದರು. ಐಟಿ–ಬಿಟಿ ಕಂಪನಿಗಳಿಗೆ ತೆರಿಗೆ ವಿನಾಯತಿ, ನಗರದ ರಸ್ತೆಗಳಲ್ಲಿ ಮೇಲ್ಸೇತುವೆ ಮತ್ತು ಕಾವೇರಿ ನಾಲ್ಕನೇ ಹಂತದಲ್ಲಿ ನಗರಕ್ಕೆ ನೀರು ಒದಗಿಸಿದ ಶ್ರೇಯ ದೇವೇಗೌಡರದ್ದು' ಎಂದರು.

ಬೆಂಗಳೂರಿನ ಕೊಮ್ಮಘಟ್ಟ ನೈಸ್ ಗ್ರೌಂಡ್ ನಲ್ಲಿ ಶನಿವಾರ ಜೆಡಿಎಸ್ ಆಯೋಜಿಸಿದ್ದ ಜನತಾ ಸಮಾವೇಶ ಹಾಗೂ ಪಕ್ಷದ ಬೆಳ್ಳಿಹಬ್ಬದ ಸಂಭ್ರಮ ಸಮಾರಂಭದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು —ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ವಿರುದ್ಧ ದೇವೇಗೌಡ ವಾಗ್ದಾಳಿ

'ಸಿದ್ದರಾಮಯ್ಯ ಯಾವತ್ತಿಗೂ ಸಾಮಾಜಿಕ ನ್ಯಾಯದ ಪರ ಇರಲಿಲ್ಲ' ಎಂದು ಎಚ್.ಡಿ.ದೇವೇಗೌಡ ಹೇಳಿದರು.

'ತಾನು ಸಾಮಾಜಿಕ ನ್ಯಾಯದ ಪರ ಇದ್ದೇನೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಸಿದ್ದರಾಮಯ್ಯ ತಮ್ಮ ಆತ್ಮವನ್ನು ಪ್ರಶ್ನಿಸಿಕೊಳ್ಳಬೇಕು. ರಾಜಕೀಯವಾಗಿ ತಾವು ಮೇಲೆ ಬರಲು ಅವರು ಸಾಮಾಜಿಕ ನ್ಯಾಯ ಮತ್ತು ಅಹಿಂದ ಎಂಬುದನ್ನು ವ್ಯವಸ್ಥಿತವಾಗಿ ಬಳಸಿಕೊಂಡಿದ್ದಾರೆ' ಎಂದು ಆರೋಪಿಸಿದರು.

'ಒಬ್ಬ ಮುಸ್ಲಿಂ ನಾಯಕನನ್ನು ಚುನಾವಣೆಯಲ್ಲಿ ಗೆಲ್ಲಿಸಲು ದರಿದ್ರ ನಾರಾಯಣ ರ್‍ಯಾಲಿ ನಡೆಸಿದೆವು. ಆ ರ್‍ಯಾಲಿಗೆ ಸಿದ್ದರಾಮಯ್ಯ ಬರಲಿಲ್ಲ. ವೇದಿಕೆ ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಸುಮ್ಮನೆ ಬಂದು ಹಾಜರಿ ಹಾಕಿ ಹೋದರು. ತಾನು ಅಹಿಂದ ನಾಯಕ ಎಂದು ಕರೆದುಕೊಳ್ಳುವವರು ನಮ್ಮ ಸರ್ಕಾರವನ್ನು ಬೀಳಿಸಿದರು. ಸಾಮಾಜಿಕ ನ್ಯಾಯ ಮತ್ತು ಅಹಿಂದದ ಬಗ್ಗೆ ಅವರಿಗೆ ಇರುವ ಬದ್ಧತೆ ಇಂಥದ್ದು' ಎಂದು ಟೀಕಿಸಿದರು.

ಕುಮಾರಸ್ವಾಮಿ, 'ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವವರು ಸಮಾಜಗಳನ್ನು ಒಡೆದು ಲಾಭ ಮಾಡಿಕೊಳ್ಳುತ್ತಿದ್ದೀರಿ. ಆಯೋಗದ ಮೇಲೆ ಆಯೋಗ ರಚನೆ ಮಾಡಿದ್ದೀರಿ. ನಿಮ್ಮ ಕಾಂತರಾಜು ವರದಿ ಎಲ್ಲಿ ಹೋಯಿತು? ಜಯಪ್ರಕಾಶ್ ಹೆಗಡೆ ಅವರಿಂದ ಪಡೆದುಕೊಂಡ ವರದಿಯನ್ನು ಎಲ್ಲಿ ಇಟ್ಟಿದ್ದೀರಿ? ನೇಮಕಾತಿ ಪ್ರಕ್ರಿಯೆ ಎಲ್ಲಿ ಹೋಯಿತು' ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ರೈಲುಗಳ ಸಂಚಾರ ವ್ಯತ್ಯಯ

ಬೆಂಗಳೂರು: ಚನ್ನಸಂದ್ರ ರೈಲು ನಿಲ್ದಾಣದಲ್ಲಿ ಯಾರ್ಡ್ ಮರುವಿನ್ಯಾಸ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕೆಲವು ರೈಲುಗಳ ಸಂಚಾರ ಸಮಯ ಬದಲಾಗಲಿದೆ. ಇನ್ನು ಕೆಲವು ರೈಲುಗಳ ಸಂಚಾರ ತಾತ್ಕಾಲಿಕವಾಗಿ ರದ್ದುಗೊಳ್ಳಲಿದೆ.

ಕೆಎಸ್‌ಆರ್ ಬೆಂಗಳೂರು - ಕೋಲಾರ ಮೆಮು, ಕೋಲಾರ - ಬಂಗಾರಪೇಟೆ ಮೆಮು, ಬಂಗಾರಪೇಟೆ – ಕೋಲಾರ ಮೆಮು, ಕೋಲಾರ - ಬೆಂಗಳೂರು ಕಂಟೋನ್ಮೆಂಟ್ ಮೆಮು ರೈಲುಗಳ ಸಂಚಾರವನ್ನು ಏಪ್ರಿಲ್ 29ರಿಂದ ಮೇ 2ರವರೆಗೆ ರದ್ದುಗೊಳಿಸಲಾಗಿದೆ.

ಎಸ್‌ಎಂವಿಟಿ ಬೆಂಗಳೂರು-ಬೀದರ್ ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಮೇ 1ರಂದು, ಬೀದರ್ – ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಮೇ 2ರಂದು ಸಂಚಾರ ರದ್ದುಗೊಳಿಸಲಾಗಿದೆ.

ಏಪ್ರಿಲ್ 15ರಿಂದ ಮೇ 2 ರವರೆಗೆ ಕೆಎಸ್‌ಆರ್ ಬೆಂಗಳೂರು - ಹಜೂರ್ ಸಾಹಿಬ್ ನಾಂದೇಡ್ ಎಕ್ಸ್‌ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು ನಿಲ್ದಾಣದಿಂದ 75 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'ಕೇರಳದ ಬಾಲಕಿ ಸಾವು: ಅನುಮಾನದ ಅಂಶ ಇಲ್ಲ'

ಚಿಕ್ಕಮಗಳೂರು: ಮಾಣಿಕ್ಯಧಾರ ಜಲಪಾತದ ಬಳಿ ಮೃತಪಟ್ಟಿದ್ದ ಕೇರಳದ 16 ವರ್ಷದ ಬಾಲಕಿಯ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯಲ್ಲಿ ಅನುಮಾನಾಸ್ಪದ ಅಂಶ ಕಂಡು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಏ.7ರಂದು ಜಲಪಾತದ ಬಳಿ ನಾಪತ್ತೆಯಾಗಿದ್ದ ಬಾಲಕಿ ಸಮೀಪದ ಪ್ರಪಾತದಲ್ಲಿ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಳು. ಕೇರಳದ ವೈದ್ಯರಿಂದಲೇ ಮರಣೋತ್ತರ ಪರೀಕ್ಷೆ ನಡೆಸಬೇಕು ಎಂದು ಬಾಲಕಿಯ ಕುಟುಂಬಸ್ಥರು ಒತ್ತಾಯಿಸಿದ್ದರು. ಮನವೊಲಿಕೆ ನಂತರ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಇಬ್ಬರು ತಜ್ಞ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ್ದರು.

'ಸಾವಿನ ಬಗ್ಗೆ ಶಂಕಾಸ್ಪದ ಅಂಶ ಕಾಣಿಸಿಲ್ಲ ಎಂಬ ಮಾಹಿತಿ ಇದೆ. ವರದಿ ಬಂದಿಲ್ಲ. ಶುಕ್ರವಾರ ತಡರಾತ್ರಿ ಶವವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು. ಪಾಲಕ್ಕಾಡಿನ ಅವರ ಮನೆ ತನಕ ಪೊಲೀಸರು ಬೆಂಗಾವಲಾಗಿ ಹೋಗಿದ್ದರು. ಅಂತ್ಯಸಂಸ್ಕಾರ ಶನಿವಾರ ನಡೆದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ..

ಜೋರಾದ ಸಂಪುಟ ಪುನರಾಚನೆ ಕೂಗು: ಸಚಿವ ಹುದ್ದೆಗೆ ಹಿರಿಯರ ಪಟ್ಟು

ಕಾಂಗ್ರೆಸ್ ಶಾಸಕರು ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಮುಗಿಯುತ್ತಿದ್ದಂತೆ, ಕಾಂಗ್ರೆಸ್‌ನಲ್ಲಿ ಸಚಿವ ಸಂಪುಟ ಪುನರಾಚನೆಯ ಕೂಗು ಜೋರಾಗಿದೆ. ಈ ಬೇಡಿಕೆ ಮುಂದಿಟ್ಟು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಒತ್ತಾಯಿಸಲು ಹಿರಿಯ ಶಾಸಕರ ತಂಡ ಸಜ್ಜಾಗಿದೆ.

ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ನೇತೃತ್ವದಲ್ಲಿ ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿಯೂ ಆಗಿರುವ ಟಿ.ಬಿ. ಜಯಚಂದ್ರ, ಎನ್. ಎಚ್. ಕೋನರಡ್ಡಿ, ಎಸ್.ಎನ್. ನಾರಾಯಣಸ್ವಾಮಿ ಸೇರಿ 20ಕ್ಕೂ ಹೆಚ್ಚು ಶಾಸಕರು ಭಾನುವಾರ ಸಂಜೆ ದೆಹಲಿಗೆ ಪ್ರಯಾಣಿಸಲಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಟಿ.ಬಿ. ಜಯಚಂದ್ರ, 'ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ 3–4 ಬಾರಿ ಗೆದ್ದಿರುವ ಶಾಸಕರು ಸ್ವ ಇಚ್ಛೆಯಿಂದ ದೆಹಲಿಗೆ ಬರುತ್ತಿದ್ದಾರೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಸಚಿವ ಸಂಪುಟದ ಅವಧಿ ಮೂರು ವರ್ಷ ಪೂರೈಸಲಿದೆ. ಮುಂದಿನ ಎರಡು ವರ್ಷಗಳಲ್ಲಿನ ರಾಜಕೀಯ ಏರು-ಪೇರುಗಳನ್ನು ಗಮನದಲ್ಲಿ ಇಟ್ಟುಕೊಂಡು ಇತರರಿಗೂ ಅವಕಾಶ ನೀಡಬೇಕು ಎಂಬುದು ಹಿರಿಯ ಶಾಸಕರ ಬೇಡಿಕೆ. ಸಂಪುಟ ಪುನರ್ ರಚನೆಯ ಕುರಿತ ಮನವಿಯನ್ನು ಮಲ್ಲಿಕಾರ್ಜುನ ಖರ್ಗೆ ಅವರ ಎದುರು ಮಂಡಿಸಲಾಗುವುದು. ಈ ವಿಚಾರದಲ್ಲಿ ವರಿಷ್ಠರ ನಿರ್ಧಾರವೇ ಅಂತಿಮ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೂ ಈ ಭೇಟಿಯ ವಿಷಯವನ್ನು ತಂದಿದ್ದು, ಅವರೂ ಕೂಡ ಸಮ್ಮತಿ ಸೂಚಿಸಿದ್ದಾರೆ' ಎಂದರು.

ಕಳಪೆ ಸಾಧನೆ ತೋರಿದ ಸಚಿವರನ್ನು ಸಂಪುಟದಿಂದ ಕೈಬಿಡಬೇಕು. ಕನಿಷ್ಠ 20ರಿಂದ 25 ಹೊಸ ಮುಖಗಳಿಗೆ ಸ್ಥಾನ ನೀಡುವ ಮೂಲಕ ಸಂಪುಟ ಪುನರ್ ರಚನೆ ಮಾಡಬೇಕು. ಆಗ ಮಾತ್ರ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಗೆಲ್ಲಲು ಸಾಧ್ಯವಾಗಲಿದೆ. ಈ ಹಿಂದೆ ಹಿರಿಯ ಶಾಸಕರಿಗೆ ನೀಡಿದ ಭರವಸೆಯಂತೆ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಹಿರಿಯ ಶಾಸಕರು ಆಗ್ರಹಿಸಿದ್ದಾರೆ.

ಸಚಿವ ಸಂಪುಟ ಪುನರ್ ರಚಿಸಿ, ಹಿರಿಯರಿಗೆ ಅವಕಾಶ ಕೊಡಬೇಕೆಂದು ಮನವಿ ಮಾಡಲು ಭಾನುವಾರ ದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ನಾಯಕರನ್ನು ಭೇಟಿಯಾಗಿ ಮನವಿ ಸಲ್ಲಿಸುತ್ತೇವೆ

ಟಿ.ಬಿ. ಜಯಚಂದ್ರ, ದೆಹಲಿ ಪ್ರತಿನಿಧಿ, ಕರ್ನಾಟಕ ಸರ್ಕಾರ

ತಜ್ಞ ಮಹಿಳೆಯರಿಗೆ ಆದ್ಯತೆ–ಶೋಭಾ

ಶೋಭಾ

ಬೆಂಗಳೂರು: ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬಂದ ನಂತರ ವಿವಿಧ ಕ್ಷೇತ್ರಗಳ ತಜ್ಞ ಮಹಿಳೆಯರನ್ನು ಗುರುತಿಸಿ ಅವರಿಗೆ ಟಿಕೆಟ್ ನೀಡಬೇಕು. ಈಗಾಗಲೇ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರಿಗೆ, ಜನಪ್ರತಿನಿಧಿಗಳಿಗೆ ಮೊದಲ ಆದ್ಯತೆ ಸಿಗಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಕುರಿತು ಸಂಸತ್ ಅಧಿವೇಶನ ನಡೆಯಲಿದೆ. ಈ ಕುರಿತು ಮಹಿಳೆಯರಲ್ಲಿ ಜಾಗೃತಿ ಮೂಡಿಸಲಾಗುವುದು. ಕರ್ನಾಟಕದ ಗ್ರಾಮ ಪಂಚಾಯಿತಿಗಳನ್ನು ಗಣನೆಗೆ ತೆಗೆದುಕೊಂಡರೆ ಮಹಿಳಾ ಅಧ್ಯಕ್ಷರು ಇರುವ ಕಡೆ ಅತ್ಯುತ್ತಮ ಸಾಧನೆ ಆಗಿದೆ. ಅಂತಹ ಮಹಿಳೆಯರನ್ನು ಗುರುತಿಸುವ ಕಾರ್ಯ ಆಗಬೇಕಿದೆ ಎಂದರು.

ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಗಳ ಚುನಾವಣೆ ಮೇಲೆ ಪ್ರಭಾವ ಬೀರುವುದಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಸೂದೆಗೆ ವಿರೋಧ ಇದ್ದಾರಾ? ಚರ್ಚೆ ಮಾಡುವುದಕ್ಕೆ ವಿರೋಧವಿದೆಯಾ ಎನ್ನುವುದನ್ನು ಖಚಿತಪಡಿಸಬೇಕು ಎಂದು ಒತ್ತಾಯಿಸಿದರು.

ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ಸಿ.ಮಂಜುಳಾ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆ ಕುರಿತು ಎಲ್ಲ ಜಿಲ್ಲೆಗಳಲ್ಲೂ ಸಮಾವೇಶ ಹಮ್ಮಿಕೊಳ್ಳಲಾಗುವುದು. ಸಹಿ ಸಂಗ್ರಹ ನಡೆಸಲಾಗುವುದು. ಏ.12ರಂದು ಕೆ.ಆರ್. ಪುರದಲ್ಲಿ ಶೋಭಾ ಕರಂದ್ಲಾಜೆ ಅವರು ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡುವರು ಎಂದು ಮಾಹಿತಿ ನೀಡಿದರು.

ಭೂಮಿಗೆ ಮರಳಿದ ಗಗನಯಾನಿಗಳು

ಒಂದನೇ ಪುಟದಿಂದ...

'ಅಮೆರಿಕದ ರೀಡ್ ವೈಸ್‌ಮನ್, ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಮತ್ತು ಕೆನಡಾದ ಜೆರಮಿ ಹ್ಯಾನ್ಸನ್ ಅವರು ಸ್ಯಾನ್ ಡಿಯಾಗೊ ಕರಾವಳಿಯ ಮೂಲಕ ಶುಕ್ರವಾರ ಭೂಮಿಗೆ ಮರಳಿದರು' ಎಂದು ನಾಸಾದ ಸಹ ಆಡಳಿತಾಧಿಕಾರಿ ಅಮಿತ್ ಕ್ಷತ್ರಿಯ ಅವರು ತಿಳಿಸಿದ್ದಾರೆ.

'ಗಗನಯಾನಿಗಳು ಆರೋಗ್ಯವಾಗಿದ್ದಾರೆ. ತಮ್ಮ ಮನೆಗಳಿಗೆ ಮರಳಲು ಸಿದ್ಧರಾಗಿದ್ದಾರೆ' ಎಂದು ಚಂದ್ರಯಾನದ ನಿರ್ದೇಶಕ ರಿಕ್ ಹೆನ್‌ಫ್ಲಿಂಗ್ ಅವರು ತಿಳಿಸಿದ್ದಾರೆ.



ಐವರಿಗೆ 'ಅಂಬೇಡ್ಕರ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವ 2026ನೇ ಸಾಲಿನ 'ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ'ಗೆ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹5 ಲಕ್ಷ ನಗದು, 20 ಗ್ರಾಂ ಚಿನ್ನ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಅಂಬೇಡ್ಕರ್ ಜಯಂತಿ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇದೇ 14ರಂದು ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪ್ರಶಸ್ತಿ ಪುರಸ್ಕೃತರು: ಬೆಂಗಳೂರು ಕೇಂದ್ರ ವಿಭಾಗದಿಂದ ರಾಜರಾಜೇಶ್ವರಿ ನಗರದ ಮಂಗ್ಳೂರ ವಿಜಯ (ಹೋರಾಟ/ಸಾಹಿತ್ಯ), ಕೋಲಾರದ ಸಿ.ಎಂ. ಮುನಿಯಪ್ಪ (ಹೋರಾಟ/ಪತ್ರಿಕೋದ್ಯಮ), ಮೈಸೂರು ವಿಭಾಗದಿಂದ ಸಕಲೇಶಪುರ ತಾಲ್ಲೂಕಿನ ಹೆತ್ತೂರಿನ ಎಚ್.ಎನ್. ಅಣ್ಣಯ್ಯ (ಹೋರಾಟ), ಕಲಬುರಗಿ ವಿಭಾಗದಿಂದ ಅಫಜಲಪುರದ ಹನುಮಂತ ರಾವ್ ದೊಡ್ಡಮನಿ (ಸಾಹಿತ್ಯ/ಸಂಘಟನೆ), ಬೆಳಗಾವಿ ವಿಭಾಗದಿಂದ ಅಮ್ಮ ಫೌಂಡೇಷನ್‌ನ ಕಾರ್ಯದರ್ಶಿ ಶೋಭಾ ಗಸ್ತಿ (ದೇವದಾಸಿ ವಿಮುಕ್ತಿ).

ಮಂಗ್ಳೂರ ವಿಜಯ



ಕೊಪ್ಪಳ ಜಿಲ್ಲೆಯ ಮಂಗಳೂರ ಗ್ರಾಮದವರಾದ ಮಂಗ್ಳೂರ ವಿಜಯ ಅವರು 'ಸಮಾಜವಾದಿ ಯುವಜನ ಸಭಾ' ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ದಲಿತ ಸಂಘರ್ಷ ಸಮಿತಿ ಜತೆಗೆ ಗುರುತಿಸಿಕೊಂಡು ಚಿತ್ರದುರ್ಗ ಮತ್ತು ಕಲಬುರಗಿಯಲ್ಲಿ ಸಂಘಟನೆ ಕಟ್ಟಲು ಶ್ರಮಿಸಿದ್ದರು. ಸರ್ಕಾರಿ ಕೆಲಸ ಬಿಟ್ಟು ಪತ್ರಕರ್ತರಾಗಿ, ಮತ್ತೆ ಸರ್ಕಾರಿ ಕೆಲಸಕ್ಕೆ ಸೇರಿ ದಶಕದ ಹಿಂದೆ ನಿವೃತ್ತರಾದರು.

ರಾಜ್ಯ ಸರ್ಕಾರ ಪ್ರಕಟಿಸಿದ 'ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು' ಮಾಲಿಕೆಗೆ ಇಂಗ್ಲಿಷ್ ಲೇಖನಗಳನ್ನು ಅನುವಾದಿಸಿಕೊಟ್ಟಿದ್ದಾರೆ. 'ಸಂಘರ್ಷ: ಅಂಬೇಡ್ಕರ್ ಜೀವನ ಮತ್ತು ಸಾಧನೆ' ಇವರ ಮಹತ್ವದ ಕೃತಿಯಾಗಿದೆ. ಅಂಬೇಡ್ಕರ್ ವಿಚಾರಗಳನ್ನು ಕೆಲಸ ಮಾಡುತ್ತಿದ್ದಾರೆ.

ಎಚ್.ಎನ್. ಅಣ್ಣಯ್ಯ



ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹೆತ್ತೂರು ಗ್ರಾಮದ ಜನಪರ, ದಲಿತಪರ ಹೋರಾಟಗಾರ ಎಚ್.ಎನ್. ಅಣ್ಣಯ್ಯ 80 ರ ದಶಕದಿಂದ ದಲಿತ, ರೈತ ಚಳವಳಿಯಲ್ಲಿ ಸಕ್ರಿಯರಾಗಿದ್ದಾರೆ. ದಲಿತ ಸಂಘರ್ಷ ಸಮಿತಿ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

1977ರಲ್ಲಿ ಎಡಕೇರಿಯಲ್ಲಿ ದಲಿತರ ಭೂಮಿಗಾಗಿ ಹೋರಾಟ ಮಾಡಿದ್ದರು. ಸದ್ಯ ದಲಿತ ಸಂಘರ್ಷ ಸಮಿತಿ ಸಂಯೋಜಕ ವಿಭಾಗದ ರಾಜ್ಯ ಸಂಚಾಲಕರಾಗಿದ್ದಾರೆ. ಮಲೆನಾಡ ದಲಿತ ಕಣ್ಮಣಿ, ದಲಿತ ಸಿರಿ ಸೇರಿ ಹಲವು ಪ್ರಶಸ್ತಿಗಳು ಬಂದಿವೆ.

'ಮೂಢನಂಬಿಕೆ ಹೆಸರಿನಲ್ಲಿ ಜನರ ಮೇಲಿನ ದಬ್ಬಾಳಿಕೆ ವಿರೋಧಿಸಿ ನನ್ನ ತಂದೆ ತಂಬೂರಿ ನಿಂಗಯ್ಯ ಹೋರಾಟ ಮಾಡಿದ್ದರು. ಅಸ್ಪೃಶ್ಯತೆ, ದಬ್ಬಾಳಿಕೆ ನೋಡಿಕೊಂಡೇ ಬೆಳೆದಿದ್ದೆವು. ಹಾಗಾಗಿ ದಲಿತ ಪರ ಹೋರಾಟದಲ್ಲಿ ತೊಡಗಿದೆ' ಎಂದು ಅಣ್ಣಯ್ಯ ಪ್ರತಿಕ್ರಿಯಿಸಿದರು.

ಹನುಮಂತರಾವ ಬಿ.ದೊಡ್ಡಮನಿ

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಮಲ್ಲಾಬಾದ್ ಗ್ರಾಮದವರಾದ ಹಿರಿಯ ಸಾಹಿತಿ ಹನುಮಂತರಾವ ಬಿ.ದೊಡ್ಡಮನಿ ಅವರು ದಲಿತ ಚಳವಳಿ ಮತ್ತು ಸಾಹಿತ್ಯ ಕೃಷಿಯಲ್ಲಿ ಹೆಸರು ಮಾಡಿದ್ದಾರೆ.

ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವರು ನಿವೃತ್ತಿಯ ಬಳಿಕ ಸಾಹಿತ್ಯ ಚಟುವಟಿಕೆ ಹಾಗೂ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. 40 ಕೃತಿಗಳು, 8 ಕವನ ಸಂಕಲನ, 3 ಕಥಾ ಸಂಕಲನ ರಚಿಸಿದ್ದಾರೆ. ಜನಪದ, ಸಂಶೋಧನೆ, ನಾಟಕಗಳನ್ನೂ ಬರೆದಿದ್ದಾರೆ.

2024ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು. ಚುಂಚೂರು ಮಾಪೂರತಾಯಿ ಕೃತಿಗೆ 'ನಿರಂದರೇಶ್ವರ ರಾಷ್ಟ್ರ ಪ್ರಶಸ್ತಿ' ಬಂದಿದೆ. ಕಲಬುರಗಿಯಲ್ಲಿ ಹನುಮಂತರಾವ ನೇತೃತ್ವದಲ್ಲಿ ರಾಜ್ಯ ಮಟ್ಟದ ದಲಿತ ಸಾಹಿತ್ಯ ಸಮ್ಮೇಳನ ನಡೆದಿತ್ತು.

ಶೋಭಾ ಗಸ್ತಿ

ಬೆಳಗಾವಿ ಜಿಲ್ಲೆಯ ಮೂಡಲಗಿಯ ಶೋಭಾಗಸ್ತಿ ಅವರದು ಹೋರಾಟದ ಬದುಕು. ಬಾಲ್ಯದಲ್ಲೇ ಅವರಿಗೆ ಮುತ್ತು ಕಟ್ಟಿ ದೇವದಾಸಿ ಮಾಡಲಾಯಿತು. ಋತುಮತಿಯಾದ ಬಳಿಕ 12ನೇ ವಯಸ್ಸಿಗೆ 'ಸಂಪ್ರದಾಯ'ದಂತೆ ಲೈಂಗಿಕ ಕಾರ್ಯಕರ್ತೆ ಆಗುವಂತೆ ಮನೆಯವರೇ ತಳ್ಳಿದರು. ಸಂಕಷ್ಟಗಳ ಮಧ್ಯೆ ಎಸ್‌ಎಸ್‌ಎಲ್‌ಸಿ ಮುಗಿಸಿದರು.

'ಮೈರಾಡ' ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೋಭಾ ಅವರಿಗೆ ಅರಿವು ಮೂಡಿಸಲಾಯಿತು. ಕಾನೂನು ಅರಿವು ಪಡೆದು ಹೋರಾಟ ಕೈಗೊಂಡರು. ಬೆಳಗಾವಿ ಜಿಲ್ಲೆಯಲ್ಲಿ 3,600 ಹೆಣ್ಣುಮಕ್ಕಳನ್ನು ದೇವದಾಸಿ ಪದ್ಧತಿಯಿಂದ ಮುಕ್ತಗೊಳಿಸಿದರು. ಶೋಭಾ ಅವರು ಅಮ್ಮ ಫೌಂಡೇಷನ್ ಎಂಬ ಎನ್‌ಜಿಒದಲ್ಲಿ ಕೆಲಸ ಮಾಡಿ ಉಪಜೀವನ ಸಾಗಿಸಿದ್ದಾರೆ. ಮಗನನ್ನು ಎಂಬಿಎ, ಮಗಳನ್ನು ಬಿ.ಎಸ್‌ಸಿ ಬಿ.ಇಡಿ ಓದಿಸಿದ್ದಾರೆ. ಇಬ್ಬರಿಗೂ ಮದುವೆ ಮಾಡಿ ಗೌರವಯುತ ಜೀವನ ಕಟ್ಟಿಕೊಟ್ಟಿದ್ದಾರೆ. ಅವರ ಸಾಧನೆ ಪರಿಗಣಿಸಿ ಕಳೆದ ವರ್ಷ ಕೇಂದ್ರ ಸರ್ಕಾರ 'ನಾರಿಶಕ್ತಿ' ಪ್ರಶಸ್ತಿ ಪ್ರದಾನ ಮಾಡಿದೆ.

ಸಿ.ಎಂ.ಮುನಿಯಪ್ಪ

ಕೋಲಾರ ತಾಲ್ಲೂಕಿನ ಚಿಕ್ಕಹಸಾಳ ಗ್ರಾಮದ ಸಿ.ಎಂ. ಮುನಿಯಪ್ಪ 66 ವರ್ಷಗಳ ಜೀವನದಲ್ಲಿ 50 ವರ್ಷಗಳನ್ನು ಹೋರಾಟದಲ್ಲಿಯೇ ಕಳೆದಿದ್ದಾರೆ. ನಾಲ್ಕು ದಶಕ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಜಿಲ್ಲಾ, ರಾಜ್ಯ ಸಂಚಾಲಕರಾಗಿ ಮತ್ತು ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ದಲಿತ ವಿದ್ಯಾರ್ಥಿಗಳ ಹಾಸ್ಟೆಲ್‌ಗಾಗಿ 1978ರಲ್ಲಿ ಹೋರಾಟ ಆರಂಭಿಸಿದರು. ನಂತರ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ವಿರುದ್ಧ, ಕೊಲೆ, ಅತ್ಯಾಚಾರದಂಥ ಕೃತ್ಯಗಳ ವಿರುದ್ಧ ಸಮುದಾಯ ಸಂಘಟಿಸಿದ್ದಾರೆ. ಅವರ ಹೋರಾಟದ ಬದುಕನ್ನು ದಲಿತ ಚಳವಳಿಯ ಇತಿಹಾಸ ದಾಖಲೆಯನ್ನಾಗಿಸುವ ಪ್ರಯತ್ನದ ಭಾಗವಾಗಿ 'ಕಾಲಡಿಯ ಕಣ್ಣು' ಎಂಬ ಹೆಸರಿನಡಿ ಆತ್ಮಕಥೆ ಬರೆದಿದ್ದು, ಮೇ 9ಕ್ಕೆ ಬಿಡುಗಡೆ ಆಗಲಿದೆ.

ಪರಿಷತ್ ಸದಸ್ಯ ಎನ್‌.ರವಿಕುಮಾರ್ ಆಪ್ತ ಸಹಾಯಕಗೆ ಪಿಆರ್‌ಒ ಹುದ್ದೆ

ಸಿಯುಕೆ ಅಕ್ರಮ: ತನಿಖೆಗೆ ಸಿಎಸ್ ಪತ್ರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕಾಧಿಕಾರಿ/ಸಹಾಯಕ ಕುಲಸಚಿವ ಹುದ್ದೆ ನೇಮಕಾತಿಯಲ್ಲಿ ಅಕ್ರಮ ನಡೆದ ಆರೋಪಗಳು ಕೇಳಿ ಬಂದಿವೆ.

ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕೇಂದ್ರ ಉನ್ನತ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ.

ವಿಧಾನ ಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಪ್ತ ಸಹಾಯಕ ಶ್ರೀಕಾಂತ್ ಕುಸೂರ ಅವರಿಗೆ ನೇಮಕ ಪತ್ರ ನೀಡಲು ಶುಕ್ರವಾರ ನಡೆದ ವಿ.ವಿ.ಯ ಕಾರ್ಯಕಾರಿ ಸಮಿತಿ (ಇಸಿ) ಸಭೆ ಅನುಮೋದನೆ ನೀಡಿದೆ ಎಂದು ತಿಳಿದುಬಂದಿದೆ.

ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ ಅವರಿಗೆ ಶನಿವಾರ ಬೆಳಿಗ್ಗೆ ಕರೆ ಮಾಡಿ ಅಸಮಾಧಾನ ವ್ಯಕ್ತಪಡಿಸಿರುವ ಶಾಲಿನಿ ರಜನೀಶ್ ಅವರು, ಈ ನೇಮಕಾತಿಗೆ ಇ.ಸಿ ಸದಸ್ಯರಾದ ತಮ್ಮ ಅಸಮ್ಮತಿ ದಾಖಲಿಸಿಕೊಳ್ಳುವಂತೆ ಸೂಚಿಸಿದ್ದಾರೆ. ಅಲ್ಲದೇ, ಎಲ್ಲ ಅಭ್ಯರ್ಥಿಗಳ ದಾಖಲೆಗಳನ್ನು ತಮಗೆ ಕಳುಹಿಸುವಂತೆ ತಾಕೀತು ಮಾಡಿದ್ದಾರೆ. ಇಸಿ ಸದಸ್ಯರಾಗಿರುವ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೂ ನೇಮಕಾತಿ ಮಾಡುವ ತೀರ್ಮಾನಕ್ಕೆ ಅಸಮ್ಮತಿ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ಅಧಿಕಾರ ವಹಿಸಿಕೊಂಡ ಬಳಿಕ ಬಹುತೇಕ ನೇಮಕಾತಿಗಳಲ್ಲಿ ಶೈಕ್ಷಣಿಕ ಅರ್ಹತೆಯ ಬದಲು ಸಂಘ ಪರಿವಾರದ ಹಿನ್ನೆಲೆಯವರಿಗೆ ಆದ್ಯತೆ ನೀಡಲಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

ಶ್ರೀಕಾಂತ ಕುಸೂರ ಹಿಂದೆ ಎಬಿವಿಪಿ ವಿದ್ಯಾರ್ಥಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ಹೀಗಾಗಿ, ಬಿಜೆಪಿ ಮುಖಂಡರ ಪ್ರಭಾವ ಬಳಸಿ ಕುಲಪತಿಗಳ ಮೇಲೆ ಒತ್ತಡ ತಂದು ನೇಮಕಾತಿ ಮಾಡಿಸಿಕೊಂಡಿದ್ದಾರೆ ಎಂದು ಅಭ್ಯರ್ಥಿಗಳು ಕೇಂದ್ರ ಉನ್ನತ ಶಿಕ್ಷಣ ಸಚಿವರಿಗೆ ಬರೆದ ದೂರಿನ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಲಿಖಿತ ಪರೀಕ್ಷೆಯಲ್ಲಿ ನನಗೆ 55 ಅಂಕಗಳು ಬಂದಿದ್ದರೆ ಶ್ರೀಕಾಂತ ಅವರಿಗೆ ನನಗಿಂತ ಕಡಿಮೆ ಅಂಕಗಳು ಬಂದಿವೆ. ಈ ಬಗ್ಗೆ ಸಲ್ಲಿಸಿದ ನಮ್ಮ ದೂರನ್ನು ಪರಿಗಣಿಸಿಲ್ಲ

ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿ

'ನಿಯಮಾವಳಿ ಪ್ರಕಾರ ನೇಮಕಾತಿ'

ಶ್ರೀಕಾಂತ ಅವರು ಕೆಲಸ ಮಾಡುತ್ತಿದ್ದ ಸ್ಥಳೀಯ ಪತ್ರಿಕೆಯು ಆಡಿಟ್ ಬ್ಯುರೊ ಆಫ್ ಸರ್ಕ್ಯುಲೇಷನ್ (ಎಬಿಸಿ) ಪಟ್ಟಿಯಲ್ಲಿ ಇಲ್ಲ ಎಂಬುದು ಅಭ್ಯರ್ಥಿಗಳ ಆರೋಪವಾಗಿತ್ತು. ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿದಾಗ ಪಟ್ಟಿಯಲ್ಲಿರುವ ಮಾಹಿತಿ ಲಭ್ಯವಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಈ ಮಾಹಿತಿ ನೀಡಿದೆ. ಶ್ರೀಕಾಂತ ಕುಸೂರ ಅವರಿಗೆ ನೇಮಕಾತಿ ಪತ್ರ ನೀಡಲಾಗಿದೆ ಎಂದು ವಿ.ವಿ. ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

ಗಣ್ಯರ ವಿರುದ್ಧ ಹನಿಟ್ರ್ಯಾಪ್: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಎಚ್.ಎಸ್. ಶಿವಶಂಕರ್

ದಾವಣಗೆರೆ: ರಾಜಕಾರಣಿಗಳು, ಉದ್ಯಮಿಗಳು, ಮಠಾಧೀಶರನ್ನು ಗುರಿಯಾಗಿಸಿ ಹನಿಟ್ರ್ಯಾಪ್ ಮಾಡುತ್ತಿರುವ ಬೆಳವಣಿಗೆ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಜೆಡಿಎಸ್‌ನ ಮಾಜಿ ಶಾಸಕ, ಪಂಚಮಸಾಲಿ ಮುಖಂಡ ಎಚ್.ಎಸ್. ಶಿವಶಂಕರ ಒತ್ತಾಯಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇಂಥ ಷಡ್ಯಂತ್ರಗಳ ಮೂಲಕ ಕೆಲವು ರಾಜಕಾರಣಿಗಳೇ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಬಸವಜಯ ಮೃತ್ಯುಂಜಯ ಸ್ವಾಮೀಜಿ ವಿರುದ್ಧದ ಆರೋಪವೂ ಇಂಥದ್ದೇ ಷಡ್ಯಂತ್ರವಾಗಿರಬಹುದು. ಸ್ವಾಮೀಜಿಗಳ ಏಳಿಗೆ ಸಹಿಸದವರ ಪಿತೂರಿಯೂ ಇದರ ಹಿಂದಿರಬಹುದು' ಎಂದರು.

'ಸ್ವಾಮೀಜಿ ವಿರುದ್ಧ ಆಪಾದನೆ ಮಾಡಿರುವ ಕೆಲವರು ಮಹಿಳಾ ಆಯೋಗಕ್ಕೆ ದೂರು ನೀಡಿ ಕಾಣೆಯಾಗಿದ್ದಾರೆ. ತನಿಖೆ ನಡೆಸಿ ಸತ್ಯಾಂಶ ಬಹಿರಂಗಪಡಿಸಲಿ ಎಂದು ಒತ್ತಾಯಿಸಿದರು.

'ರಾಜ್ಯ ಸರ್ಕಾರ ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸತ್ಯ, ನ್ಯಾಯ ಮತ್ತು ಧರ್ಮಕ್ಕೆ ಜಯ ಸಿಗಬೇಕು. ಮಹಿಳಾ ಆಯೋಗದ ಅಧ್ಯಕ್ಷರು ದೂರು ಕೊಟ್ಟವರನ್ನು ಕರೆಯಿಸಿ ದಾಖಲೆಗಳನ್ನು ಪಡೆದು ಪರಿಶೀಲಿಸಬೇಕು' ಎಂದು ಒತ್ತಾಯಿಸಿದರು.

'ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಕೆಲವರ ಕಾಟ ತಾಳಲಾರದೇ ಪೀಠದಿಂದ ಹೊರ ಬಂದಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಅಧಿಕಾರಕ್ಕೆ ಬಂದರೆ 6 ತಿಂಗಳಲ್ಲಿ ಯುಸಿಸಿ’

ಟಿಎಂಸಿ ವಿರುದ್ಧ ವಾಗ್ದಾಳಿ • ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ– ಕೊಲೆ ಪ್ರಕರಣವನ್ನು ಜನ ಮರೆತಿಲ್ಲ: ಪ್ರಧಾನಿ

ಜಂಗೀಪುರ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಆರು ತಿಂಗಳಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸುವುದಾಗಿ ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು, ರಾಜ್ಯದಲ್ಲಿ ಬಂಗಾಳಿಗಳು ಅಲ್ಪಸಂಖ್ಯಾತರಾಗಲು ಬಿಜೆಪಿ ಬಿಡುವುದಿಲ್ಲ ಎಂದು ಪ್ರತಿಪಾದಿಸಿದರು.

ಮುಸ್ಲಿಂ ಬಹುಸಂಖ್ಯಾತ ಮುರ್ಷಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ಶನಿವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಯುಸಿಸಿ ಜಾರಿ ಮೂಲಕ ರಾಜ್ಯದಲ್ಲಿ ಓಲೈಕೆ ರಾಜಕಾರಣಕ್ಕೆ ಅಂತ್ಯ ಹಾಡಲು ಬಿಜೆಪಿ ಸಂಕಲ್ಪ ತೊಟ್ಟಿದೆ ಎಂದು ಹೇಳಿದರು.

ಕೇಂದ್ರ ಸಚಿವ ಅಮಿತ್ ಶಾ ಅವರು ಶುಕ್ರವಾರ ಬಿಡುಗಡೆ ಮಾಡಿದ ಬಿಜೆಪಿಯ ಚುನಾವಣಾ ಪ್ರಣಾಳಿಕೆಯು ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ‘ಮಹಾಜಂಗಲ್‌ರಾಜ್’ ಆಳ್ವಿಕೆಯನ್ನು ಕೊನೆಗೊಳಿಸುವ ಮಾರ್ಗಸೂಚಿಯಾಗಿದೆ ಎಂದು ಅವರು ಬಣ್ಣಿಸಿದರು.

‘ದೇಶದ ಭದ್ರತೆಯೇ ನಮಗೆ ಅತ್ಯಂತ ಮಹತ್ವದ ವಿಷಯವಾಗಿದೆ. ಹೀಗಾಗಿಯೇ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿಯೇ ಯುಸಿಸಿ ಜಾರಿಗೆ ತರಲಾಗುವುದು. ಈ ವಿಷಯವನ್ನು ಪ್ರಣಾಳಿಕೆಯಲ್ಲೂ ಘೋಷಿಸಲಾಗಿದೆ’ ಎಂದು ಅವರು ತಿಳಿಸಿದರು.

ಜನ ಮರೆತಿಲ್ಲ: ರಾಜ್ಯದಲ್ಲಿ ಆಡಳಿತಾರೂಢ ಟಿಎಂಸಿ ಪಕ್ಷವು ಆರ್.ಜಿ.ಕರ್ ಕಾಲೇಜಿನಲ್ಲಿನ ವೈದ್ಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳ ಪರವಾಗಿ ನಿಂತಿದ್ದನ್ನು ರಾಜ್ಯದ ಜನ ಮರೆತಿಲ್ಲ ಎಂದು ಮೋದಿ ಅವರು ಟೀಕಿಸಿದರು.

ನರೇಂದ್ರ ಮೋದಿ

‘ಮಾ-ಮತಿ -ಮಾನುಷ್’ (ತಾಯಿ, ತಾಯ್ನಾಡು ಮತ್ತು ಜನರು) ಘೋಷಣೆಯಿಂದ ಅಧಿಕಾರಕ್ಕೆ ಬಂದ ಟಿಎಂಸಿಯು, ಆ ಘೋಷಣೆಯನ್ನು ಕೈಬಿಟ್ಟು ನುಸುಳುಕೋರರನ್ನು ಬೆಂಬಲಿಸುತ್ತಿದೆ. ನುಸುಳುಕೋರರ ಮೂಲಕವೇ ಸರ್ಕಾರ ರಚಿಸಲು ಬಯಸುತ್ತಿದೆ ಎಂದು ಮೋದಿ ಆರೋಪಿಸಿದರು.

ಬಂಗಾಳದ ಅಸ್ಮಿತೆ ಕಾಪಾಡುವ ಯುದ್ಧ: ರಾಜ್ಯದ ಕೆಲವು ಭಾಗಗಳಲ್ಲಿ ತ್ವರಿತಗತಿಯಲ್ಲಿ ಜನಸಂಖ್ಯಾ ಚಿತ್ರಣ ಬದಲಾಗುತ್ತಿದೆ ಎಂದ ಅವರು, ಈ ಚುನಾವಣೆಯು ಪಶ್ಚಿಮ ಬಂಗಾಳದ ಅಸ್ಮಿತೆಯನ್ನು ಕಾಪಾಡಲು ನಡೆಯುವ ಯುದ್ಧವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಭ್ರಷ್ಟರು, ಗೂಂಡಾಗಳು ಹಾಗೂ ಅವರನ್ನು ರಕ್ಷಿಸುವವರನ್ನು ಜೈಲಿಗಟ್ಟಲಾಗುವುದು ಎಂದರು.

ಬಂಗಾಳದ ಜನ ಬದಲಾವಣೆ ನಿರ್ಧರಿಸಿದರೆ ಜಗತ್ತಿನ ಯಾವುದೇ ಶಕ್ತಿಗೂ ಅದನ್ನು ತಡೆಯಲು ಸಾಧ್ಯವಿಲ್ಲ ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಬಂಗಾಳಕ್ಕೆ ಸವಾಲು ಹಾಕಿದ ಬ್ರಿಟಿಷರ, ಕಾಂಗ್ರೆಸ್ಸಿಗರ, ಎಡಪಂಥೀಯರ ದುರಹಂಕಾರವನ್ನು ಇಲ್ಲಿನ ಜನರು ಮುರಿದಿದ್ದಾರೆ. ಇದೀಗ ಟಿಎಂಸಿ ಸರದಿಯಾಗಿದೆ ಎಂದು ಅವರು ತಿಳಿಸಿದರು.

ಸಿಂಡಿಕೇಟ್‌ಗಳು ನಡೆಸುವ ರಾಜ್ಯ: ಬಾಂಗ್ಲಾದೇಶದ ಗಡಿಯಲ್ಲಿರುವ ದಕ್ಷಿಣ ದಿನಾಜ್‌ಪುರ ಜಿಲ್ಲೆಯ ಕುಶ್ಮಂಡಿಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಟಿಎಂಸಿಯು ಪಶ್ಚಿಮ ಬಂಗಾಳವನ್ನು ಸಿಂಡಿಕೇಟ್‌ಗಳು ನಡೆಸುವ ರಾಜ್ಯವನ್ನಾಗಿ ಪರಿವರ್ತಿಸಿದೆ’ ಎಂದು ದೂರಿದರು.

ಕಳೆದ ಡಿಸೆಂಬರ್‌ನಲ್ಲಿ ಅರ್ಜೆಂಟೀನಾ ಫುಟ್‌ಬಾಲ್ ಆಟಗಾರ ಲಿಯೋನೆಲ್ ಮೆಸ್ಸಿ ಕೋಲ್ಕತ್ತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ನಡೆದ ವೈಫಲ್ಯವನ್ನು ಉಲ್ಲೇಖಿಸಿದ ಅವರು, ‘ಫುಟ್‌ಬಾಲ್ ಆಟವನ್ನೂ ಟಿಎಂಸಿ ತನ್ನ ಸಿಂಡಿಕೇಟ್‌ಗಳಿಗೆ ಹಸ್ತಾಂತರಿಸಿದೆ. ಈ ಕಾರ್ಯಕ್ರಮ ಆಯೋಜನೆಯಲ್ಲಿನ ವೈಫಲ್ಯದಿಂದ ವಿಶ್ವದ ಮುಂದೆ ಭಾರತಕ್ಕೆ ಅಪಮಾನವಾಗಿದೆ’ ಎಂದು ಕಿಡಿಕಾರಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನೂ ಅವಮಾನಿಸುವ ಮೂಲಕ ಟಿಎಂಸಿಯು ಬುಡಕಟ್ಟು ಸಮುದಾಯ ಮತ್ತು ದೇಶದ ಪ್ರಜೆಗಳಿಗೆ ಅಪಮಾನ ಮಾಡಿದೆ ಎಂದು ದೂರಿದರು.

> ಮಮತಾ ಬ್ಯಾನರ್ಜಿ ಅವರು ತಮ್ಮನ್ನು ಬಲಿಪಶು ಎಂಬಂತೆ ಬಿಂಬಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಕಾಲು ಅಥವಾ ತಲೆಗೆ ಬ್ಯಾಂಡೇಜ್ ಧರಿಸುತ್ತಾರೆ. ಆದರೆ ಈ ಬಾರಿ ಇದ್ಯಾವುದೂ ನಡೆಯುವುದಿಲ್ಲ
> **ಅಮಿತ್ ಶಾ,** ಗೃಹ ಸಚಿವ

ಪಶ್ಚಿಮ ಬಂಗಾಳದ ಜಂಗೀಪುರದಲ್ಲಿ ಶನಿವಾರ ನಡೆದ ಬಿಜೆಪಿಯ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣ ಕೇಳಲು ಸೇರಿದ್ದ ಜನಸ್ತೋಮ —ಪಿಟಿಐ ಚಿತ್ರ

ಉಮೇದುವಾರಿಕೆ ರದ್ದತಿಗೆ ಯತ್ನಿಸಿದ್ದ ಬಿಜೆಪಿ: ಮಮತಾ

ಕೋಲ್ಕತ್ತ (ಪಿಟಿಐ): ‘ಭವಾನಿಪುರ ಕ್ಷೇತ್ರದಿಂದ ನನ್ನ ಉಮೇದುವಾರಿಕೆಯನ್ನು ರದ್ದುಗೊಳಿಸಲು ಬಿಜೆಪಿ ಎರಡು ಸುಳ್ಳು ಪ್ರಕರಣಗಳನ್ನು ದಾಖಲಿಸಲು ಪ್ರಯತ್ನಿಸಿತ್ತು, ಆದರೆ ಟಿಎಂಸಿ ಕಾರ್ಯಕರ್ತರು ಮತ್ತು ಸಾರ್ವಜನಿಕರು ಆ ಪ್ರಯತ್ನಗಳನ್ನು ವಿಫಲಗೊಳಿಸಿದರು’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದರು.

ಪಶ್ಚಿಮ ಮೇದಿನಿಪುರ ಜಿಲ್ಲೆಯ ಕೇಶಿಯಾರಿಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಬಿಜೆಪಿಯು 90 ಲಕ್ಷ ಮತದಾರರ ಹೆಸರನ್ನು ಅಳಿಸಿದೆ’ ಎಂದು ದೂರಿದರು.

‘ಬಿಜೆಪಿಯು ಚುನಾವಣಾ ಆಯೋಗದ ನೆರವಿನಿಂದ ನನ್ನ ವಿರುದ್ಧ ಎರಡು ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸಲು ಯತ್ನಿಸಿತ್ತು. ಈ ಮೂಲಕ ಭವಾನಿಪುರ ಕ್ಷೇತ್ರದಿಂದ ನನ್ನ ನಾಮಪತ್ರವನ್ನು ಅಮಾನ್ಯಗೊಳ್ಳುವಂತೆ ಮಾಡುವುದು ಅದರ ಯೋಜನೆಯಾಗಿತ್ತು. ಆದರೆ ನಾವು ಈ ಯೋಜನೆಯನ್ನು ವಿಫಲಗೊಳಿಸಿದ್ದೇವೆ’ ಎಂದು ಅವರು ಹೆಚ್ಚು ವಿವರಿಸದೆ ತಿಳಿಸಿದರು.

ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದಾಗಿ ಬಿಜೆಪಿ ನೀಡಿರುವ ಭರವಸೆ ಕುರಿತು ಪ್ರತಿಕ್ರಿಯಿಸಿದ ಬ್ಯಾನರ್ಜಿ, ‘ಯುಸಿಸಿ ಮೂಲಕ ಕೇಸರಿ ಪಕ್ಷವು ಜನರನ್ನು ನಿರ್ದೇಶಿಸಲು ಉದ್ದೇಶಿಸಿದೆ’ ಎಂದು ಕಿಡಿಕಾರಿದರು.

ಡೆರಿಕ್ ‘ಫ್ಯಾಕ್ಟ್‌ಚೆಕ್’

‘ಪುರ್ಬಾ ಬರ್ಧಮಾನ್ ಜಿಲ್ಲೆಯ ಕಟ್ವಾದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮೋದಿ ಅವರು ಪಶ್ಚಿಮ ಬಂಗಾಳದಲ್ಲಿ ಭ್ರಷ್ಟಾಚಾರದ ಕುರಿತು ಶ್ವೇತಪತ್ರ ಹೊರಡಿಸುವ ಭರವಸೆ ನೀಡಿದ್ದಾರೆ. ಆದರೆ ದುರ್ದೈವ ಎಂದರೆ ಭ್ರಷ್ಟಾಚಾರದ ತನಿಖೆ ಎದುರಿಸುತ್ತಿರುವ ವಿರೋಧ ಪಕ್ಷಗಳ 10 ನಾಯಕರ ಪೈಕಿ 9 ಮಂದಿ ಎನ್‌ಡಿಎಗೆ ಸೇರ್ಪಡೆಗೊಂಡಿದ್ದಾರೆ’ ಎಂದು ಟಿಎಂಸಿ ನಾಯಕ, ರಾಜ್ಯಸಭಾ ಸದಸ್ಯ ಡೆರಿಕ್ ಓಬ್ರಯಾನ್ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಫ್ಯಾಕ್ಟ್‌ಚೆಕ್‌ನಿಂದ ಕಂಡುಕೊಂಡದ್ದು ಏನೆಂದರೆ, ವಿರೋಧ ಪಕ್ಷಗಳಿಂದ ಎನ್‌ಡಿಎ ಕೂಟ ಸೇರಿದ ಪ್ರಫುಲ್ ಪಟೇಲ್, ಹಿಮಂತ ಬಿಸ್ವ ಶರ್ಮಾ, ನಾರಾಯಣ್ ರಾಣೆ, ಅಜಿತ್ ಪವಾರ್ (ದಿವಂಗತ), ಅಶೋಕ್ ಚವಾಣ್, ಸುವೇಂದು ಅಧಿಕಾರಿ ಭ್ರಷ್ಟಾಚಾರದ ಆರೋಪಗಳನ್ನು ಹೊತ್ತಿದ್ದಾರೆ. ಅವರುಗಳೇನು ಬಿಜೆಪಿಯ ವಾಷಿಂಗ್ ಮಷಿನ್‌ನಿಂದ ಸ್ವಚ್ಛವಾಗಿದ್ದಾರೆಯೇ’ ಎಂದು ಪ್ರಶ್ನಿಸಿದ್ದಾರೆ.

ದಾರ್ಜಿಲಿಂಗ್: ಟಿಎಂಸಿಗೆ ಗೊರ್ಖಾ ಜನಮುಕ್ತಿ ಮೋರ್ಚಾ ಸವಾಲು

• ಸುಮಿತ್ ಪಾಂಡೆ

ಕುರ್ಸಿಯಂಗ್: ಪಶ್ಚಿಮ ಬಂಗಾಳದಲ್ಲಿ ಸತತ ಮೂರು ಬಾರಿ ಆಡಳಿತ ಕುರ್ಚಿ ಅಲಂಕರಿಸುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಈ ಬಾರಿಯೂ ಅಧಿಕಾರ ಉಳಿಸಿಕೊಳ್ಳಲು ‘ನೇರ ನಗದು ಯೋಜನೆ’ಯನ್ನೇ ಪ್ರಮುಖ ಅಸ್ತ್ರವಾಗಿ ನೆಚ್ಚಿಕೊಂಡಿದೆ.

ಹಿಮಾಲಯ ತಪ್ಪಲಿನ ದಾರ್ಜಿಲಿಂಗ್‌ನಲ್ಲಿ ಅನಿತ್ ಥಾಪಾ ನೇತೃತ್ವದ ಭಾರತೀಯ ಗೊರ್ಖಾ ಪ್ರಜಾತಾಂತ್ರಿಕ ಮೋರ್ಚಾಗೆ (ಬಿಜಿಪಿಎಂ) ಮಮತಾ ಬ್ಯಾನರ್ಜಿ ಮೂರು ಸ್ಥಾನಗಳನ್ನು (ದಾರ್ಜಿಲಿಂಗ್, ಕುರ್ಸಿಯಂಗ್ ಮತ್ತು ಕಾಲಿಂಪಾಂಗ್) ಬಿಟ್ಟುಕೊಟ್ಟಿದ್ದಾರೆ. ಬಿಜಿಪಿಎಂ, ಟಿಎಂಸಿಯ ಏಕೈಕ ಮಿತ್ರಪಕ್ಷವಾಗಿದೆ.

ಅನಿತ್ ಥಾಪಾ ಅವರ ಎದುರಾಳಿ ಬಿಮಲ್ ಗುರುಂಗ್ ಅವರ ಗೊರ್ಖಾ ಜನಮುಕ್ತಿ ಮೋರ್ಚಾ (ಜಿಜೆಎಂ) ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು, ಬಿಜೆಪಿ ಚಿಹ್ನೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಜಿಜೆಎಂನ ಯುವ ಘಟಕದ ಮುಖಂಡ ನೊಮನ್ ರೈ ಅವರು ದಾರ್ಜಿಲಿಂಗ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಗೊರ್ಖಾಲ್ಯಾಂಡ್ ಪ್ರಾದೇಶಿಕ ಆಡಳಿತದ (ಜಿಟಿಎ) ಮುಖ್ಯಸ್ಥರೂ ಆಗಿರುವ ಥಾಪಾ ಅವರು, ಸ್ಥಳೀಯ ವಕೀಲ, ಉದ್ಯಮಿ ಬಿಜೆಪಿ ಅಭ್ಯರ್ಥಿ ಅಮರ್ ಲಾಮಾ ಅವರ ವಿರುದ್ಧ ಕುರ್ಸಿಯಂಗ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಮಮತಾ ಬ್ಯಾನರ್ಜಿ

ಭಾರತದ ಹಾಕಿ ತಂಡದ ಮಾಜಿ ನಾಯಕ ಭರತ್ ಚೆಟ್ರಿ ಅವರು ಕಾಲಿಂಪೋಂಗ್ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ಬಿಜೆಪಿ ವಿರೋಧಿ ಮತಗಳ ಏಕೈಕ ಭಂಡಾರ ತಾನು ಎಂದು ಹೇಳಿಕೊಳ್ಳುವ ಟಿಎಂಸಿ, ದಾರ್ಜಿಲಿಂಗ್‌ನ ಮೂರೂ ಕ್ಷೇತ್ರಗಳಲ್ಲಿ ಒಂದೇ ಒಂದು ಸ್ಥಾನವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡುವುದಿಲ್ಲ ಎಂದು ಹೇಳಿದೆ.

ಕಳೆದ ಎರಡು ಚುನಾವಣೆಗಳಲ್ಲಿ ದಾರ್ಜಿಲಿಂಗ್ ಕ್ಷೇತ್ರದಿಂದ ಸ್ಥಳೀಯ ಯುವ ಮುಖಂಡ ರಾಜು ಬಿಷ್ಟ ಗೆಲುವು ಸಾಧಿಸಿದ್ದಾರೆ.

‘ಬಿಜಿಪಿಎಂ’ ಎನ್ನುವುದು ಟಿಎಂಸಿಯ ಇನ್ನೊಂದು ಮುಖವಷ್ಟೇ, ದಾರ್ಜಿಲಿಂಗ್ ಕ್ಷೇತ್ರದಿಂದ ಮಮತಾ ಬ್ಯಾನರ್ಜಿ ಕಣಕ್ಕಿಳಿದರೆ ನಾನು ಅವರ ವಿರುದ್ಧ ಸ್ಪರ್ಧಿಸುತ್ತೇನೆ’ ಎಂದು ಬಿಷ್ಟ ಸವಾಲೊಡ್ಡಿದ್ದಾರೆ.

ಜಿಟಿಎ: ಥಾಪಾ ಬಣ ಮೇಲುಗೈ

ದಾರ್ಜಿಲಿಂಗ್ ಆಡಳಿತದ ಮೇಲೆ ನಿಗಾ ವಹಿಸಲು 2007ರಲ್ಲಿ ಗೂರ್ಖಾ ಹಿಲ್ ಕೌನ್ಸಿಲ್ (ಜಿಟಿಎ) ರಚಿಸಲಾಯಿತು. ಗೊರ್ಖಾಲ್ಯಾಂಡ್ ಪ್ರಾದೇಶಿಕ ಆಡಳಿತ (ಜಿಟಿಎ) ರಚನೆಗೆ ಪಶ್ಚಿಮ ಬಂಗಾಳ ಸರ್ಕಾರ ಮತ್ತು ಕೇಂದ್ರದ ನಡುವೆ 2011ರಲ್ಲಿ ಒಪ್ಪಂದ ಏರ್ಪಟ್ಟಿತು. ಇದಾದ ಐದು ವರ್ಷಗಳ ಬಳಿಕ ದಾರ್ಜಿಲಿಂಗ್ ಪರ್ವತಶ್ರೇಣಿಯಲ್ಲಿ ಮತ್ತೊಂದು ಗೊರ್ಖಾಲ್ಯಾಂಡ್ ಚಳವಳಿ ಭುಗಿಲೆದ್ದಿತು. ಇದರ ಪರಿಣಾಮವಾಗಿ ‘ಜಿಟಿಎ’ಯಲ್ಲಿ ಅನಿತ್ ಥಾಪಾ ಬಣ ಮೇಲುಗೈ ಸಾಧಿಸಿತು. ಅಂದಿನಿಂದ ಟಿಎಂಸಿ ಸರ್ಕಾರದ ಬೆಂಬಲದೊಂದಿಗೆ ಥಾಪಾ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಬಿಜೆಪಿ ವಿರುದ್ಧ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ವಾಗ್ದಾಳಿ

‘ಅಲ್ಪಸಂಖ್ಯಾತರಲ್ಲಿ ಭಯ ಬಿತ್ತುವುದೇ ಉದ್ದೇಶ’

ಚೆನ್ನೈ (ಪಿಟಿಐ): ಅಲ್ಪಸಂಖ್ಯಾತರನ್ನು ಭಯದ ವಾತಾವರಣದಲ್ಲಿ ಇಡುವುದೇ ಬಿಜೆಪಿಯ ಮುಖ್ಯ ಉದ್ದೇಶ. ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ಏನಾಗುತ್ತಿದೆ ಎಂದು ಎಲ್ಲರಿಗೂ ತಿಳಿದಿದೆ ಎಂದು ಡಿಎಂಕೆ ಮುಖ್ಯಸ್ಥ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದರು.

‘ಕ್ರಿಶ್ಚಿಯನ್ನರು ಶಾಂತಿಯುತವಾಗಿ ಸಂಭ್ರಮಾಚರಣೆ ಮಾಡುವಂತಿಲ್ಲ. ಕ್ರಿಶ್ಚಿಯನ್ನರನ್ನೂ ಗುರಿಯಾಗಿಸಲಾಗುತ್ತಿದೆ. ಮಣಿಪುರದಲ್ಲಿ ಏನಾಗುತ್ತಿದೆ ಎಂದು ಇಡೀ ದೇಶವೇ ನೋಡುತ್ತಿದೆ. ಕಾಳ್ಗಿಚ್ಚಿನಂತೆ ದೇಶದಾದ್ಯಂತ ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ವಾತಾವರಣ ಹಬ್ಬಿಸುವುದು ಬಿಜೆಪಿಯ ಉದ್ದೇಶ’ ಎಂದು ಆರೋಪಿಸಿದರು.

‘ಅದಕ್ಕಾಗಿಯೇ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ತರಲಾಯಿತು. ನಂತರ ವಕ್ಫ್ ಕಾನೂನಿಗೆ ತಿದ್ದುಪಡಿ ತರಲಾಯಿತು. ಇದೀಗ ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ (ಎಫ್‌ಸಿಆರ್‌ಎ) ತಿದ್ದುಪಡಿಗೆ ಮುಂದಾಗಿದೆ’ ಎಂದರು.

‘ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಪಳನಿಸ್ವಾಮಿ ಅವರು ಈ ಮೂರು ತಿದ್ದುಪಡಿಗಳಿಗೂ ಬೆಂಬಲ ನೀಡಿದ್ದಾರೆ. ಅವರಿಗೆ ಅಲ್ಪಸಂಖ್ಯಾತರ ಬಗ್ಗೆ ಯಾವುದೇ ಕಾಳಜಿ ಇಲ್ಲ’ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶನಿವಾರ ಮತಯಾಚಿಸಿದರು —ಪಿಟಿಐ ಚಿತ್ರ

‘ಮಹಿಳಾ ಮೀಸಲು: ಅಸ್ತ್ರವಾಗಿ ಬಳಕೆ’

ಮಹಿಳಾ ಮೀಸಲು ವಿಚಾರವಾಗಿ ಕೇಂದ್ರ ಸರ್ಕಾರವನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಟೀಕಿಸಿದರು.

‘ಕೇಂದ್ರ ಸರ್ಕಾರಕ್ಕೆ ಮಹಿಳಾ ಮೀಸಲಾತಿ ಅನುಷ್ಠಾನದ ಬಗ್ಗೆ ಯಾವುದೇ ಕಾಳಜಿ ಇಲ್ಲ. ಅದು ಪ್ರಾಮಾಣಿಕವಾಗಿ ಇದ್ದಿದ್ದರೆ ಅದನ್ನು ಸರಿಯಾದ ಮಾರ್ಗದ ಮೂಲಕ ಅನುಷ್ಠಾನ ಮಾಡುತ್ತಿತ್ತು. ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಇದನ್ನು ವಿರೋಧ ಪಕ್ಷಗಳನ್ನು ಹಣಿಯುವ ಅಸ್ತ್ರವಾಗಿ ಬಳಸಲು ಚಿಂತಿಸುತ್ತಿದೆ’ ಎಂದು ಆರೋಪಿಸಿದರು.

‘ಕ್ಷೇತ್ರ ಪುನರ್ ವಿಂಗಡಣೆಯ ಕಾರಣ ಹೇಳದೆ ಮಹಿಳಾ ಮೀಸಲಾತಿಯನ್ನು ಕೂಡಲೇ ಅನುಷ್ಠಾನ ಮಾಡಬೇಕು’ ಎಂದು ಹೇಳಿದರು.

ಆರೋಪ ನಿರಾಕರಿಸಿದ ಅಣ್ಣಾಮಲೈ

ಕೊಯಮತ್ತೂರು/ಚೆನ್ನೈ (ತಮಿಳುನಾಡು) (ಪಿಟಿಐ): ‘ಕೇಂದ್ರ ಸಚಿವ ಎಲ್.ಮುರುಗನ್ ಮತ್ತು ಬಿಜೆಪಿ ‘ಜನನಾಯಗನ್’ ಸಿನಿಮಾವನ್ನು ಆನ್‌ಲೈನ್‌ನಲ್ಲಿ ಸೋರಿಕೆ ಮಾಡಿದೆ’ ಎಂಬ ಟಿವಿಕೆ ಆರೋಪವನ್ನು ತಮಿಳುನಾಡು ಬಿಜೆಪಿ ಮಾಜಿ ಮುಖ್ಯಸ್ಥ ಕೆ.ಅಣ್ಣಾಮಲೈ ಅವರು ಶನಿವಾರ ನಿರಾಕರಿಸಿದ್ದಾರೆ. ಇಂತಹ ಹೇಳಿಕೆಗಳು ‘ರಾಜಕೀಯ ಅಸಭ್ಯತೆ’ ಎಂದು ಅವರು ಕರೆದಿದ್ದಾರೆ.

ಸಿನಿಮಾದ ಸೋರಿಕೆಯನ್ನು ಖಂಡಿಸಿದ ಅವರು, ಇದನ್ನು ಕಾನೂನುಬಾಹಿರ ಕೃತ್ಯ ಎಂದು ಕರೆದಿದ್ದು, ನಕಲಿ ಆವೃತ್ತಿಗಳನ್ನು ಬಹಿಷ್ಕರಿಸುವಂತೆ ಸಾರ್ವಜನಿಕರಿಗೆ ಒತ್ತಾಯಿಸಿದರು.

ಬಿಜೆಪಿ ಅಭ್ಯರ್ಥಿಯ ಪರ ಮತಯಾಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ವಿವಾದದಲ್ಲಿ ಬಿಜೆಪಿಯನ್ನು ಏಕೆ ಎಳೆಯಬೇಕು? ಸಿನಿಮಾ ಬಿಡುಗಡೆಯಾಗುವುದರಲ್ಲಿ ಅಥವಾ ಸೋರಿಕೆಯಾಗುವುದರಲ್ಲಿ ಪಕ್ಷದ ಯಾರದಾದರೂ ಪಾತ್ರವಿದೆಯೇ? ಸೋರಿಕೆಯ ಬಗ್ಗೆ ತನಿಖೆ ನಡೆಸಿ, ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವುದು ಪೊಲೀಸರ ಜವಾಬ್ದಾರಿಯಾಗಿದೆ’ ಎಂದರು.

‘ರಾಜಕೀಯ ಲಾಭಕ್ಕಾಗಿ ಬಿಜೆಪಿಯನ್ನು ಇದರಲ್ಲಿ ಎಳೆದು ತರಬೇಡಿ. ವದಂತಿಗಳನ್ನು ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಪೊಲೀಸರಿಗೆ ಅಣ್ಣಾಮಲೈ ಒತ್ತಾಯಿಸಿದರು.

ಟಿವಿಕೆ ನಾಯಕ ಆಧವ್ ಅರ್ಜುನ ಅವರು, ‘ಮಾಹಿತಿ ಮತ್ತು ಪ್ರಸಾರ ಸಚಿವಾಲಯವನ್ನು ನೋಡಿಕೊಳ್ಳುವ ಸಚಿವ ಮುರುಗನ್ ತಮ್ಮ ಪ್ರಭಾವವನ್ನು ಬಳಸಿ ‘ಜನನಾಯಗನ್’ ಸಿನಿಮಾವನ್ನು ಸೋರಿಕೆ ಮಾಡಿದ್ದಾರೆ’ ಎಂದು ಶುಕ್ರವಾರ ಆರೋಪಿಸಿದ್ದರು.

ಕಠಿಣ ಕ್ರಮಕ್ಕೆ ನಟರ ಒತ್ತಾಯ: ತಮಿಳು ನಟ ವಿಜಯ್ ನಟನೆಯ ‘ಜನನಾಯಗನ್’ ಸಿನಿಮಾ ಆನ್‌ಲೈನ್‌ನಲ್ಲಿ ಸೋರಿಕೆಯಾಗಿರುವುದನ್ನು ನಟ ರಜನಿಕಾಂತ್, ಕಮಲ್ ಹಾಸನ್, ಸೂರ್ಯ ಅವರು ಖಂಡಿಸಿದ್ದಾರೆ ಮತ್ತು ಪೈರಸಿ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಗಮನ ಸೆಳೆದ ಕೇರಳ, ಅಸ್ಸಾಂ, ಪುದುಚೆರಿ ಚುನಾವಣೆ

ತಿರುವನಂತಪುರ/ನವದೆಹಲಿ (ಪಿಟಿಐ): ‘ಕೇರಳ, ಪುದುಚೆರಿ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಗಳು ಜಾಗತಿಕ ಗಮನ ಸೆಳೆದಿವೆ’ ಎಂದು ಚುನಾವಣಾ ಆಯೋಗ (ಇ.ಸಿ) ಶನಿವಾರ ಹೇಳಿದೆ.

‘ಅಂತರರಾಷ್ಟ್ರೀಯ ಚುನಾವಣಾ ಸಂದರ್ಶಕರ ಕಾರ್ಯಕ್ರಮ 2026’ರ ಭಾಗವಾಗಿ ಭಾರತದ ಚುನಾವಣಾ ಪ್ರಕ್ರಿಯೆಯ ಪ್ರಮಾಣ, ನಿಖರತೆ ಹಾಗೂ ಮತದಾನ ಮಾಡಿದ ಜನರ ಉತ್ಸಾಹವನ್ನು 22 ರಾಷ್ಟ್ರಗಳ 38 ಪ್ರತಿನಿಧಿಗಳು ವೀಕ್ಷಿಸಿದ್ದಾರೆ’ ಎಂದು ಇ.ಸಿ ತಿಳಿಸಿದೆ.

ಈ ಪ್ರತಿನಿಧಿಗಳು ತಮ್ಮ ಅನುಭವವನ್ನು ‘ಪ್ರಜಾಪ್ರಭುತ್ವದ ನಿಜವಾದ ಹಬ್ಬ’ ಎಂದು ಬಣ್ಣಿಸಿದ್ದಾರೆ. ದಾಖಲೆಯ ಮತದಾರರ ಭಾಗವಹಿಸುವಿಕೆ, ನಿಖರವಾದ ಯೋಜನೆ ಮತ್ತು ಮತದಾನ ಪ್ರಕ್ರಿಯೆಯನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಿದ ಆಯೋಗದ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಭಾರತದ ಮತದಾನ ಎಂಬುದು ಇಡೀ ಜಗತ್ತಿಗೆ ಪ್ರಜಾಪ್ರಭುತ್ವದ ನಿಜವಾದ ಹಬ್ಬವಿದ್ದಂತೆ. ಮತದಾನ ಮಾಡಲು ಜನರು ಉತ್ಸಾಹ ತೋರಿಸಿದ್ದರು. ಸಮರ್ಪಕವಾಗಿ ನಡೆದ ಚುನಾವಣಾ ಪ್ರಕ್ರಿಯೆಯಿಂದ ನಾವು ಕಲಿಯುವುದು ಸಾಕಷ್ಟು ಇದೆ’ ಎಂದು ಕ್ರೊಯೇಷ್ಯಾದ ಬ್ರಾನಿಮಿರ್ ಫರ್ಕಾಸ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಪ್ರತಿನಿಧಿಗಳು ಏಪ್ರಿಲ್ 8 ಮತ್ತು 9ರಂದು ಅಸ್ಸಾಂ, ಕೇರಳ ಮತ್ತು ಪುದುಚೆರಿಗೆ ಭೇಟಿ ನೀಡಿದ್ದರು. ಮತದಾನ ಪ್ರಕ್ರಿಯೆಯ ಪ್ರತಿಯೊಂದು ಹಂತವನ್ನೂ ವೀಕ್ಷಿಸಿದ್ದರು. ಆಯಾ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು, ಪೊಲೀಸರು ಮತ್ತು ನೋಡಲ್ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದ್ದರು.

‘ಮಹಿಳಾ ಮೀಸಲು: ರಾಜಕೀಯ ದಾಳವಾಗದಿರಲಿ’

ನವದೆಹಲಿ (ಪಿಟಿಐ): ‘ತಿದ್ದುಪಡಿಗಳು ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುವ ಮತ್ತು ಸಂಸತ್ತಿನ ಚೈತನ್ಯವನ್ನು ಕುಂದಿಸುವ ರಾಜಕೀಯ ದಾಳವಾಗಿ ಬಳಕೆಯಾಗಬಾರದು’ ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ಶನಿವಾರ ಹೇಳಿದರು.

ಸಂಸತ್ತಿನ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಕಾನೂನು ತಿದ್ದುಪಡಿ ಮಸೂದೆ ಮಂಡನೆಯಾಗುವ ಸಾಧ್ಯತೆಗಳಿರುವ ಬಗ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ ಅವರು, ‘2029ರ ಸಾರ್ವತ್ರಿಕ ಚುನಾವಣೆಗೂ ಮುನ್ನ ಕ್ಷೇತ್ರ ವಿಂಗಡಣೆ ಮಾಡುವ ಮತ್ತು ವಿಧಾನಸಭೆ ಚುನಾವಣೆಯಲ್ಲಿ ರಾಜಕೀಯ ಲಾಭವನ್ನು ಪಡೆಯುವ ಉದ್ದೇಶದಿಂದ ಸರ್ಕಾರವು ವಿಶೇಷ ಅಧಿವೇಶನವನ್ನು ಕರೆದಿದೆ’ ಎಂದು ಆರೋಪಿಸಿದರು.

ಶಶಿ ತರೂರ್

‘ಮಹಿಳೆಯರಿಗೆ ಮೂರನೇ ಒಂದರಷ್ಟು ಮೀಸಲಾತಿ ನೀಡಬೇಕೆಂದು ಕಾಂಗ್ರೆಸ್ ಪ್ರತಿಪಾದಿಸುತ್ತಲೇ ಇದೆ. ಆದರೆ ಅದು ಎಲ್ಲರನ್ನು ಒಳಗೊಂಡಂತೆ ನ್ಯಾಯಯುತವಾಗಿರಬೇಕು’ ಎಂದು ಹೇಳಿದರು.

ಮಹಿಳಾ ಮೀಸಲಾತಿ ಕಾನೂನು ತಿದ್ದುಪಡಿ ಬಗೆಗಿನ ನಿಲುವನ್ನು ನಿರ್ಧರಿಸಲು ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಚಿತ್ರವನ್ನು ಹಂಚಿಕೊಂಡು ಪೋಸ್ಟ್ ಮಾಡಿದ ತರೂರ್ ಅವರು, ‘ಕಾಂಗ್ರೆಸ್ 2013ರಲ್ಲೇ ಈ ಬಗ್ಗೆ ಮಸೂದೆಯನ್ನು ಮಂಡಿಸಿ, ರಾಜ್ಯಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿತ್ತು’ ಎಂದು ಹೇಳಿದರು.

ಕಾರು ನಿಲುಗಡೆ ಸ್ಥಳದಲ್ಲಿ ಇಳಿದ ಹೆಲಿಕಾಪ್ಟರ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಸಚಿವ ಛಗನ್ ಭುಜಬಲ್ ಅವರಿದ್ದ ಹೆಲಿಕಾಪ್ಟರ್, ನಿಗದಿತ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗದೆ, ಕಾರು ನಿಲುಗಡೆ ಸ್ಥಳದಲ್ಲಿ ಲ್ಯಾಂಡ್ ಆಗಿದ್ದು, ಭುಜಬಲ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಛಗನ್ ಭುಜಬಲ್

ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜಯಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶನಿವಾರ ಪುಣೆ ಜಿಲ್ಲೆಯ ಖಾನವಾಡಿಗೆ ತೆರಳುತ್ತಿದ್ದಾಗ ಘಟನೆ ಸಂಭವಿಸಿದೆ.

ಘಟನೆ ಬಗ್ಗೆ ತನಿಖೆಗೆ ಆದೇಶಿಸಿರುವುದಾಗಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ತಿಳಿಸಿದ್ದಾರೆ.

‘ಧೂಳಿನಿಂದಾಗಿ ನಿಗದಿತ ಹೆಲಿಪ್ಯಾಡ್ ಗೋಚರವಾಗದ ಕಾರಣ ಕಾರು ನಿಲುಗಡೆ ಸ್ಥಳದಲ್ಲಿ ಲ್ಯಾಂಡ್ ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆಸಲಾಗುವುದು’ ಎಂದು ಅವರು ತಿಳಿಸಿದ್ದಾರೆ.

ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅತ್ಯಾಚಾರಕ್ಕೀಡಾದ ಬಾಲಕಿ ಗೋಣಿಚೀಲದೊಳಗೆ ಪತ್ತೆ

ದುರ್ಗ್ (ಪಿಟಿಐ): ಐದು ವರ್ಷದ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿ ಬಳಿಕ ಚೀಲದಲ್ಲಿ ತುಂಬಿಸಿ ಬಾವಿ ಬಳಿ ಎಸೆದು ಹೋಗಿರುವ ಘಟನೆ ಛತ್ತೀಸಗಢದ ದುರ್ಗ್ ಜಿಲ್ಲೆಯಲ್ಲಿ ನಡೆದಿದೆ.

‘ಶುಕ್ರವಾರ ಮಧ್ಯಾಹ್ನದ ಬಳಿಕ ಘಟನೆ ಸಂಭವಿಸಿದ್ದು, ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಬಾಲಕಿಯು ಶಾಲೆಯಿಂದ ಮನೆಗೆ ಮರಳುವಾಗ ಚಾಕೊಲೇಟ್ ಖರೀದಿಸಲು ಅಂಗಡಿಯೊಂದಕ್ಕೆ ಹೋಗಿದ್ದರು. ಅಂಗಡಿಯಲ್ಲಿದ್ದ ಆರೋಪಿ ಧನೇಶ್ವರ್ ಸಾಹು(35) ಚಾಕೊಲೇಟ್ ಕೊಡುವ ನೆಪದಲ್ಲಿ ಬಾಲಕಿಯನ್ನು ತನ್ನ ಮನೆಗೆ ಕರೆದೊಯ್ದಿದ್ದ.

‘ಬಾಲಕಿ ತನ್ನ ಮನೆಗೆ ಬರದಿರುವ ಕಾರಣ ಆತಂಕಗೊಂಡ ಪೋಷಕರು ಎರಡು ಗಂಟೆ ಶೋಧ ನಡೆಸಿದ್ದಾರೆ. ಬಳಿಕ ಬಾವಿಯೊಂದರ ಬಳಿ ಗೋಣಿಚೀಲ ಪತ್ತೆಯಾಗಿದ್ದು, ಅದರೊಳಗೆ ಬಾಲಕಿ ಯಿದ್ದರು’ ಎಂದು ಹೇಳಿದ್ದಾರೆ.

‘ಬಾಲಕಿಯ ಮೇಲೆ ಅತ್ಯಾಚಾರ ನಡೆದಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ತಿಳಿಸಿದ್ದಾರೆ.

ಪಾಕ್ ಹ್ಯಾಂಡ್ಲರ್ ಜತೆ ನಂಟು: ಇಬ್ಬರ ಸೆರೆ

ಬಿಜನೌರ್ (ಉತ್ತರ ಪ್ರದೇಶ) (ಪಿಟಿಐ): ಪಾಕಿಸ್ತಾನದೊಂದಿಗೆ ನಂಟು ಹೊಂದಿರುವ ಸೌದಿ ಅರೇಬಿಯಾ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಸಾಮಾಜಿಕ ಮಾಧ್ಯಮದ ಮೂಲಕ ಪಾಕಿಸ್ತಾನದ ಹ್ಯಾಂಡ್ಲರ್ ಭಾರತದಲ್ಲಿ ತನ್ನ ಜಾಲವನ್ನು ವಿಸ್ತರಿಸುತ್ತಿದ್ದ ಎಂದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಜೀಬಾಬಾದ್‌ನ ಸರ್ಕಲ್ ಅಧಿಕಾರಿ ಅಂಜನಿ ಕುಮಾರ್ ಚತುರ್ವೇದಿ ಅವರು, ‘ಉವೈದ್ ಮಲ್ಲಿಕ್ ಮತ್ತು ಜಲಾಲ್ ಹೈದರ್ ಎಂಬ ಇಬ್ಬರನ್ನು ಬಂಧಿಸಲಾಗಿದೆ. ಇವರು ಸದ್ಯ ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಅಕೀಬ್ ಜೊತೆ ಸಂಪರ್ಕದಲ್ಲಿದ್ದರು. ಅಕೀಬ್ ಎಕೆ–47 ಗನ್ ಮತ್ತು ಸ್ಫೋಟಕಗಳನ್ನು ಪ್ರದರ್ಶಿಸುತ್ತಿದ್ದ ವಿಡಿಯೊವೊಂದು ಈ ಮುಂಚೆ ಹರಿದಾಡಿತ್ತು. ವಿಡಿಯೊದಲ್ಲಿ ಪ್ರದರ್ಶಿಸಿದ್ದವು ‘ಆಟಿಕೆಗಳು’ ಎಂದು ವರದಿ ನೀಡಿ, ಅಕೀಬ್‌ನನ್ನು ದೋಷಮುಕ್ತ ಮಾಡಲಾಗಿತ್ತು’ ಎಂದು ತಿಳಿಸಿದ್ದಾರೆ.

‘ಅಕೀಬ್ ಹಿಂದೂಗಳ ವಿರುದ್ಧ ಯುವಜನರನ್ನು ಪ್ರಚೋದಿಸುತ್ತಿದ್ದ, ಇನ್‌ಸ್ಟಾಗ್ರಾಂನಲ್ಲಿ ಮೂಲಭೂತವಾದಿ ಅಂಶಗಳನ್ನು ಹರಡುತ್ತಿದ್ದ ಎಂದು ಬಂಧಿತರು ತನಿಖೆ ವೇಳೆ ಬಾಯ್ಬಿಟ್ಟಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

ಮೂರು ವರ್ಷಗಳ ಹಿಂದೆ ಸೂರತ್‌ನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಅಕೀಬ್ ಮತ್ತು ಮೈಜುಲ್ (ದಕ್ಷಿಣ ಆಫ್ರಿಕಾ) ಸಂಪರ್ಕಕ್ಕೆ ಬಂದಿರುವುದಾಗಿ ಬಂಧಿತರು ತಿಳಿಸಿದ್ದಾರೆ. ಸದ್ಯ ಪೊಲೀಸರು ಮೈಜುಲ್, ಅಕೀಬ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ದೋಣಿ ದುರಂತ: ಮೃತರ ಸಂಖ್ಯೆ 11ಕ್ಕೆ

ಮಥುರಾ (ಪಿಟಿಐ): ಇಲ್ಲಿನ ಯಮುನಾ ನದಿಯಲ್ಲಿ ದೋಣಿ ಮಗುಚಿದ ಪರಿಣಾಮ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

‘ಅವಘಡಕ್ಕೀಡಾದ ದೋಣಿಯ ನಾವಿಕನನ್ನು ಬಂಧಿಸಲಾಗಿದೆ’ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

‘ರಾಜಕೀಯ ಅವಕಾಶವಾದಿ’ಗಳ ಟೀಕಿಸಿ ಸಂಪಾದಕೀಯ

ತಿರುವನಂತಪುರ (ಪಿಟಿಐ): ಚರ್ಚ್ ಬೆಂಬಲಿತ ಮಲಯಾಳ ದಿನಪತ್ರಿಕೆ ‘ದೀಪಿಕಾ’, ‘ರಾಜಕೀಯ ಅವಕಾಶವಾದಿಗಳನ್ನು’ ಕಟುವಾಗಿ ಟೀಕಿಸಿ ಸಂಪಾದಕೀಯ ಬರೆದಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ತಿದ್ದುಪಡಿಗೆ ಸಂಬಂಧಿಸಿದಂತೆ ಪರ–ವಿರೋಧ ಚರ್ಚೆ ನಡೆಯುತ್ತಿರುವಾಗಲೇ ದಿನಪತ್ರಿಕೆಯು ಈ ತೀಕ್ಷ್ಣ ಸಂಪಾದಕೀಯವನ್ನು ಪ್ರಕಟಿಸಿದೆ. ಈ ಸಂಪಾದಕೀಯಕ್ಕೆ ಬಿಜೆಪಿ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದು, ಅವರ ಹೇಳಿಕೆಗಳನ್ನು ಕಾಂಗ್ರೆಸ್ ಖಂಡಿಸಿದೆ.

‘ಅಲ್ಪಸಂಖ್ಯಾತರ ಧ್ವನಿಯನ್ನು ಅಡಗಿಸುವ ಪ್ರಯತ್ನಗಳು ಮತ್ತು ಬೆದರಿಕೆಗಳ ನಡುವೆಯೂ ನಮ್ಮ ನಿಲುವು ಬದಲಾಗದು’ ಎಂದು ದಿನಪತ್ರಿಕೆಯು ಹೇಳಿದೆ.

ಬಿಜೆಪಿ ನಾಯಕ ಪಿ.ಸಿ.ಜಾರ್ಜ್ ಮತ್ತು ಅವರ ಪುತ್ರ ಶೋನ್ ಜಾರ್ಜ್ ಅವರು ಕೆಲ ಬಿಷಪ್‌ಗಳ ವಿರುದ್ಧ ಟೀಕೆ ಮಾಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

‘ಕೆಲವು ರಾಜಕೀಯ ಅವಕಾಶವಾದಿಗಳು ಎಫ್‌ಸಿಆರ್‌ಎ ಬಗ್ಗೆ ಮಾತನಾಡದಂತೆ ಬೆದರಿಕೆ ಹಾಕಿದರೂ ನಮ್ಮ ನಿಲುವು ಬದಲಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿದೆ. ಆದರೆ ಯಾವುದೇ ರಾಜಕೀಯ ಪಕ್ಷದ ನಾಯಕರ ಹೆಸರನ್ನು ಅದು ಉಲ್ಲೇಖಿಸಿಲ್ಲ. ಶೋನ್ ಜಾರ್ಜ್, ‘ದಿನಪತ್ರಿಕೆಯ ನಿಲುವನ್ನು ಚರ್ಚ್‌ನ ನಿಲುವು ಎಂದು ಪರಿಗಣಿಸಲಾಗುವುದಿಲ್ಲ’ ಎಂದು ಹೇಳಿದ್ದಾರೆ.

ಪ್ರತಿಯೊಂದು ನ್ಯಾಯಾಲಯವೂ ಹೈಬ್ರಿಡ್ ಸೌಲಭ್ಯ ಹೊಂದಲಿ– ಸಿಜೆಐ ಆಶಯ

ತಂತ್ರಜ್ಞಾನ ಈಗ ಸಾಂವಿಧಾನಿಕ ಸಾಧನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ತಂತ್ರಜ್ಞಾನವು ಇನ್ನುಮುಂದೆ ಆಡಳಿತಾತ್ಮಕ ಅನುಕೂಲಕ್ಕೆ ಬಳಕೆಯಾಗುವ ಸಾಧನವಷ್ಟೇ ಅಲ್ಲ. ಅದೀಗ ಸಮಾನತೆ, ನ್ಯಾಯದಾನವನ್ನು ಬಲಪಡಿಸುವ ಹಾಗೂ ನ್ಯಾಯಾಂಗದ ಪ್ರಕ್ರಿಯೆಗಳ ಲ್ಲಿನ ತೊಡಕು ನಿವಾರಣೆಗೆ ಸಹಕಾರಿಯಾಗುವ ಸಾಂವಿಧಾನಿಕ ಸಾಧನ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಶನಿವಾರ ಹೇಳಿದ್ದಾರೆ.

‘ನ್ಯಾಯಾಂಗ ಪ್ರಕ್ರಿಯೆಯ ಪುನರುತ್ಥಾನ ಮತ್ತು ಡಿಜಿಟಲ್ ರೂಪಾಂತರ’ ಎಂಬ ವಿಷಯ ಆಧರಿಸಿ ಆಯೋಜಿಸಿರುವ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಿಜೆಐ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಅವರು, ಪ್ರತಿಯೊಬ್ಬ ವ್ಯಕ್ತಿಯೂ ನ್ಯಾಯಯುತ, ಸಕಾಲಿಕ ಮತ್ತು ಪರಿಣಾಮಕಾರಿ ನ್ಯಾಯದಾನ ಪಡೆಯಲು ಸಾಧ್ಯವಾಗುತ್ತದೆ ಎನ್ನುವ ಭರವಸೆಯನ್ನು ಖಾತರಿಪಡಿಸಿಕೊಳ್ಳುವುದೇ ಎಲ್ಲಾ ನ್ಯಾಯ ವ್ಯವಸ್ಥೆಯ ಮೂಲತತ್ವ’ ಎಂದರು.



ಸೂರ್ಯಕಾಂತ್

‘ಪ್ರತಿಯೊಂದು ನ್ಯಾಯಾಲಯವೂ ಹೈಬ್ರಿಡ್ ವಿಚಾರಣಾ ಸೌಲಭ್ಯಗಳನ್ನು ಹೊಂದಬೇಕು. ತಂತ್ರಜ್ಞಾನ ಆಡಳಿತಾತ್ಮಕ ಅನುಕೂಲಕ್ಕಷ್ಟೇ ಅಲ್ಲ, ಅದು ನ್ಯಾಯದಾನದ ತೊಡಕುಗಳ ನಿವಾರಣೆಯ ಸಾಧನ’ ಎಂದೂ ಸಿಜೆಐ ಪ್ರತಿಪಾದಿಸಿದರು.

‘ವಾಣಿಜ್ಯ ಕಾನೂನು ರಚನೆಯ ಪರಿಷ್ಕರಣೆ ಆಗಲಿ’: ‘ದೇಶವನ್ನು 10 ಟ್ರಿಲಿಯನ್ ಡಾಲರ್ (930 ಲಕ್ಷ ಕೋಟಿ) ಆರ್ಥಿಕತೆಯನ್ನಾಗಿ ಪರಿವರ್ತಿಸಲು ಕೇವಲ ಬಂಡವಾಳ, ನೀತಿ ನಿರೂಪಣೆಗಳಿಂದ ಸಾಧ್ಯವಿಲ್ಲ. ನ್ಯಾಯಾಂಗ ವ್ಯವಸ್ಥೆಯ ಗುಣಮಟ್ಟವೂ ಇದರಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಹೀಗಾಗಿ ವಾಣಿಜ್ಯ ಕಾನೂನು ರಚನೆಯನ್ನೂ ಪರಿಷ್ಕರಿಸಬೇಕು’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಶನಿವಾರ ಕರೆ ನೀಡಿದ್ದಾರೆ.

ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ‘ರೂಲ್ ಆಫ್ ಲಾ ಕನ್ವೆನ್ಷನ್ 2026’ ಕಾರ್ಯಕ್ರಮದಲ್ಲಿ ‘ಲೀಗಲ್ ರಿಫಾರ್ಮ್ ರೋಡ್‌ಮ್ಯಾಪ್ ಟು 10 ಟ್ರಿಲಿಯನ್ ಡಾಲರ್ ಭಾರತ್’ ಎಂಬ ವಿಚಾರದ ಕುರಿತು ಸಿಜೆಐ ಮಾತನಾಡಿದರು.

‘ದೇಶವು ಭವಿಷ್ಯದ ಗುರಿ ಸಾಧಿಸಬೇಕಾದರೆ ಹೂಡಿಕೆ ಅಗತ್ಯ, ಈ ನಿಟ್ಟಿನಲ್ಲಿ ಹೂಡಿಕೆದಾರರ ವಿಶ್ವಾಸವನ್ನು ಗಳಿಸುವಂತಹ ವಾಣಿಜ್ಯ ಕಾನೂನುಗಳನ್ನು ರೂಪಿಸಬೇಕಾಗುತ್ತದೆ’ ಎಂದೂ ಕರೆ ನೀಡಿದ್ದಾರೆ.

‘ಸಂಧಾನವು ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಘಟಕ’

‘ಸಂಧಾನ ಅಥವಾ ಮಧ್ಯಸ್ಥಿಕೆ ಎಂಬುದು ವಿವಾದಗಳನ್ನು ಬಗೆಹರಿಸಲು ಇರುವ ಪರ್ಯಾಯ ಮಾರ್ಗಗಳಷ್ಟೇ ಅಲ್ಲ. ಅವು ಆಧುನಿಕ ಮತ್ತು ಸ್ಪಂದನಾತ್ಮಕ ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಘಟಕಗಳು’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಶನಿವಾರ ಹೇಳಿದ್ದಾರೆ.

ಭಾರತೀಯ ಮಧ್ಯಸ್ಥಿಕೆ ಪರಿಷತ್ ಆಯೋಜಿಸಿದ್ದ ‘ಆರ್ಬಿಟೇಷನ್ ಇನ್ ದಿ ಎರಾ ಆಫ್ ಗ್ಲೋಬಲೈಸೇಷನ್’ (ಜಾಗತೀಕರಣದ ಕಾಲಘಟ್ಟದಲ್ಲಿ ಮಧ್ಯಸ್ಥಿಕೆ) ಎಂಬ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ನ್ಯಾ. ಬಿ.ವಿ. ನಾಗರತ್ನ ಮಾತನಾಡಿ, ಅರ್ಥ ವ್ಯವಸ್ಥೆಯು ಹೆಚ್ಚು ಸಂಕೀರ್ಣ ಮತ್ತು ಜಾಗತೀಕರಣಗೊಳ್ಳುತ್ತಿರುವ ಸಂದರ್ಭದಲ್ಲಿ ಪರ್ಯಾಯ ವಿವಾದ ಪರಿಹಾರ (ಎಡಿಆರ್) ಕಾರ್ಯವಿಧಾನಗಳ ಮಹತ್ವದ ಬಗ್ಗೆ ಪ್ರಸ್ತಾಪಿಸಿದ್ದಾರೆ.

‘ವಿವಾದಗಳು ಕಾನೂನಾತ್ಮಕ ಪ್ರಶ್ನೆಗಳಷ್ಟೇ ಅಲ್ಲ; ಸಾಮಾಜಿಕ, ವಾಣಿಜ್ಯ, ಪರಸ್ಪರ ಸಂಬಂಧಗಳ ಕುರಿತಾದ ಪ್ರಶ್ನೆಗಳೂ ಹೌದು. ಇವುಗಳಿಗೆ ನ್ಯಾಯಾಲಯದ ತೀರ್ಪಿಗಿಂತಲೂ ಹೆಚ್ಚಾಗಿ ಸ್ವಯಂ ಪ್ರೇರಿತ ಪರಿಹಾರಗಳು ಬೇಕಾಗಬಹುದು. ಹೀಗಾಗಿ ಸಂಧಾನ ಅಥವಾ ಮಧ್ಯಸ್ಥಿಕೆ ಎಂಬುದನ್ನು ಕೇವಲ ಪರ್ಯಾಯ ಮಾರ್ಗ ಎಂದು ನೋಡಲಾಗದು’ ಎಂದೂ ಅವರು ಹೇಳಿದ್ದಾರೆ.

ಲೇಕ್ ವ್ಯೂಗೆ ಜಮೀನು: ಸಿಬಿಐ ತನಿಖೆ

₹10 ಲಕ್ಷ ದಂಡ • ಹೆಬ್ಬಾಳ– ಅಮಾನಿಕೆರೆ ಭೂಸ್ವಾಧೀನ ರದ್ದುಪಡಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಕಸಬಾ ಹೋಬಳಿಯ ಹೆಬ್ಬಾಳ ಮತ್ತು ಅಮಾನಿಕೆರೆ ಕಂದಾಯ ಗ್ರಾಮಗಳ ವ್ಯಾಪ್ತಿಯಲ್ಲಿನ ವಿವಿಧ ಸರ್ವೆ ನಂಬರ್‌ಗಳ ಕೆಲವು ಜಮೀನುಗಳನ್ನು ಕೆಐಎಡಿಬಿ ವತಿಯಿಂದ ಸ್ವಾಧೀನಪಡಿಸಿಕೊಂಡು ಅಸ್ತಿತ್ವದಲ್ಲೇ ಇಲ್ಲದ 'ಲೇಕ್ ವ್ಯೂ ಟೂರಿಸಂ ಕಾರ್ಪೊರೇಷನ್'ಗೆ ಪರಭಾರೆ ಮಾಡಿದ್ದ ಪ್ರಕ್ರಿಯೆಯನ್ನು ರದ್ದುಗೊಳಿಸಿರುವ ಹೈಕೋರ್ಟ್, ಇದರ ತನಿಖೆಯನ್ನು ಸಿಬಿಐಗೆ ವಹಿಸಿ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಏಕಸದಸ್ಯ ನ್ಯಾಯ ಪೀಠದ ಆದೇಶವನ್ನು ರದ್ದು ಪಡಿಸುವಂತೆ ಕೋರಿ ದಿವಂಗತ ಕೃಷ್ಣಾರೆಡ್ಡಿ ಅವರ ಕಾನೂನು ವಾರಸುದಾರರು ಮತ್ತಿತರರು 2013ರಲ್ಲಿ ಮೂರು ಪ್ರತ್ಯೇಕ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿಗಳನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿ ಮಹತ್ವದ ತೀರ್ಪು ಪ್ರಕಟಿಸಿದೆ.

'ಖಾಸಗಿ ವ್ಯಕ್ತಿಗಳ ಜೊತೆಗೆ ಕೈಜೋಡಿಸಿರುವ ರಾಜ್ಯ ಸರ್ಕಾರದ ಅಧಿಕಾರಿಗಳು ಸ್ವತಃ ಮಹತ್ವದ ವಂಚನೆಯಲ್ಲಿ ಭಾಗಿಯಾಗಿದ್ದಾರೆ. ಇದರ ನಿಷ್ಪಕ್ಷಪಾತ ಮತ್ತು ಸ್ವತಂತ್ರ ತನಿಖೆಯನ್ನು ರಾಜ್ಯದ ತನಿಖಾ ಸಂಸ್ಥೆಗಳಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸಿಬಿಐ ತೆಕ್ಕೆಗೆ ವಹಿಸುವುದೇ ಸೂಕ್ತ' ಎಂದು ತೀರ್ಪಿನಲ್ಲಿ ವಿವರಿಸಿದೆ.

₹10 ಲಕ್ಷ ದಂಡ: 'ಈ ಪ್ರಕರಣದ ಸ್ವಾಧೀನ ಪ್ರಕ್ರಿಯೆ ಅಸ್ತಿತ್ವದಲ್ಲಿಯೇ ಇಲ್ಲದ ಘಟಕವೊಂದರ ಆದೇಶದ ಮೇರೆಗೆ ನಡೆದಿದೆ. ಭೂ ಮಾಲೀಕರ ಅಮೂಲ್ಯ ಆಸ್ತಿಯನ್ನು ಅತ್ಯಲ್ಪ ಬೆಲೆಗೆ ಕಸಿದುಕೊಂಡು ಐತಿಹಾಸಿಕ ವಂಚನೆ ಎಸಗಲಾಗಿದೆ' ಎಂದು ಬಣ್ಣಿಸಿರುವ ನ್ಯಾಯಪೀಠ, ಸಂಪೂರ್ಣ ಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿದೆ. ಅಂತೆಯೇ ಪ್ರತಿವಾದಿ, 'ಲೇಕ್ ವ್ಯೂ ಟೂರಿಸಂ ಕಾರ್ಪೊರೇಷನ್'ಗೆ ₹10 ಲಕ್ಷ ದಂಡ ವಿಧಿಸಿದೆ.

ಪ್ರಕರಣವೇನು?

ರೆಸಾರ್ಟ್, ಪಂಚತಾರಾ ಹೋಟೆಲ್, ಮನೋರಂಜನಾ ಉದ್ಯಾನವನ ಇತ್ಯಾದಿಗಳನ್ನು ಒಳಗೊಂಡ, 'ಯೂನಿಕೇರ್ ಪ್ರವಾಸಿ ಕೇಂದ್ರ' ಸ್ಥಾಪಿಸಲು ಜಮೀನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ನಿರ್ದಿಷ್ಟ ಸರ್ವೆ ನಂಬರ್‌ಗಳನ್ನು ಉಲ್ಲೇಖಿಸಿ ಉದ್ಯಮಿ ಪಿ.ಸತೀಶ್ ಪೈ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಮನವಿಯಲ್ಲಿ ಸಂಸ್ಥೆಯ ಪ್ರವರ್ತಕರನ್ನಾಗಿ ಡಾ.ರಾಮದಾಸ್ ಪೈ, ಸೈಯದ್ ಮೊಹಮ್ಮದ್ ಸಲಾಹುದ್ದೀನ್, ಪಿ.ದಯಾನಂದ ಪೈ ಮತ್ತು ಪಿ.ಸತೀಶ್ ಪೈ ಇವರನ್ನು ಕಾಣಿಸಲಾಗಿತ್ತು.

ಮನವಿ ಅನುಸಾರ ಕೆಐಎಡಿಬಿ ಕ್ರಮವಾಗಿ 2002 ಮತ್ತು 2004ರಲ್ಲಿ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿತ್ತು. ಈ ಹಿನ್ನೆಲೆಯಲ್ಲಿ 2002-2004ರ ಅವಧಿಯಲ್ಲಿ ಹೆಬ್ಬಾಳ ಮತ್ತು ಹೆಬ್ಬಾಳ ಅಮಾನಿಕೆರೆ ಗ್ರಾಮ ವ್ಯಾಪ್ತಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 55 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಅಂತೆಯೇ, 2023ರಲ್ಲಿ ಪಟ್ಟಣ ಮತ್ತು ಇತರ ಯೋಜನೆಗಳಿಗೆ ಭೂ ಬಳಕೆಯನ್ನು ಬದಲಾಯಿಸಲು ಅನುಮತಿ ನೀಡಲಾಗಿತ್ತು.

ಸ್ವಾಧೀನ ಪ್ರಕ್ರಿಯೆಯನ್ನು ಆಕ್ಷೇಪಿಸಿದ್ದ ಅರ್ಜಿದಾರರು, 'ಸ್ವಾಧೀನಪಡಿಸಿಕೊಂಡಿರುವ ಜಮೀನುಗಳು ಹೆಬ್ಬಾಳ ಫ್ಲೈ-ಓವರ್ ಪಕ್ಕದಲ್ಲಿವೆ. ಸ್ವಾಧೀನ ಪ್ರಕ್ರಿಯೆಗಳು ಕಾನೂನಿನ ಅಧಿಕಾರವಿಲ್ಲದೆ ನಡೆದಿವೆ. ಇಲ್ಲಿನ ಬೆಲೆಬಾಳುವ ಜಮೀನನ್ನು ಕೆಐಎಡಿಬಿ ಅತ್ಯಲ್ಪ ಬೆಲೆಗೆ ಲೇಕ್ ವ್ಯೂ ಟೂರಿಸಂ ಕಾರ್ಪೊರೇಷನ್‌ಗೆ ಪರಭಾರೆ ಮಾಡಿದ್ದು ಇದನ್ನು ರದ್ದುಪಡಿಸಬೇಕು' ಎಂದು ದೂರಿದ್ದರು.

'ಊಹಾತ್ಮಕ ವರದಿ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೀದರ್: 'ಊಹಾತ್ಮಕ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಇಲ್ಲಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಕೆಯುಡಬ್ಲ್ಯುಜೆ) ಇಲ್ಲಿ ಆಯೋಜಿಸಿದ್ದ ಪತ್ರಕರ್ತರ 40ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕ್ಷುಲ್ಲಕ ವಿಚಾರವನ್ನು ದಿನವಿಡೀ ಮಾಧ್ಯಮದಲ್ಲಿ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ–ಹೆಂಡತಿಯ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಆಗಲಿದೆ' ಎಂದು ಪ್ರಶ್ನಿಸಿದರು.

'ಕೆಲ ಒಳ್ಳೆಯ ಪತ್ರಕರ್ತರೂ ಇದ್ದಾರೆ. ಆದರೆ, ಬಹಳಷ್ಟು ಮಾಧ್ಯಮ ಸಂಸ್ಥೆಗಳು ಕಾರ್ಪೊರೇಟ್ ಹಿಡಿತದಲ್ಲಿವೆ. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರು, ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿ ಬಿಡುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಾನು ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಈವರೆಗೆ ಯಾರನ್ನೂ ಕೇಳಿಲ್ಲ' ಎಂದು ತಿಳಿಸಿದರು.

ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಹಾಗೂ ವಿಮೆ ತೊಂದರೆ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಕಲಬುರಗಿ ಮೂಲದ ಹಿರಿಯ ಪತ್ರಕರ್ತ ರಾಮು ಪಾಟೀಲ ಅವರಿಗೆ 'ಮಾಜಿ ಸಚಿವ ಲಿಂ. ಭೀಮಣ್ಣ ಖಂಡ್ರೆ ದತ್ತಿ ನಿಧಿ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಸಚಿವರಾದ ಈಶ್ವರ ಬಿ. ಖಂಡ್ರೆ, ರಹೀಂ ಖಾನ್, ಶರಣಪ್ರಕಾಶ ಪಾಟೀಲ, ಸಂಸದ ಸಾಗರ್ ಖಂಡ್ರೆ, ಬಸವ ಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಹಾರಕೂಡದ ಚನ್ನವೀರ ಶಿವಾಚಾರ್ಯರು, ಪತ್ರಕರ್ತ ವಿಶ್ವೇಶ್ವರ ಭಟ್ ಹಾಗೂ ಕೆಯುಡಬ್ಲ್ಯುಜೆ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಹಾಜರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೇಖನಿಯಿಂದ ಬರೆಯುವ ಮೂಲಕ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) 40ನೇ ರಾಜ್ಯ ಸಮ್ಮೇಳನವನ್ನು ಬೀದರ್‌ನಲ್ಲಿ ಶನಿವಾರ ಉದ್ಘಾಟಿಸಿದರು. ಹಾರಕೂಡದ ಚನ್ನವೀರ ಶಿವಾಚಾರ್ಯರು, ಕೆಯುಡಬ್ಲ್ಯುಜೆ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು, ಸಚಿವ ಈಶ್ವರ ಖಂಡ್ರೆ ಹಾಜರಿದ್ದರು

ಮುಖ್ಯಾಂಶಗಳು

- ಪತ್ರಕರ್ತರ 40ನೇ ರಾಜ್ಯ ಸಮ್ಮೇಳನ
- ಕಾರ್ಪೊರೇಟ್ ಹಿಡಿತದಲ್ಲಿವೆ ಮಾಧ್ಯಮ ಸಂಸ್ಥೆಗಳು: ಸಿ.ಎಂ
- ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್: ಭರವಸೆ

> **ಜನಸಾಮಾನ್ಯರು ಈಗಲೂ ಪತ್ರಿಕೆಗಳ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡಿದ್ದೇವೆಯೇ ಎಂದು ಪತ್ರಕರ್ತರು ಪ್ರಶ್ನಿಸಿಕೊಳ್ಳಬೇಕು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಸೌಜನ್ಯ ಪ್ರಕರಣ ಮರು ತನಿಖೆ ಸಾರ್ವಜನಿಕವಾಗಿ ಬೆಂಬಲ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಜನ್ಯ ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾಗಿ ಮರು ತನಿಖೆ ನಡೆಸುವುದರ ಜೊತೆ ಸಾರ್ವಜನಿಕವಾಗಿ ಬೆಂಬಲ ನೀಡಬೇಕು ಎಂದು 'ಕೊಂದವರು ಯಾರು ಆಂದೋಲನ' ಆಗ್ರಹಿಸಿದೆ.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಬಾಲನ್, ಆಂದೋಲನದ ಮುಖಂಡರಾದ ಗೌರಮ್ಮ, ಎ. ಜ್ಯೋತಿ, ಮಲ್ಲಿಗೆ ಸಿರಿಮನೆ, ಮಧು ಭೂಷಣ್, ಮಮತಾ ಯಜಮಾನ್ ಅವರು ಸೌಜನ್ಯ ಅವರ ತಾಯಿ ಕುಸುಮಾವತಿಯವರ ಹೋರಾಟಕ್ಕೆ ಬೆಂಬಲ ಸೂಚಿಸುವ ಪತ್ರವನ್ನು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಬಾಲನ್, 'ಕುಸುಮಾವತಿ ಅವರು 14 ವರ್ಷಗಳ ಹೋರಾಟದ ಫಲವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಸೌಜನ್ಯ ಪ್ರಕರಣದ ಅರ್ಜಿಯನ್ನು ವಿಚಾರಣೆ ನಡೆಸಲು ಅನುಮತಿ ನೀಡಿದ್ದು, ರಾಜ್ಯ ಸರ್ಕಾರ ಹಾಗೂ ಸಿಬಿಐಗೆ ನೋಟಿಸ್ ಜಾರಿ ಮಾಡಿದೆ' ಎಂದರು.

'ಧರ್ಮಸ್ಥಳ ಸುತ್ತಮುತ್ತಲು 74 ಮಹಿಳೆಯರ ಅತ್ಯಾಚಾರ, ಕೊಲೆ, ನಾಪತ್ತೆ ಅಸಹಜ ಸಾವುಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ತ್ವರಿತವಾಗಿ ಹೈಕೋರ್ಟ್‌ಗೆ ಸಲ್ಲಿಸಬೇಕು. ಇದರ ಜೊತೆಗೆ ಸಾರ್ವಜನಿಕ ಪರಿಶೀಲನೆಗೂ ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

'ವ್ಯವಸ್ಥೆಯ ವೈಫಲ್ಯ': 'ಧರ್ಮಸ್ಥಳದಲ್ಲಿ ವ್ಯಾಪ್ತಿಯಲ್ಲಿ ನಡೆದ ದೌರ್ಜನ್ಯಗಳ ಪ್ರಕರಣಗಳ ವಿಚಾರದಲ್ಲಿ ವ್ಯವಸ್ಥೆಯ ವೈಫಲ್ಯವಿದೆ. ಸ್ಥಳೀಯ ಪೊಲೀಸ್, ಸಿಐಡಿ, ಸಿಬಿಐ ಎಲ್ಲರೂ ತನಿಖೆ ಮಾಡಿದ್ದಾರೆ, ಆದರೆ ಎಲ್ಲವೂ ವಿಫಲವಾಗಿವೆ' ಎಂದು ವಕೀಲ ಬಾಲನ್ ತಿಳಿಸಿದರು.

ನೀರಾನೆ 'ಹಂಸಿಣಿ'ಗೆ ಗರ್ಭಪಾತ

ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ, ಸಿಂಹ ಧಾಮದಲ್ಲಿದ್ದ ನೀರಾನೆ ಹಂಸಿಣಿಗೆ ಶನಿವಾರ ಗರ್ಭಪಾತ ಆಗಿದೆ. ಮರಿ ಸತ್ತಿದ್ದು, ಹಂಸಿಣಿ ಆರೋಗ್ಯದ ಮೇಲೆ ನಿಗಾ ವಹಿಸಲಾಗಿದೆ.

ನೀರಾನೆಗಳು ಸಾಮಾನ್ಯವಾಗಿ ಗರ್ಭ ಧರಿಸಿದ 250 ದಿನಗಳಿಗೆ ಮರಿ ಹಾಕುತ್ತವೆ. ಎಂಟು ವರ್ಷ ವಯಸ್ಸಿನ 'ಹಂಸಿಣಿ' ಗರ್ಭ ಧರಿಸಿ 265 ದಿನಗಳು ಆಗಿದ್ದವು. ಆದರೆ, ಪ್ರಸವ ಆಗಿರಲಿಲ್ಲ.

ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನ, ಮೃಗಾಲಯದ ಪಶು ವೈದ್ಯರು ನಿಗಾ ವಹಿಸಿದ್ದರು ಎಂದು ತಿಳಿದುಬಂದಿದೆ.

ಗರ್ಭಿಣಿ ಆಗಿದ್ದ ಹಂಸಿಣಿ ಆಹಾರ ಸೇವಿಸುತ್ತಿಲ್ಲ ಎಂಬ ಕಾರಣಕ್ಕೆ ಮಾರ್ಚ್ 19ರ ರಾತ್ರಿ ಡಾ. ಸಮೀಕ್ಷಾ ಅವರು ಆರೋಗ್ಯ ತಪಾಸಣೆಗೆ ಮುಂದಾಗಿದ್ದರು. ಆಗ ನೀರಾನೆ ದಾಳಿ ನಡೆಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರು ಮರುದಿನ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಎಡ್ಯುವರ್ಸ್: ವಿದ್ಯಾರ್ಥಿಗಳಿಗೆ ಭರಪೂರ ಮಾಹಿತಿ

ಶೈಕ್ಷಣಿಕ ಮೇಳದಲ್ಲಿ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಭಾಗಿ • ತಜ್ಞರಿಂದ ಸಲಹೆ, ಮಾರ್ಗದರ್ಶನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ಹುಬ್ಬಳ್ಳಿಯ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ 'ಎಡ್ಯುವರ್ಸ್– ಶೈಕ್ಷಣಿಕ ಮೇಳ' ಶನಿವಾರ ಆರಂಭವಾಯಿತು.

ಹುಬ್ಬಳ್ಳಿ-ಧಾರವಾಡ ಸೇರಿ ಸುತ್ತಮುತ್ತಲ ಊರುಗಳ ನೂರಾರು ವಿದ್ಯಾರ್ಥಿಗಳು, ಅವರ ಪೋಷಕರು ಮೇಳಕ್ಕೆ ಭೇಟಿ ನೀಡಿದರು. ವಿವಿಧ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆದರು. ಸಿಇಟಿ, ನೀಟ್ ಪ್ರವೇಶ ಪರೀಕ್ಷೆಗಳಿಗೆ ಸಂಬಂಧಿಸಿದ ಗೊಂದಲಗಳನ್ನು ಪರಿಹರಿಸಿಕೊಂಡರು.

ಸಿಎಂಆರ್ ವಿಶ್ವವಿದ್ಯಾಲಯ, ರೇವಾ ವಿಶ್ವವಿದ್ಯಾಲಯ, ಆರ್.ವಿ. ವಿಶ್ವವಿದ್ಯಾಲಯ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಕೆಎಲ್‌ಇ ವಿಶ್ವವಿದ್ಯಾಲಯ, ದಯಾನಂದ ಸಾಗರ ವಿಶ್ವವಿದ್ಯಾಲಯ ಸೇರಿ ರಾಜ್ಯ, ವಿವಿಧ ರಾಜ್ಯಗಳ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಮೇಳದಲ್ಲಿ ಪಾಲ್ಗೊಂಡಿದ್ದವು.

ಕಲಾ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್, ವೈದ್ಯಕೀಯ ಸೇರಿ ವಿವಿಧ ವಿಭಾಗಗಳ ಕೋರ್ಸ್‌ಗಳು, ಪ್ರವೇಶ ಶುಲ್ಕ, ಸೌಲಭ್ಯಗಳ ಬಗ್ಗೆ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ಪೋಷಕರು, ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಿದರು.

ಮೇಳವನ್ನು ಉದ್ಘಾಟಿಸಿದ ಶಾಸಕ ಮಹೇಶ ಟೆಂಗಿನಕಾಯಿ, 'ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ವತಿಯಿಂದ 16 ವರ್ಷಗಳಿಂದ ಎಡ್ಯುವರ್ಸ್ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಕಾರ್ಯ' ಎಂದರು.

ಪ್ರೇರಕ ಭಾಷಣ ಮಾಡಿದ ವಾಗ್ಮಿ ಮಹೇಶ ಮಾಸಾಳ, 'ಜಾಗತಿಕ ಮಟ್ಟದಲ್ಲಿ 2032ರ ವೇಳೆಗೆ ಸಾಕಷ್ಟು ಬದಲಾವಣೆ ಆಗುತ್ತವೆ. 97 ಮಿಲಿಯನ್ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಕೌಶಲ ಬೆಳೆಸಿಕೊಳ್ಳಬೇಕು' ಎಂದರು.

ಧಾರವಾಡ ಐಐಟಿ ಸಂಸ್ಥೆಯ ನಿರ್ದೇಶಕ ಪ್ರೊ.ವೆಂಕಪ್ಪಯ್ಯ ದೇಸಾಯಿ ಅವರು ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಅವಕಾಶಗಳು ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾಜಿ ಸಾರ್ವಜನಿಕ ಸಂಪರ್ಕಾಧಿಕಾರಿ ಎ.ಎಸ್.ರವಿ ಅವರು ಸಿಇಟಿ ಬಗ್ಗೆ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳಿಂದ ಮಾಹಿತಿ
- ಅಣಕು ಸಿಇಟಿ, ನೀಟ್‌ಗೆ ಉತ್ತಮ ಸ್ಪಂದನೆ
- ಪ್ರವೇಶ ಪರೀಕ್ಷೆಗಳ ಗೊಂದಲಕ್ಕೆ ಪರಿಹಾರ

ಹುಬ್ಬಳ್ಳಿಯಲ್ಲಿ ಶನಿವಾರ ಎಡ್ಯುವರ್ಸ್ ಶೈಕ್ಷಣಿಕ ಮೇಳದ ಮಳಿಗೆಯೊಂದರಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಮಾಹಿತಿ ಪಡೆದರು —ಪ್ರಜಾವಾಣಿ ಚಿತ್ರ

DH ಪ್ರಜಾವಾಣಿ
ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಕೆಎಸ್‌ಪಿಸಿಬಿ: ಶೇ 65 ಹುದ್ದೆ ಖಾಲಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ (ಕೆಎಸ್‌ಪಿಸಿಬಿ) ಶೇ 65ರಷ್ಟು ಹುದ್ದೆಗಳು ಖಾಲಿಯಾಗಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ವರದಿ ಸಲ್ಲಿಸುವಂತೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರ್ದೇಶನ ನೀಡಿತ್ತು. ದೇಶದ ಎಲ್ಲ ಮಾಲಿನ್ಯ ನಿಯಂತ್ರಣ ಮಂಡಳಿಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಬಗ್ಗೆ ಮಂಡಳಿಯು ಎನ್‌ಜಿಟಿಗೆ ಗುರುವಾರ ವರದಿ ಸಲ್ಲಿಸಿದೆ.

ಕರ್ನಾಟಕ ಮಾಲಿನ್ಯ ಮಂಡಳಿಗೆ 420 ಎಂಜಿನಿಯರಿಂಗ್ ಹಾಗೂ 303 ಆಡಳಿತಾತ್ಮಕ ಸೇರಿದಂತೆ 723 ಹುದ್ದೆಗಳು ಮಂಜೂರು ಮಾಡಲಾಗಿದೆ. ಈ ಪೈಕಿ 255 ಹುದ್ದೆಗಳಷ್ಟೇ ಭರ್ತಿಯಾಗಿವೆ. 267 ಎಂಜಿನಿಯರಿಂಗ್ ಹಾಗೂ 201 ಆಡಳಿತಾತ್ಮಕ ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಮಂಡಳಿಯು ವರದಿಯಲ್ಲಿ ತಿಳಿಸಿದೆ. ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಬಗ್ಗೆ ಕರ್ನಾಟಕ ಸರ್ಕಾರವು ಫೆಬ್ರುವರಿ ತಿಂಗಳಲ್ಲಿ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಹುದ್ದೆಗಳ ಭರ್ತಿ ಮಾಡಲು ಮಂಡಳಿ ಪ್ರಕ್ರಿಯೆ ಆರಂಭಿಸಿದೆ ಎಂದೂ ಮಂಡಳಿ ತಿಳಿಸಿದೆ.

ದೇಶದ ವಿವಿಧ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ 10,915 ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಈ ಪೈಕಿ, 4,983 (ಶೇ 46) ಹುದ್ದೆಗಳು ಖಾಲಿ ಇವೆ. ಬಿಹಾರ, ಜಾರ್ಖಂಡ್ ಹಾಗೂ ಉತ್ತರಾಖಂಡದ ಮಂಡಳಿಗಳಲ್ಲಿ ಶೇ 75ಕ್ಕಿಂತ ಹೆಚ್ಚು ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಕರ್ನಾಟಕ ಸೇರಿದಂತೆ ಏಳು ರಾಜ್ಯಗಳ ಮಂಡಳಿಗಳಲ್ಲಿ ಶೇ 50ಕ್ಕಿಂತ ಹೆಚ್ಚು ಹುದ್ದೆಗಳು ಬಹು ಕಾಲದಿಂದ ಖಾಲಿ ಇವೆ ಎಂದೂ ವರದಿ ತಿಳಿಸಿದೆ.



ಚಿಟಿಕೆ ಸುದ್ದಿ

ಹೊರ್ಮುಜ್ ದಾಟಿದ 'ಜಗ್ ವಿಕ್ರಮ್'

ನವದೆಹಲಿ (ಪಿಟಿಐ): ಭಾರತದ ಧ್ವಜ ಹೊಂದಿರುವ ಎಲ್‌ಪಿಜಿ ಹೊತ್ತಿರುವ 'ಜಗ್ ವಿಕ್ರಮ್' ಹಡಗು ಹೊರ್ಮುಜ್ ಜಲಸಂಧಿಯನ್ನು ದಾಟಿದೆ.

ಎರಡು ವಾರಗಳ ತಾತ್ಕಾಲಿಕ ಕದನ ವಿರಾಮ ಘೋಷಣೆಯಾದ ಬಳಿಕ, ಜಲಸಂಧಿ ದಾಟಿದ ದೇಶದ ಮೊದಲ ಹಡಗು ಇದಾಗಿದೆ.

ಜಗ್ ವಿಕ್ರಮ್, ಸುರಕ್ಷಿತವಾಗಿ ಹೊರ್ಮುಜ್ ಜಲಸಂಧಿಯನ್ನು ದಾಟಿದ 9ನೇ ಹಡಗು ಆಗಿದೆ. ಇನ್ನೂ ಭಾರತದ ಧ್ವಜ ಹೊಂದಿರುವ 15 ಹಡಗುಗಳು ಜಲಸಂಧಿಯಲ್ಲಿದ್ದು, ಭಾರತಕ್ಕೆ ಬರಲು ಮಾರ್ಗಕ್ಕಾಗಿ ಕಾಯುತ್ತಿವೆ.

ಮುಂಬೈ ಮೂಲದ ಗ್ರೇಟ್ ಈಸ್ಟರ್ನ್ ಶಿಪ್ಪಿಂಗ್ ಕಂಪನಿ ಮಾಲೀಕತ್ವದ ಜಗ್ ವಿಕ್ರಮ್ ಮಧ್ಯಮ ಗಾತ್ರದ ಹಡಗು ಆಗಿದೆ. ಈ ಹಡಗು 20,400 ಟನ್ ಸಾಮರ್ಥ್ಯದ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊಂದಿದ್ದು, ಏಪ್ರಿಲ್ 15ರಂದು ಮುಂಬೈಗೆ ಬರಲಿದೆ ಎಂದು ಶಿಪ್ ಟ್ರ್ಯಾಕಿಂಗ್ ದತ್ತಾಂಶವು ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಏಪ್ರಿಲ್ 3ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹84,367 ಕೋಟಿ ಹೆಚ್ಚಳವಾಗಿದೆ.

ಒಟ್ಟು ಮೀಸಲು ಸಂಗ್ರಹವು ₹64.89 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹16,607 ಕೋಟಿಯಷ್ಟು ಹೆಚ್ಚಳವಾಗಿದ್ದು, ₹51.46 ಲಕ್ಷ ಕೋಟಿಯಾಗಿದೆ.

ಚಿನ್ನದ ಮೀಸಲು ಸಂಗ್ರಹದಲ್ಲಿ ₹67,220 ಕೋಟಿ ಏರಿಕೆಯಾಗಿದ್ದು, ₹11.23 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.74 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹44,832 ಕೋಟಿಯಾಗಿದೆ ಎಂದು ತಿಳಿಸಿದೆ.

ಪಿಗ್ಮಿ ಏಜೆಂಟ್: ಜಿಎಸ್‌ಟಿ ವ್ಯಾಪ್ತಿಗೆ ಸಲ್ಲ

ರಿಟ್ ಅರ್ಜಿ ವಿಚಾರಣೆ: ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಗ್ಮಿ ಏಜೆಂಟ್ ಸಮೂಹ ಜಿಎಸ್‌ಟಿ ವ್ಯಾಪ್ತಿಗೆ ಒಳಪಡುವುದಿಲ್ಲ' ಎಂಬ ತೀರ್ಪು ನೀಡಿರುವ ಹೈಕೋರ್ಟ್, 'ಪಿಗ್ಮಿ ಏಜೆಂಟರನ್ನು ವ್ಯವಹಾರ ಸುಗಮಕಾರರು (ಬ್ಯುಸಿನೆಸ್ ಫೆಸಿಲಿಟೇಟರ್) ಎಂದು ವಿವರಿಸಲು ಪ್ರಯತ್ನಿಸಿರುವುದು ವಾಣಿಜ್ಯ ತೆರಿಗೆ ಇಲಾಖೆಯ ದುರ್ಬಲ ನಡೆ' ಎಂದು ಬಣ್ಣಿಸಿದೆ.

'ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು ಜಾರಿ ಮಾಡಿರುವ ಷೋಕಾಸ್ ನೋಟಿಸ್‌ಗಳನ್ನು ರದ್ದುಪಡಿಸಬೇಕು' ಎಂದು ಕೋರಿ, ಧಾರವಾಡದ 'ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್' ಪರ ರಾಮಚಂದ್ರ ಕಾಂಬ್ಳೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

'ಪಿಗ್ಮಿ ಏಜೆಂಟರುಗಳಿಗೆ ಸಿಜಿಎಸ್‌ಟಿ (ಕೇಂದ್ರ ಸರಕು ಸೇವೆಗಳ ತೆರಿಗೆ) ಮತ್ತು ಕೆಜಿಎಸ್‌ಟಿ (ಕರ್ನಾಟಕ ಸರಕು ಸೇವೆಗಳ ತೆರಿಗೆ) ಅನ್ವಯವಾಗುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮುಖ್ಯಾಂಶಗಳು

- ಪಿಗ್ಮಿ ಏಜೆಂಟರು ವ್ಯವಹಾರ ಸುಗಮಕಾರರಲ್ಲ
- ಇವರೆಲ್ಲಾ ಬ್ಯಾಂಕ್ ನೌಕರರು

ಈ ಪ್ರಕರಣದಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗೆ ಹುಬ್ಬಳ್ಳಿಯ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು ನೀಡಿರುವ ಷೋಕಾಸ್ ನೋಟಿಸ್‌ಗಳು ತೆರಿಗೆ ಪದ್ಧತಿಯ ಕಾಯ್ದೆ ವ್ಯಾಪ್ತಿಯನ್ನು ಮೀರಿವೆ

ನ್ಯಾ.ಎಂ.ನಾಗಪ್ರಸನ್ನ

ವಿಚಾರಣೆ ವೇಳೆ ಬ್ಯಾಂಕ್ ಪರ ಪದಾಂಕಿತ ಹಿರಿಯ ವಕೀಲ ವಿ.ರಘುರಾಮನ್, 'ಪಿಗ್ಮಿ ಏಜೆಂಟರು ವ್ಯವಹಾರವನ್ನು ಸುಗಮಗೊಳಿಸುವ ಸೂತ್ರಧಾರರು ಎಂದು ಅವರನ್ನು ರಿವರ್ಸ್ ಚಾರ್ಜ್ ಕಾರ್ಯವಿಧಾನದ ವ್ಯಾಪ್ತಿಯಲ್ಲಿ ಒಳಪಡಿಸಲು ಆಗದು. ಇವರೆಲ್ಲಾ ಕೈಗಾರಿಕಾ ವಿವಾದಗಳ ಕಾಯ್ದೆ–1947ರ ವ್ಯಾಪ್ತಿಗೆ ಒಳಪಡುತ್ತಾರೆ ಎಂಬ ಅಂಶವನ್ನು ಸುಪ್ರೀಂ ಕೋರ್ಟ್, ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ ಪ್ರಕರಣದಲ್ಲಿ ಎತ್ತಿಹಿಡಿದಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

'ಪಿಗ್ಮಿ ಏಜೆಂಟರು ವ್ಯವಹಾರ ಸುಗಮಕಾರರಲ್ಲ. ಅವರೆಲ್ಲಾ ಬ್ಯಾಂಕ್ ನೌಕರರು. ಪಿಗ್ಮಿ ಏಜೆಂಟರ ಸಂಬಳದಲ್ಲಿಯೇ ಟಿಡಿಎಸ್ (ಮೂಲದಲ್ಲಿಯೇ ತೆರಿಗೆ ಕಡಿತ) ಹಿಡಿಯಲಾಗುತ್ತದೆ. ಹಾಗಾಗಿ, ಅವರಿಗೆ ನೀಡಲಾಗುವ ಸಂಬಳದ ಮೇಲೆ ಜಿಎಸ್‌ಟಿ ಹೇರಲು ಬರುವುದಿಲ್ಲ' ಎಂದು ವಿವರಿಸಿದ್ದರು.

ಈ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಪಿಗ್ಮಿ ಏಜೆಂಟರು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದ ಮಾದರಿಯಲ್ಲಿ ನೇಮಕಗೊಂಡ ಮಧ್ಯವರ್ತಿಗಳಲ್ಲ. ಅವರ ಪಾತ್ರವೇನಿದ್ದರೂ ಬ್ಯಾಂಕಿನ ಪಿಗ್ಮಿ ಠೇವಣಿ ಯೋಜನೆ ಅಡಿಯಲ್ಲಿ ಠೇವಣಿ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅವರು ವ್ಯವಹಾರ ಸುಗಮಕಾರರ ಅಡಿಯಲ್ಲಿ ಕಲ್ಪಿಸಲಾದ ಚಟುವಟಿಕೆಗಳನ್ನು ನಡೆಸುವುದಿಲ್ಲ ಎಂಬುದು ಗಮನಾರ್ಹ' ಎಂದು ತಿಳಿಸಿದೆ.

'ವ್ಯವಹಾರ ಸುಗಮಕಾರರು ಎಂಬುದು ಭಾರತೀಯ ರಿಸರ್ವ್ ಬ್ಯಾಂಕ್ ಗುರುತಿಸಿದ ಮತ್ತು ನಿಯಂತ್ರಣ ಮಾದರಿಗಳ ಅಡಿಯಲ್ಲಿ ನೇಮಕಗೊಂಡ ಮಧ್ಯವರ್ತಿಯನ್ನು ಸೂಚಿಸುತ್ತದೆ. ಇಂತಹ ಸುಗಮಕಾರರು ವ್ಯಾಖ್ಯಾನದ ವಿವರಣೆಗೆ ಅನುಗುಣವಾಗಿ, ನಿಯಂತ್ರಿತ ಚೌಕಟ್ಟಿನಲ್ಲಿ ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸುವವರಾಗಿರುತ್ತಾರೆ. ಆದರೆ, ಈ ಪ್ರಕರಣದಲ್ಲಿ ತೆರಿಗೆ ಇಲಾಖೆಯು ಪಿಗ್ಮಿ ಏಜೆಂಟರನ್ನು ವ್ಯವಹಾರ ಸುಗಮಕಾರರ ವರ್ಗಕ್ಕೆ ವರ್ಗಾಯಿಸುವ ಪ್ರಯತ್ನ ನಡೆಸಿರುವುದು ಅತ್ಯಂತ ದೋಷಪೂರಿತ ಹೆಜ್ಜೆ' ಎಂದು ವಿಷಾದಿಸಿದೆ.

ಷೋಕಾಸ್ ನೋಟಿಸ್ ಪ್ರಶ್ನಿಸಿದ್ದ ಬ್ಯಾಂಕ್

'ನಗರ ಶಾಖೆಗಳಲ್ಲಿನ ಪಿಗ್ಮಿ ಏಜೆಂಟ್‌ಗಳಿಗೆ ಪಾವತಿಸಲಾಗುವ ಕಮಿಷನ್ ಮೊತ್ತಕ್ಕೆ ಪ್ರತಿಯಾಗಿ, ರಿವರ್ಸ್ ಚಾರ್ಜ್ ಕಾರ್ಯವಿಧಾನದ (ಆರ್‌ಸಿಎಂ) ಅಡಿಯಲ್ಲಿ ತೆರಿಗೆ ಮೊತ್ತವನ್ನು ಠೇವಣಿ ಮಾಡಲು ಬ್ಯಾಂಕ್ ವಿಫಲವಾಗಿದೆ' ಎಂದು ಹುಬ್ಬಳ್ಳಿಯ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು ಆರೋಪಿಸಿದ್ದರು.

'ತೆರಿಗೆ ಅನುಸರಣೆಗೆ ಸಂಬಂಧಿಸಿದಂತೆ ಆರ್ಥಿಕ ವರ್ಷ 2018–19, 2019–20 ಮತ್ತು 2020–21ರ ಸಾಲಿನ ತೆರಿಗೆ ವಸೂಲಾತಿಯಲ್ಲಿ ಪಿಗ್ಮಿ ಏಜೆಂಟರುಗಳನ್ನು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ–2017ರ ಕಲಂ 67ರ ಅಡಿಯಲ್ಲಿ ಜಿಎಸ್‌ಟಿ ವ್ಯಾಪ್ತಿಗೆ ಒಳಪಡಿಸಿ ತೆರಿಗೆ ಪಾವತಿಸಬೇಕು' ಎಂದು ಸೂಚಿಸಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗೆ ಸೂಚಿಸಿ 2023ರ ಡಿಸೆಂಬರ್ 27 ಮತ್ತು 28ರಂದು ಷೋಕಾಸ್ ನೋಟಿಸ್‌ಗಳನ್ನು ಜಾರಿ ಮಾಡಲಾಗಿತ್ತು.

ಸುದ್ದಿ 2 ನಿಮಿಷ

ಡೀಸೆಲ್, ಎಟಿಎಫ್ ಮೇಲಿನ ಆಕಸ್ಮಿಕ ತೆರಿಗೆ ಹೆಚ್ಚಳ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆಯಾದ ಕಾರಣ, ಡೀಸೆಲ್ ಮತ್ತು ವಿಮಾನ ಇಂಧನದ (ಎಟಿಎಫ್) ಮೇಲಿನ ಆಕಸ್ಮಿಕ ತೆರಿಗೆಯನ್ನು ಕೇಂದ್ರ ಸರ್ಕಾರ ಹೆಚ್ಚಳ ಮಾಡಿದೆ.

ಪ್ರತಿ ಲೀಟರ್ ಡೀಸೆಲ್ ಮೇಲೆ ₹55.5, ವಿಮಾನ ಇಂಧನದ ಮೇಲಿನ ಆಕಸ್ಮಿಕ ತೆರಿಗೆ ₹42ಕ್ಕೆ ಹೆಚ್ಚಳವಾಗಿದೆ. ಪರಿಷ್ಕೃತ ದರವು ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆಯಲ್ಲಿ ಶನಿವಾರ ತಿಳಿಸಿದೆ. ಪೆಟ್ರೋಲ್ ಮೇಲೆ ಯಾವುದೇ ಆಕಸ್ಮಿಕ ತೆರಿಗೆ ಇಲ್ಲ.

ಮಾರ್ಚ್ 26ರಂದು ಕೇಂದ್ರ ಸರ್ಕಾರವು, ಪ್ರತಿ ಲೀಟರ್ ಡೀಸೆಲ್ ಮತ್ತು ಎಟಿಎಫ್ ಮೇಲಿನ ಆಕಸ್ಮಿಕ ತೆರಿಗೆಯನ್ನು ಕ್ರಮವಾಗಿ ₹21.50 ಮತ್ತು ₹29.5ಕ್ಕೆ ಹೆಚ್ಚಿಸಿತ್ತು.

ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ದೇಶದಲ್ಲಿ ಇಂಧನ ಲಭ್ಯತೆಯನ್ನು ಹೆಚ್ಚಿಸಲು ದರ ಏರಿಕೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ ಕಚ್ಚಾ ತೈಲದ ಬೆಲೆಯಲ್ಲಿ ಹೆಚ್ಚಳವಾಗಿದೆ. ಬೆಲೆ ವ್ಯತ್ಯಾಸಗಳಿಂದಾಗಿ ರಫ್ತುದಾರರು ಅನಗತ್ಯ ಲಾಭ ಪಡೆಯಲು ಅವಕಾಶ ನೀಡಬಾರದು ಎಂಬ ಗುರಿಯನ್ನು ಹೊಂದಲಾಗಿದೆ ಎಂದಿದೆ.

'ಮೀನುಗಾರಿಕಾ ಕ್ಷೇತ್ರದ ರಫ್ತು ₹68 ಸಾವಿರ ಕೋಟಿ'

ನಾಗ್ಪುರ (ಪಿಟಿಐ): 'ದೇಶದ ಮೀನುಗಾರಿಕಾ ಕ್ಷೇತ್ರದ ರಫ್ತು ₹68 ಸಾವಿರ ಕೋಟಿಗೆ ಹೆಚ್ಚಳವಾಗಿದೆ' ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕಾ ಖಾತೆಯ ರಾಜ್ಯ ಸಚಿವ ಸತ್ಯಪಾಲ್ ಸಿಂಗ್ ಬಾಘೇಲ್ ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ದೇಶದ ಮೀನುಗಾರಿಕಾ ಕ್ಷೇತ್ರದ ರಫ್ತನ್ನು ₹1 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಶನಿವಾರ ತಿಳಿಸಿದ್ದಾರೆ.

ಸಿಗಡಿ ಸೇರಿದಂತೆ ವಿವಿಧ ರೀತಿಯ ಮೀನುಗಳನ್ನು ಯುರೋಪ್, ಲ್ಯಾಟಿನ್ ಅಮೆರಿಕ, ಪಶ್ಚಿಮ ಏಷ್ಯಾ, ಏಷ್ಯಾ ಸೇರಿದಂತೆ ಜಗತ್ತಿನ ವಿವಿಧ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಲು ಆರಂಭಿಸಿದ ಬಳಿಕ, ಸಚಿವಾಲಯವು, ಹೊಸ ಮಾರುಕಟ್ಟೆಗಳನ್ನು ಅನ್ವೇಷಿಸಿತು. ಇದರಿಂದ ದೇಶದ ಮೀನುಗಾರಿಕಾ ಕ್ಷೇತ್ರದ ರಫ್ತು ಶೇ 25ರಷ್ಟು ಹೆಚ್ಚಳವಾಗಿದೆ.

ಆಂಧ್ರಪ್ರದೇಶ, ತಮಿಳುನಾಡು, ಒಡಿಶಾ, ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ದೇಶದ ಪ್ರಮುಖ ಮೀನುಗಾರಿಕಾ ರಫ್ತು ಕೇಂದ್ರಗಳಾಗಿವೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

11-04-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1745 (1760)
ಒಂದು ವಾರದ ಡೆಲಿವರಿ	1720 (1755)
ಪಾಮ್ ವಾರದ ಡೆಲಿವರಿ	1472 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1585)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,49,000 (1,50,400)
ಬೆಳ್ಳಿ ಕೆ.ಜಿಗೆ	2,42,000 (2,38,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಹಣದ ರವಾನೆ ಮೇಲೆ ಪರಿಣಾಮ?

ಸಂಘರ್ಷದಿಂದ ಚಾಲ್ತಿ ಖಾತೆ ಕೊರತೆ ಮೇಲೆಯೂ ಪರಿಣಾಮ: ಕ್ರಿಸಿಲ್ ವರದಿ

ಮುಂಬೈ (ಪಿಟಿಐ): 'ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವ ಭಾರತೀಯರು ತಾಯ್ನಾಡಿಗೆ ಕಳಿಸುವ ಹಣದ ರವಾನೆ ಮೇಲೆ ಪಶ್ಚಿಮ ಏಷ್ಯಾದ ಸಂಘರ್ಷವು ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆ ಅಂದಾಜಿಸಿದೆ.

2024–25ರ ಆರ್ಥಿಕ ವರ್ಷದಲ್ಲಿ ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವ ಭಾರತೀಯರು ತಾಯ್ನಾಡಿಗೆ ₹12.54 ಲಕ್ಷ ಕೋಟಿ ರವಾನಿಸಿದ್ದರು.

ಒಟ್ಟು ರವಾನೆಯಲ್ಲಿ ಮೂರನೇ ಒಂದು ಭಾಗದಷ್ಟು ಕೊಲ್ಲಿ ರಾಷ್ಟ್ರಗಳಿಂದಲೇ ಹಣವು ಬರುತ್ತದೆ. ಈ ಸಂಘರ್ಷದಿಂದ ದೇಶಕ್ಕೆ ಬರಬೇಕಿರುವ ಹಣದ ರವಾನೆ ಕಡಿಮೆ ಆಗಲಿದ್ದು, ಕುಟುಂಬಗಳ ಆದಾಯದ ಮೇಲೆ ಪರಿಣಾಮ ಬೀರಲಿದೆ. ಇದು ದೇಶದ ಚಾಲ್ತಿ ಖಾತೆ ಕೊರತೆಯ ಮೇಲೂ ಸಹ ಪರಿಣಾಮ ಬೀರಬಹುದು ಎಂದು ಅಂದಾಜಿಸಿದೆ.

ಜಾಗತಿಕ ವ್ಯಾಪಾರಕ್ಕೆ ಸಂಘರ್ಷವು ಅಡ್ಡಿಯಾಗಲಿದೆ. ದೇಶದ ರಫ್ತು ಬೆಳವಣಿಗೆಯಲ್ಲಿ ಸ್ವಲ್ಪ ಇಳಿಕೆ ಕಂಡುಬರುವ ಸಾಧ್ಯತೆ ಇದೆ. ಕಚ್ಚಾ ತೈಲದ ಬೆಲೆಯಲ್ಲಿ ಶೇ 8ರಿಂದ ಶೇ 9ರಷ್ಟು ಹೆಚ್ಚಳದಿಂದಾಗಿ ದೇಶದ ಆಮದು ವೆಚ್ಚ ಏರಿಕೆಯಾಗಬಹುದು ಎಂದು ಹೇಳಿದೆ.

ಸಂಘರ್ಷದಿಂದ ಸರಕು ಸಾಗಣೆಯಲ್ಲಿ ಸವಾಲು ಉಂಟಾಗಲಿದೆ ಮತ್ತು ಪೂರೈಕೆ ಸರಪಳಿಯಲ್ಲಿ ಅಡಚಣೆ ಆಗಬಹುದು. ಇದರಿಂದ ಪಶ್ಚಿಮ ಏಷ್ಯಾದ ದೇಶಗಳಿಗೆ, ದೇಶದ ರಫ್ತು ಪ್ರಮಾಣ ಕಡಿಮೆ ಆಗಬಹುದು ಎಂದು ವರದಿ ತಿಳಿಸಿದೆ.

2024–25ರ ಆರ್ಥಿಕ ವರ್ಷದಲ್ಲಿ ಕೊಲ್ಲಿ ರಾಷ್ಟ್ರಗಳಿಗೆ ₹5.30 ಲಕ್ಷ ಕೋಟಿಯಷ್ಟು ಮೌಲ್ಯದ ಸರಕುಗಳು ದೇಶದಿಂದ ರಫ್ತಾಗಿದ್ದವು. ಇದು ದೇಶದ ಒಟ್ಟು ಸರಕುಗಳ ರಫ್ತಿನಲ್ಲಿ ಶೇ 13ರಷ್ಟು. ಇದೇ ಅವಧಿಯಲ್ಲಿ ಪಶ್ಚಿಮ ಏಷ್ಯಾದ ರಾಷ್ಟ್ರಗಳಿಗೆ ₹18,618 ಕೋಟಿಯಷ್ಟು ಸರಕುಗಳು ರಫ್ತಾಗಿದ್ದವು.

ಬಹರೇನ್, ಕುವೈತ್, ಒಮಾನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇ ಜಿಸಿಸಿ ರಾಷ್ಟ್ರಗಳಾಗಿವೆ. ಇರಾನ್, ಇರಾಕ್, ಇಸ್ರೇಲ್, ಜೋರ್ಡನ್, ಲೆಬನಾನ್, ಸಿರಿಯಾ ಮತ್ತು ಯಮನ್ ಪಶ್ಚಿಮ ಏಷ್ಯಾದ ರಾಷ್ಟ್ರಗಳಾಗಿವೆ ಎಂದು ತಿಳಿಸಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1735 (1750)
ಸೋಯಾ (ರಿಫೈನ್ಡ್)	₹1555 (1560)
ಸೂರ್ಯಕಾಂತಿ (ರಿಫೈನ್ಡ್)	₹1695 (1700)
ಪಾಮೋಲಿನ್	₹1475 (1480)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹505
	12 ಕ್ಕೆ	₹72
ಮೈಸೂರು:	100 ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹555-756
ದ್ವಿತಳಿ (ಬಿ.ವಿ)	₹266-815

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹199

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23250
ಎಸಿ	₹13850
ಆರ್‌ಪಿ	₹17900
ಆರ್‌ಸಿ	₹9600

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

2nd year Remembrance

Sri K.M. MUNIRAM
Died on : 12.04.2024

"Your life was a blessing, your memory a Treasure, you are loved beyond words And missed beyond measure.
Your values and vision enlightened us through the years
Your soul of compassion still lives on within us"

Fondly Remembered & Loved by
Wife
Children, Grandchildren and Family Members
Nanda Shelters, Builders and Developers
Jayanagar, Bengaluru. Mob: 98450 64043

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Accounts & Finance

RECRUITMENT: ACCOUNTS CLERK. Applications invited for Accounts Clerk at NPF in Command Hospital AF. Qual: Graduate with experience will be preferred. Skills: MS Office / Excel & must know Tally and Knowledge for making Trial Balance & Audit board will be preferred. Age: Max 50 yrs (as on 30 Mar 26), for Veterans (CLK PA/ Accts) age relaxable up to 60 yrs. Pay: As per minimum authorized wages. Documents: Resume with photo, self-attested copies of Academic Certs, Aadhar & PAN, Experience Certificate and Computer Knowledge Proficiency Certificate. Submit to: NPF Co-ord, Command Hospital Air Force, Agram Post, Bengaluru- 560007, Mob: 9680544350. Last Date of Submission: 20 Apr 2026

Cook

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ವೆಜ್/ ನಾನ್ ವೆಜ್ ಕುಕ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 8892491613, 9845618105

Factory

REQUIRED ELECTRICAL Diploma candidate with 6 months experience for Maddur plant. Contact: 9741156703

Wanted

ಅಡುಗೆ ಭಟ್ಟರು ಬೇಕಾಗಿದ್ದಾರೆ : ಬೆಂಗಳೂರಿನ ದೇವಸ್ಥಾನದಲ್ಲಿ ಪ್ರಸಾದ ಮಾಡಲು ಬ್ರಾಹ್ಮಣ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti 9341218992 By Landmark, Next To Kingeri Metro Station 4 Tower Of 69-798999 Floor, Payment In 36 Months 3 Bhk- 2,250 To 2,601 Sft 3.6 cr To 4.16 cr+

ವೈವಾಹಿಕ

Matrimonial Bureaus

BHOVI WORLD MATRIMONY
ಭೋವಿ ವಡ್ಡರ ವಧು-ವರರ ವಿವಾಹ ವೇದಿಕೆ
ನಮ್ಮಲ್ಲಿ ಭೋವಿ (ವಡ್ಡರ) ಸಮಾಜದ ಬಂಧುಗಳಿಗೆ ವಿವಾಹ/ಕಲ್ಯಾಣಕ್ಕಾಗಿ ವಧು-ವರರ ಮಾಹಿತಿ ಹಾಗೂ ಸೇವೆ ನೀಡಲಾಗುವುದು.
Registration only in ONLINE
ಟಿ. ಶೇಖರಪ್ಪ, CEO-MD
App: Bhovi World Matrimony
Website: www.bhovimatrimonial.in
Mob : 9845591149 8095757156

ವೈಯಕ್ತಿಕ

Change of Name

ನಾನು, ಸಿರೀಶಾ ವೆಚ್ಚಾ (Sireesha Vetcha), ಬೆಂಗಳೂರು ನಿವಾಸಿ, ನನ್ನ ಹೆಸರನ್ನು ಸಿರೀಶಾ ವೆಚ್ಚಾ ರಿಂದ ಸಿರೀಶಾ ಮೊಚರ್ಲಾ (Sireesha Mocharla) ಎಂದು ಎಲ್ಲಾ ಮುಂದಿನ ಉದ್ದೇಶಗಳಿಗಾಗಿ ಬದಲಾಯಿಸಿಕೊಂಡಿದ್ದೇನೆ.

ಪ್ರವಾಸ

Travel

ಭಾರತಪರಂಪರ ದರ್ಶನ: 23.4.2026 5ದಿನ ಮಂತ್ರಾಲಯ,ಶ್ರೀಶೈಲಂ, ನವನಾರಸಿಂಹ ಅಹೋಬಿಲಂ. 18.5.2026 13ದಿನ ಚಾರ್`ಧಾಮ್. 6.6.2026 11ದಿನ ಮುಕ್ತಿನಾಥ್,ಕಾಶಿಸಹಿತ ನೇಪಾಳಯಾತ್ರೆ. 2.7.2026 ಅಮರನಾಥ್,ವೈಷ್ಣೋದೇವಿ. ಪ್ರಕಾಶ್`ಹೆಬ್ಬಾರ್: 9448792891.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜೋಯಾಲುಕ್ಕಾಸ್: ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ತನ್ನ ಗ್ರಾಹಕರಿಗೆ 'ಅಕ್ಷಯ ತೃತೀಯ' ಅಂಗವಾಗಿ ಕ್ಯಾಷ್ ಬ್ಯಾಕ್ ಕೊಡುಗೆಗಳನ್ನು ನೀಡಲು ಮುಂದಾಗಿದೆ.

ಇದೇ ತಿಂಗಳ 20ರವರೆಗೆ ಈ ಕೊಡುಗೆಗಳ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

₹75 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ವಜ್ರ, ಕತ್ತರಿಸದ ವಜ್ರ ಮತ್ತು ಪ್ಲಾಟಿನಂ ಆಭರಣಗಳನ್ನು ಖರೀದಿಸುವ ಗ್ರಾಹಕರಿಗೆ ₹2 ಸಾವಿರ ಮೌಲ್ಯದ ಗಿಫ್ಟ್ ವೋಚರ್ ಸಿಗಲಿದೆ. ₹75 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಚಿನ್ನ ಮತ್ತು ಅಮೂಲ್ಯ ರತ್ನಾಭರಣಗಳ ಖರೀದಿ ಮೇಲೆ ₹1 ಸಾವಿರ ಮೌಲ್ಯದ ಗಿಫ್ಟ್ ವೋಚರ್ ಹಾಗೂ ₹15 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಬೆಳ್ಳಿ ಆಭರಣಗಳ ಖರೀದಿ ಮೇಲೆ ₹500 ಮೌಲ್ಯದ ಕ್ಯಾಷ್‌ಬ್ಯಾಕ್ ಗಿಫ್ಟ್ ವೋಚರ್ ನೀಡಲಾಗುವುದು ಎಂದು ತಿಳಿಸಿದೆ.

ಗ್ರಾಹಕರು ಹತ್ತಿರದ ಜೋಯಾಲುಕ್ಕಾಸ್ ಮಳಿಗೆಗೆ ಭೇಟಿ ನೀಡಿ, ಈ 'ಕ್ಯಾಷ್ ಬ್ಯಾಕ್ ಫೆಸ್ಟ್' ಕೊಡುಗೆಯನ್ನು ಪಡೆದುಕೊಳ್ಳಬೇಕು ಎಂದು ಕಂಪನಿಯ ಸಿಎಂಡಿ ಜೋಯ್ ಆಲುಕ್ಕಾಸ್ ತಿಳಿಸಿದ್ದಾರೆ.

ರಾಗಿ ಮಾರಾಟಕ್ಕೆ ಸಿದ್ಧ

ಪಿಟಿಐ ಚಿತ್ರ

ಚಿಕ್ಕಮಗಳೂರಿನ ಗೋದಾಮಿನಲ್ಲಿ ಕಾರ್ಮಿಕರು ರಾಗಿಯನ್ನು ಮಾರಾಟಕ್ಕಾಗಿ ಚೀಲದಲ್ಲಿ ತುಂಬಿದರು

₹30 ಲಕ್ಷದೊಳಗಿನ ಇ.ವಿ ಕಾರುಗಳಿಗೆ ರಸ್ತೆ ತೆರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ₹30 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬೆಲೆಯ ಎಲ್ಲ ವಿದ್ಯುತ್‌ಚಾಲಿತ ಕಾರುಗಳಿಗೆ 2030ರ ಮಾರ್ಚ್ 31ರವರೆಗೆ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕದಲ್ಲಿ ಶೇಕಡ 100ರಷ್ಟು ವಿನಾಯಿತಿ ನೀಡುವ ಕುರಿತು ದೆಹಲಿ ಸರ್ಕಾರ ಶನಿವಾರ ಬಿಡುಗಡೆ ಮಾಡಿದ ವಿದ್ಯುತ್‌ಚಾಲಿತ ವಾಹನ (ಇ.ವಿ) ನೀತಿಯ ಹೊಸ ಕರಡಿನಲ್ಲಿ ಪ್ರಸ್ತಾಪಿಸಲಾಗಿದೆ.

'ದೆಹಲಿ ವಿದ್ಯುತ್‌ಚಾಲಿತ ವಾಹನ ನೀತಿ 2026–2030'ರ ಕರಡು ಪ್ರತಿಯನ್ನು ಸಾರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಹೈಬ್ರಿಡ್ ಇ.ವಿಗಳಿಗೆ ಶೇಕಡ 50ರಷ್ಟು ವಿನಾಯಿತಿ ನೀಡುವ ಕುರಿತು ಪ್ರಸ್ತಾಪಿಸಲಾಗಿದೆ.

ದೆಹಲಿಯಲ್ಲಿ ನೋಂದಾಯಿಸಿದ ₹30 ಲಕ್ಷಕ್ಕಿಂತ ಹೆಚ್ಚಿನ ಎಕ್ಸ್–ಶೋರೂಂ ಬೆಲೆಯ ವಿದ್ಯುತ್‌ಚಾಲಿತ ಕಾರುಗಳಿಗೆ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕದಿಂದ ಯಾವುದೇ ವಿನಾಯಿತಿ ನೀಡಲಾಗುವುದಿಲ್ಲ. 2027ರ ಜನವರಿ 1ರಿಂದ ವಿದ್ಯುತ್‌ಚಾಲಿತ ತ್ರಿಚಕ್ರ ವಾಹನಗಳ ಹೊಸ ನೋಂದಣಿಗೆ ಮಾತ್ರ ತೆರಿಗೆ ವಿನಾಯಿತಿ ನೀಡಲಾಗುತ್ತದೆ ಎಂದು ಕರಡಿನಲ್ಲಿ ಹೇಳಲಾಗಿದೆ. ಈ ಕರಡು ನೀತಿ ಕುರಿತು ಸಾರ್ವಜನಿಕರ ಪ್ರತಿಕ್ರಿಯೆ ಹಾಗೂ ಆಕ್ಷೇಪಣೆಗೆ 30 ದಿನಗಳ ಕಾಲಾವಕಾಶ ನೀಡಲಾಗಿದೆ.

ನಗದು ರಹಿತ ಟೋಲ್ ಪಾವತಿ ಜಾರಿ

ನವದೆಹಲಿ (ಪಿಟಿಐ): ದೇಶದಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಸುವವರು ಡಿಜಿಟಲ್ ರೂಪದಲ್ಲಿ ಮಾತ್ರವೇ ರಸ್ತೆ ಶುಲ್ಕವನ್ನು ಪಾವತಿಸುವ ನಿಯಮವು ಶನಿವಾರದಿಂದ ಜಾರಿಗೆ ಬಂದಿದೆ.

ರಸ್ತೆ ಶುಲ್ಕ ವಸೂಲಾತಿ ಕೇಂದ್ರಗಳಲ್ಲಿ (ಟೋಲ್ ಪ್ಲಾಜಾ) ನಗದು ಬಳಸಿ ಹಣ ಪಾವತಿಸುವ ಸೌಲಭ್ಯವು ಸ್ಥಗಿತಗೊಂಡಿದ್ದು, ಫಾಸ್ಟ್‌ಟ್ಯಾಗ್ ಅಥವಾ ಯುಪಿಐ ಮೂಲಕವೇ ಶುಲ್ಕ ಪಾವತಿ ಮಾಡಬೇಕು.

ವಿಧಾನಸಭೆ ಚುನಾವಣೆ ನಡೆಯುತ್ತಿರುವ ತಮಿಳುನಾಡು, ಕೇರಳ, ಅಸ್ಸಾಂ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕಡೆ ಈ ನಿಯಮ ಜಾರಿಯಾಗಲಿದೆ ಎಂದು ಕೇಂದ್ರ ಸರ್ಕಾರವು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

'ಪಾಕ್ ಮಧ್ಯಸ್ಥಿಕೆ ತಡೆಯಲು ವಿಫಲ'

ಸ್ವಯಂಘೋಷಿತ ವಿಶ್ವಗುರುವಿನ ಆಲಿಂಗನದ ಬಗ್ಗೆ ಪ್ರಶ್ನೆ: ಜೈರಾಮ್ ರಮೇಶ್

ನವದೆಹಲಿ (ಪಿಟಿಐ): 2025ರ ಏಪ್ರಿಲ್‌ನಲ್ಲಿ ನಡೆದ ಪಹಲ್ಗಾಮ್ ದಾಳಿಯ ನಂತರ ಪಾಕಿಸ್ತಾನವನ್ನು ರಾಜತಾಂತ್ರಿಕವಾಗಿ ಏಕಾಂಗಿಯಾಗಿಸಲು ಭಾರತ ಪ್ರಯತ್ನಿಸಿದರೂ, ಎರಡು ಯುದ್ಧನಿರತ ದೇಶಗಳ ನಡುವೆ ಪಾಕಿಸ್ತಾನ ಮಧ್ಯಸ್ಥಿಕೆ ವಹಿಸುವುದನ್ನು ತಡೆಯುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದ್ದನ್ನು ಕಾಂಗ್ರೆಸ್ ಶನಿವಾರ ಪ್ರಶ್ನಿಸಿದೆ.

ಜೈರಾಮ್ ರಮೇಶ್

'ಇದು ಸ್ವಯಂಘೋಷಿತ ವಿಶ್ವ ಗುರುವಿನ ಆಲಿಂಗನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ' ಎಂದು ಕಾಂಗ್ರೆಸ್ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಉಲ್ಲೇಖಿಸಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಕೊನೆಗೊಳಿಸುವ ಗುರಿ ಹೊಂದಿರುವ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ನೇತೃತ್ವದ ನಿಯೋಗದೊಂದಿಗೆ ಮಾತುಕತೆ ನಡೆಸಲು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಪಾಕಿಸ್ತಾನಕ್ಕೆ ಭೇಟಿ ನೀಡುವ ಸ್ವಲ್ಪ ಸಮಯಕ್ಕೂ ಮುನ್ನ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಮಾತುಕತೆಗಳು ಶನಿವಾರದಿಂದ ಪ್ರಾರಂಭವಾಗುತ್ತಿವೆ' ಎಂದು ಹೇಳಿದ್ದಾರೆ.

'ಸ್ವಯಂಘೋಷಿತ ವಿಶ್ವಗುರುವಿನ ಆಲಿಂಗನದ ರಾಜತಾಂತ್ರಿಕತೆಯ ಸಾರ ಮತ್ತು ಶೈಲಿಯ ಬಗ್ಗೆ ಗಂಭೀರ ಪ್ರಶ್ನೆಗಳು ಏಳುತ್ತಿವೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಪಾತ್ರವಿದ್ದು, ಅದನ್ನು ಏಕಾಂಗಿಯಾಗಿಸಲು ಭಾರತವು ನಡೆಸಿದ ರಾಜತಾಂತ್ರಿಕ ಹೋರಾಟದ ನಡುವೆಯೂ, ಪಾಕಿಸ್ತಾನವು ತನಗಾಗಿ ಒಂದು ಹೊಸ ಪಾತ್ರವನ್ನು ಕಂಡುಕೊಳ್ಳುವಲ್ಲಿ ಹೇಗೆ ಯಶಸ್ವಿಯಾಗಿದೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಈ ವೈಫಲ್ಯವು ಅಪಾಯಕಾರಿ ಯಾದದ್ದು. ಏಕೆಂದರೆ, 2008ರ ನವೆಂಬರ್‌ನಲ್ಲಿ ಮುಂಬೈ ಭಯೋತ್ಪಾದಕ ದಾಳಿಯ ನಂತರ ಮನಮೋಹನ್ ಸಿಂಗ್ ಸರ್ಕಾರವು ಪಾಕಿಸ್ತಾನವನ್ನು ಪರಿಣಾಮಕಾರಿಯಾಗಿ ಏಕಾಂಗಿಯನ್ನಾಗಿ ಮಾಡಿತ್ತು' ಎಂದು ಟೀಕಿಸಿದ್ದಾರೆ.

'ನಮಸ್ತೆ ಟ್ರಂಪ್, ಹೌಡಿ ಮೋದಿ ಮತ್ತು ಮತ್ತೊಮ್ಮೆ ಟ್ರಂಪ್ ಸರ್ಕಾರ'ದಂತಹ ಪ್ರಚಾರಗಳನ್ನು ಮೋದಿ ಅವರು ಮತ್ತು ಅವರ ಬೆಂಬಲಿಗರು ನಡೆಸಿದ ನಂತರವೂ, ಅಮೆರಿಕವು ಪಾಕಿಸ್ತಾನಕ್ಕೆ ಈ ಹೊಸ ಜವಾಬ್ದಾರಿಯನ್ನು ನೀಡಲು ಭಾರತ ಹೇಗೆ ಅನುಮತಿ ನೀಡಿತು' ಎಂದು ಪ್ರಶ್ನಿಸಿದ್ದಾರೆ.

'ಭಾರತ ಕಳೆದು ಕೊಂಡಿದ್ದೇ ಹೆಚ್ಚು'

'ಭಾರತವು ಅಮೆರಿಕದೊಂದಿಗೆ ಏಕಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಒಪ್ಪಿಕೊಂಡಿದೆ. ಇದರಲ್ಲಿ ಭಾರತವು ಪಡೆದದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು. ಆದರೂ ಮೋದಿ ಸರ್ಕಾರವು ಅಮೆರಿಕದ ಮೇಲೆ ಯಾವುದೇ ಪ್ರಭಾವ ಬೀರಲು ವಿಫಲವಾಗಿದೆ' ಎಂದು ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ಅಮೆರಿಕ–ಭಾರತ ವ್ಯಾಪಾರ ಒಪ್ಪಂದ: ದೇಶದ ಕೃಷಿ ವಲಯಕ್ಕೆ ಪೆಟ್ಟು

ನವದೆಹಲಿ (ಪಿಟಿಐ): 'ಭಾರತ ಮತ್ತು ಅಮೆರಿಕ ಮಧ್ಯೆ ನಡೆಯುತ್ತಿರುವ ವ್ಯಾಪಾರ ಒಪ್ಪಂದದ ಮಾತುಕತೆಯಿಂದಾಗಿ ಕೃಷಿ ವಲಯಕ್ಕೆ ಪೆಟ್ಟು ಬೀಳಲಿದೆ. ಆ ದೇಶದ ಕೃಷಿ ಉತ್ಪನ್ನಗಳನ್ನು ನಾವು ಆಮದು ಮಾಡಿಕೊಳ್ಳುವಂತಾಗುತ್ತದೆ. ಇದರಿಂದ ನಮ್ಮ ದೇಶದ ರೈತರಿಗೆ ಅನನುಕೂಲವಾಗಲಿದೆ' ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಶನಿವಾರ ಹೇಳಿತು.

ಕಿಸಾನ್ ಸಭಾವು ಸ್ಥಾಪನೆಗೊಂಡು 90 ವರ್ಷ ಕಳೆದಿದ್ದರ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಪಿಎಂ ನಾಯಕ ಪ್ರಕಾಶ್ ಕಾರಟ್ ಮಾತನಾಡಿ, 'ಕಾರ್ಪೊರೇಟ್ ಪೂರಕ ನೀತಿಗಳು ಮತ್ತು ಭಾರತದ ಕೃಷಿ ಕ್ಷೇತ್ರದ ಮೇಲೆ ಹೊರಗಿನವರ ಒತ್ತಡದಿಂದಾಗಿ ನಮ್ಮ ರೈತರಿಗೆ ಹೊಡೆತ ಬೀಳಲಿದೆ' ಎಂದರು.

'ಇಲ್ಲಿಯವರೆಗೆ ಕೃಷಿ ಕ್ಷೇತ್ರದಲ್ಲಿ ನಾವು ಆಮದು ಮಾಡಿಕೊಳ್ಳುತ್ತಿರಲಿಲ್ಲ. ಆದರೆ, ಈಗ ಇದು ಘಟಿಸುತ್ತಿರುವ ಸೂಚನೆಗಳು ದೊರೆಯುತ್ತಿವೆ' ಎಂದರು. 'ಅಮೆರಿಕ-ಭಾರತ ವ್ಯಾಪಾರ ಒಪ್ಪಂದ ಮತ್ತು ಇಂಥ ಕಾರ್ಪೊರೇಟ್ ನೀತಿಗಳ ವಿರುದ್ಧ ನಾವು ನಮ್ಮ ಅಭಿಯಾನವನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ' ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳಿದರು.

ಇಸ್ರೇಲ್– ಲೆಬನಾನ್ ನಡುವೆ ಮುಂದುವರಿದ ಸಂಘರ್ಷ

ದಾಳಿ: 13 ಮಂದಿ ಸೈನಿಕರ ಸಾವು

ಬೈರೂತ್ (ಎಎಫ್‌ಪಿ/ಎಪಿ): ದಕ್ಷಿಣ ಭಾಗದ ನಬಾತಿಯೆ ಪಟ್ಟಣದ ಮೇಲೆ ಇಸ್ರೇಲ್ ಸೇನೆಯು ನಡೆಸಿದ ವಾಯುದಾಳಿಯಲ್ಲಿ 13 ಸೈನಿಕರು ಮೃತಪಟ್ಟಿದ್ದಾರೆ ಎಂದು ಲೆಬನಾನ್ ಸೇನೆ ತಿಳಿಸಿದೆ.

ಇಸ್ರೇಲ್ ಜೊತೆಗೆ ಲೆಬನಾನ್ ಸರ್ಕಾರವು ಮಾತುಕತೆಗೆ ಮುಂದಾದ ಸಂದರ್ಭದಲ್ಲಿಯೇ ಈ ಬೆಳವಣಿಗೆ ನಡೆದಿದೆ.

ಇರಾನ್ ಬೆಂಬಲಿತ ಬಂಡುಕೋರರ ಗುಂಪು ಹಿಜ್ಬುಲ್ಲಾಕ್ಕೆ ಸೇರಿದ 200ಕ್ಕೂ ಹೆಚ್ಚು ನೆಲೆಗಳನ್ನು ಗುರಿಯಾಗಿಸಿ ಕಳೆದ 24 ಗಂಟೆಗಳಲ್ಲಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

14ರಂದು ಮಾತುಕತೆ: 'ಮುಂದಿನ ಮಂಗಳವಾರದ ವೇಳೆಗೆ ಲೆಬನಾನ್ ಹಾಗೂ ಇಸ್ರೇಲ್ ನೇರ ಮಾತುಕತೆ ನಡೆಸಲಿವೆ' ಎಂದು ಲೆಬನಾನ್‌ನ ಅಧ್ಯಕ್ಷ ಜೋಸೆಫ್ ಔನ್ ಹೇಳಿಕೆ ನೀಡಿದ್ದಾರೆ.

ಅಮೆರಿಕದಲ್ಲಿರುವ ಲೆಬನಾನ್ ಹಾಗೂ ಇಸ್ರೇಲ್ ರಾಯಭಾರಿಗಳು ಲೆಬನಾನ್‌ನಲ್ಲಿನ ಅಮೆರಿಕ ರಾಯಭಾರಿ ಜೊತೆ ದೂರವಾಣಿ ಮೂಲಕ ಮಾತನಾಡಿದ ಬೆನ್ನಲ್ಲೇ, ಔನ್ ಈ ಹೇಳಿಕೆ ನೀಡಿದ್ದಾರೆ. ಉಭಯ ದೇಶಗಳ ನಡುವಿನ ಮಾತುಕತೆಗೆ ಅಮೆರಿಕ ಮಧ್ಯಸ್ಥಿಕೆ ವಹಿಸಿದೆ.

ಇಸ್ರೇಲ್ ಹಾಗೂ ಹಿಜ್ಬುಲ್ಲಾ ಬಂಡುಕೋರರ ನಡುವಿನ ಯುದ್ಧ ಕೊನೆಗಾಣಿಸುವ ನಿಟ್ಟಿನಲ್ಲಿ ನೇರ ಮಾತುಕತೆಗೆ ಲೆಬನಾನ್ ಮುಂದಾಗಿದೆ.

ಲೆಬನಾನ್‌ನ ಕೋರಿಕೆಯ ಮೇರೆಗೆ ನೇರ ಮಾತುಕತೆಗೆ ಅನುಮತಿ ನೀಡಲಾಗಿದೆ ಎಂದು ಇಸ್ರೇಲ್ ಗುರುವಾರ ಘೋಷಿಸಿತ್ತು. ಆದರೆ ಈ ಕುರಿತಂತೆ ಅಧಿಕೃತ ಪ್ರಕಟಣೆ ನೀಡಿಲ್ಲ.

ಈ ಬೆಳವಣಿಗೆಯ ಕುರಿತಂತೆ ಹಿಜ್ಬುಲ್ಲಾ ಕೂಡ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಇಸ್ರೇಲ್ ಜೊತೆಗಿನ ನೇರ ಮಾತುಕತೆಯನ್ನು ಸ್ಪಷ್ಟವಾಗಿ ಅದು ವಿರೋಧಿಸಿದೆ.

ಲೆಬನಾನ್‌ನ ನಬಾತಿಯೆ ಪಟ್ಟಣದ ಮೇಲೆ ಇಸ್ರೇಲ್ ಸೇನೆಯು ಏಪ್ರಿಲ್ 10ರಂದು ನಡೆಸಿದ ವಾಯುದಾಳಿಯಲ್ಲಿ ಮೃತಪಟ್ಟ 13 ಮಂದಿ ಸೈನಿಕರ ದೇಹಗಳನ್ನು ಅಂತಿಮ ಸಂಸ್ಕಾರಕ್ಕೆ ಹೊತ್ತೊಯ್ಯಲಾಯಿತು —ಎಎಫ್‌ಪಿ ಚಿತ್ರ

ಇಸ್ರೇಲ್ ದಾಳಿ: ಏಳು ಮಂದಿ ಸಾವು

ದೀರ್ ಅಲ್–ಬಲಾಹ್ (ಎಎಫ್‌ಪಿ): ಪ್ಯಾಲೆಸ್ಟೀನ್‌ನಲ್ಲಿ ಶುಕ್ರವಾರ ತಡರಾತ್ರಿ ಇಸ್ರೇಲ್ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ.

'ಅಲ್–ಬುರ್ರೈಜ್ ನಿರಾಶ್ರಿತರ ಶಿಬಿರದಲ್ಲಿರುವ ಪೊಲೀಸ್ ಚೆಕ್‌ಪೋಸ್ಟ್ ಬಳಿ ಇಸ್ರೇಲ್‌ನ ಡ್ರೋನ್ ಎರಡು ಕ್ಷಿಪಣಿಗಳನ್ನು ಹಾರಿಸಿದೆ. ಈ ದಾಳಿಯಲ್ಲಿ ಅನೇಕರು ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ' ಎಂದು ಹಮಾಸ್ ಸಂಘಟನೆಯಡಿ ಕಾರ್ಯನಿರ್ವಹಿಸುವ ಗಾಜಾ ರಕ್ಷಣಾ ಇಲಾಖೆ ವಕ್ತಾರ ಮಹಮದ್ ಬಸ್ಸಾಲ್ ಶನಿವಾರ ತಿಳಿಸಿದ್ದಾರೆ.

ಕಳೆದ ವರ್ಷ ಅ.10ರಿಂದ ಕದನ ವಿರಾಮ ಜಾರಿಯಲ್ಲಿದೆ. ಆದರೂ, ಕದನ ವಿರಾಮವನ್ನು ಉಲ್ಲಂಘಿಸಲಾಗುತ್ತಿದೆ ಎಂದು ಇಸ್ರೇಲ್ ಸೇನೆ ಮತ್ತು ಹಮಾಸ್ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುವುದರಲ್ಲಿ ನಿರತವಾಗಿವೆ. ಹೀಗಾಗಿ, ಗಾಜಾದಲ್ಲಿ ಪ್ರತಿದಿನ ಹಿಂಸಾಚಾರ ನಡೆಯುತ್ತಿದೆ.

'ತ್ರಿಶ್ಶೂರ್ ಪೂರಂ' ಸಂಭ್ರಮ

ಪಿಟಿಐ ಚಿತ್ರ

ತ್ರಿಶ್ಶೂರ್ ಪೂರಂ ಉತ್ಸವದ ಅಂಗವಾಗಿ ದೇವರ ವಿಗ್ರಹವನ್ನು ಅಲಂಕರಿಸಿದ ಆನೆಯ ಮೇಲಿರಿಸಿ ಕೇರಳದ ಕೊಚ್ಚಿಯ ಮುಂಜುಮೇಲ್ ಶ್ರೀ ಕೃಷ್ಣ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ಮೆರವಣಿಗೆ ಮಾಡಲಾಯಿತು

ಪ್ಯಾರಿಸ್, ಬರ್ಲಿನ್‌ಗೆ ಮಿಸ್ರಿ ಭೇಟಿ

ನವದೆಹಲಿ (ಪಿಟಿಐ): ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಪ್ಯಾರಿಸ್ ಮತ್ತು ಬರ್ಲಿನ್‌ಗೆ ಭಾನುವಾರದಿಂದ ಮೂರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ.

ವಿಕ್ರಮ್ ಮಿಸ್ರಿ

ಈ ಭೇಟಿಯಲ್ಲಿ, ಪಶ್ಚಿಮ ಏಷ್ಯಾ ಯುದ್ಧದಿಂದಾಗಿ ಇಂಧನ, ವ್ಯಾಪಾರ ಮತ್ತು ರಕ್ಷಣಾ ಕ್ಷೇತ್ರಗಳ ಮೇಲೆ ಉಂಟಾಗಿರುವ ಪರಿಣಾಮದ ಕುರಿತು ಪ್ಯಾರಿಸ್ ಮತ್ತು ಬರ್ಲಿನ್‌ನ ಪ್ರಮುಖರೊಂದಿಗೆ ಉನ್ನತ ಮಟ್ಟದ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶನಿವಾರ ತಿಳಿಸಿದೆ.

ಪ್ಯಾರಿಸ್‌ನಲ್ಲಿ ಮಿಸ್ರಿ ಅವರು ಫ್ರಾನ್ಸ್ ವಿದೇಶಾಂಗ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಮಾರ್ಟಿನ್ ಬ್ರಿಯಾನ್ಸ್ ಅವರೊಂದಿಗೆ ರಕ್ಷಣೆ, ಕೃತಕ ಬುದ್ಧಿಮತ್ತೆ, ಜಾಗತಿಕ ಮತ್ತು ಪ್ರಾದೇಶಿಕ ಬೆಳವಣಿಗೆ ಸೇರಿದಂತೆ ಅನೇಕ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಅದು ತಿಳಿಸಿದೆ.

ಮಿಸ್ರಿ ಅವರು ಜರ್ಮನ್ ವಿದೇಶಾಂಗ ಕಾರ್ಯದರ್ಶಿ ಅವರೊಂದಿಗೂ ದ್ವಿಪಕ್ಷೀಯ ಸಹಕಾರ, ಸಾಮಾನ್ಯ ಆಸಕ್ತಿ ಹೊಂದಿರುವ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಅಲ್ಲದೇ ಪ್ಯಾರಿಸ್ ಮತ್ತು ಬರ್ಲಿನ್ ಸರ್ಕಾರದ ಪ್ರಮುಖ ವ್ಯಕ್ತಿಗಳನ್ನು ಭೇಟಿಯಾಗಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಡ್ರೋನ್ ದಾಳಿ: ಇಬ್ಬರ ಸಾವು

ಕೀವ್ (ಎಪಿ): ಉಕ್ರೇನ್‌ನ ಒಡೆಸಾ ನಗರದ ಮೇಲೆ ರಷ್ಯಾ ತಡರಾತ್ರಿ ನಡೆಸಿದ ಡ್ರೋನ್ ದಾಳಿಯಲ್ಲಿ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಈಸ್ಟರ್ ಹಬ್ಬದ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲಾಗಿರುವ ಕದನವಿರಾಮ ನಿಯಮವು ಜಾರಿಯಾಗಲು ಇನ್ನೇನು ಕೆಲವೇ ಗಂಟೆಗಳು ಇರುವಾಗಲೇ ರಷ್ಯಾ ಈ ದಾಳಿ ನಡೆಸಿದೆ ಎಂದೂ ಅಧಿಕಾರಿಗಳು ಆರೋಪಿಸಿದ್ದಾರೆ.

ಉಕ್ರೇನ್ ಅನ್ನು ಗುರಿಯಾಗಿಸಿ ಸುಮಾರು 160 ಡ್ರೋನ್ ಮೂಲಕ ರಷ್ಯಾ ತಡರಾತ್ರಿಯಲ್ಲಿ ದಾಳಿ ನಡೆಸಿದೆ. ಈ ಪೈಕಿ 133 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯುಪಡೆ ಮಾಹಿತಿ ನೀಡಿದೆ. ಉಕ್ರೇನ್ ಕೂಡ ರಷ್ಯಾ ಮೇಲೆ ದಾಳಿ ನಡೆಸಿದೆ ಎಂದು ರಷ್ಯಾ ಆರೋಪಿಸಿದೆ.

ಮೋದಿ ಭದ್ರತೆಗೆ ಧಕ್ಕೆ: ವ್ಯಕ್ತಿ ಬಂಧನ

ಬಕ್ಸರ್ (ಬಿಹಾರ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಭದ್ರತೆಗೆ ಧಕ್ಕೆ ತರುವುದಾಗಿ ಅಮೆರಿಕದ ಗುಪ್ತಚರ ಸಂಸ್ಥೆಯ ವೆಬ್‌ಸೈಟ್‌ಗೆ ಸಂದೇಶ ಕಳುಹಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪದಡಿ ಬಿಹಾರದ ಬಕ್ಸರ್ ಜಿಲ್ಲೆಯ ಸಿಮ್ರಿ ಪ್ರದೇಶದ ಅಮಲ್ ಕುಮಾರ್ ತಿವಾರಿ ಎಂಬವರನ್ನು ಗುರುವಾರ ರಾತ್ರಿ ಬಂಧಿಸಲಾಗಿದೆ.

ಅಮೆರಿಕದ ಗುಪ್ತಚರ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ತಿವಾರಿ ಸಂದೇಶವನ್ನು ಪೋಸ್ಟ್ ಮಾಡಿರುವ ಕುರಿತು ಪೊಲೀಸರಿಗೆ ಮಾಹಿತಿ ಸಿಕ್ಕಿದೆ.

ಆರೋಪಿಯ ಮನೆಯಿಂದ ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳು, ಸೈಬರ್ ಅಪರಾಧಗಳಿಗೆ ಬಳಸುತ್ತಿದ್ದ ನಕಲಿ ಗುರುತಿನ ದಾಖಲೆಗಳು ಮತ್ತು ಇತರ ಡಿಜಿಟಲ್ ಸಾಕ್ಷ್ಯಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

'ಆರೋಪಿಯಿಂದ ವಶಪಡಿಸಿಕೊಂಡ ಮೊಬೈಲ್ ಫೋನ್‌ನಲ್ಲಿ ವಿವಿಧ ವರ್ಚುವಲ್ ಖಾಸಗಿ ನೆಟ್‌ವರ್ಕ್ (ವಿಪಿಎನ್‌ಗಳು) ಮತ್ತು ಕೆಲ ಅಪ್ಲಿಕೇಷನ್‌ಗಳನ್ನು ಇನ್‌ಸ್ಟಾಲ್ ಮಾಡಿರುವುದು ಕಂಡುಬಂದಿದೆ. ಇವುಗಳನ್ನು ಡಾರ್ಕ್ ವೆಬ್ ಪ್ರವೇಶಿಸಲು ಬಳಸಲಾಗುತ್ತದೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ಆರೋಪಿಯು ಈ ಹಿಂದೆ ಕೋಲ್ಕತ್ತ ವಿಮಾನ ನಿಲ್ದಾಣದ ವೆಬ್‌ಸೈಟ್ ಹ್ಯಾಕ್ ಮಾಡುವುದಾಗಿ ಬೆದರಿಕೆ ಹಾಕಿದ್ದ ಪ್ರಕರಣದಲ್ಲೂ ಭಾಗಿಯಾಗಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಕೈ' ಒಳಜಗಳ ಸ್ಫೋಟ ಜಬ್ಬಾರ್ ರಾಜೀನಾಮೆ

ಒಂದನೇ ಪುಟದಿಂದ...

ಅಭಿಷೇಕ್ ದತ್ತ ವರದಿ ಹಾಗೂ ಸಲೀಂ ಮತ್ತು ರಿಜ್ವಾನ್ ಅವರ ಸುದ್ದಿಗೋಷ್ಠಿಯ ಬೆನ್ನಲ್ಲೇ, ಹೊಸ ವಿದ್ಯಮಾನಗಳು ಕಾಂಗ್ರೆಸ್‌ನಲ್ಲಿ ಶುರುವಾಗಿವೆ.

ಮಾರ್ಚ್ 3 ರಂದೇ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. ಅದು ಶುಕ್ರವಾರ (ಮಾ.11)ಕ್ಕೆ ಬಹಿರಂಗವಾಗಿದೆ.

ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್ ಅವರು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಹೈಕಮಾಂಡ್ ತಾಕೀತು ಮಾಡಿದೆ ಎಂದು ಗೊತ್ತಾಗಿದೆ. ಸಂಪುಟ ಪುನರ್‌ರಚನೆಯ ವೇಳೆ ಸಚಿವ ಜಮೀರ್ ಅಹಮದ್ ಅವರನ್ನು ಕೈಬಿಡಲಾಗುತ್ತಿದೆ ಎಂಬ ವದಂತಿ ಪಕ್ಷದ ವಲಯದಲ್ಲಿ ಹಬ್ಬಿದೆ.

ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿದ್ದ ಈ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ಕೆಲವು ನಾಯಕರು ಪಟ್ಟು ಹಿಡಿದಿದ್ದರು. ಶಿವಶಂಕರಪ್ಪ ಮಗ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ತಮ್ಮ ಮಗ ಸಮರ್ಥ ಶಾಮನೂರುಗೆ ಟಿಕೆಟ್ ಕೊಡಬೇಕೆಂದು ಒತ್ತಡ ಹಾಕಿದ್ದರು. ವೀರಶೈವ-ಲಿಂಗಾಯತ ಸಮುದಾಯದ ಕಾಂಗ್ರೆಸ್ ನಾಯಕರು ಅವರ ಬೆಂಬಲಕ್ಕೆ ನಿಂತಿದ್ದರು. ಮಗನಿಗೆ ಟಿಕೆಟ್ ಕೊಡಿಸುವುದರಲ್ಲಿ ಮಲ್ಲಿಕಾರ್ಜುನ ಯಶಸ್ವಿಯಾಗಿದ್ದರು.

ಪಕ್ಷದ ಅಭ್ಯರ್ಥಿ ಯಾರೇ ಆದರೂ ಕೆಲಸ ಮಾಡುವುದು ಎಲ್ಲರ ಕರ್ತವ್ಯ ಎಂದು ಚುನಾವಣಾ ಪೂರ್ವದಲ್ಲೇ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದರು. ಆದರೂ ಪಕ್ಷದ ಅಭ್ಯರ್ಥಿ ಪರ ಪ್ರಚಾರಕ್ಕೆ ಗೈರಾದ ಮತ್ತು ಅಂತರ ಕಾಯ್ದುಕೊಂಡ ನಾಯಕರ ವಿರುದ್ಧ ಅವರು ಮಾಹಿತಿ ಸಂಗ್ರಹಿಸಲು ಮುಂದಾಗಿದ್ದಾರೆ.

'ಜಬ್ಬಾರ್ ರಾಜೀನಾಮೆ ಪರಿಶೀಲನೆ'

'ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ ಸಲ್ಲಿಸಿದ್ದಾರೆ. ನಾನು ಅದನ್ನು ಪರಿಶೀಲಿಸುತ್ತಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ತಮ್ಮದೇ ಸಮುದಾಯದ ನಾಯಕರ ವಿರುದ್ಧ ಅಲ್ಪಸಂಖ್ಯಾತ ನಾಯಕರು ಆರೋಪ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನನಗೂ ಕೆಲವು ವರದಿಗಳು ಬಂದಿವೆ. ನಾನು ಈಗ ಎಲ್ಲ ವಿಷಯಗಳನ್ನು ಮಾತನಾಡುವುದಿಲ್ಲ . ಸ್ಥಳೀಯ ನಾಯಕರಿಂದ ವರದಿ ಪಡೆದುಕೊಳ್ಳುತ್ತೇನೆ' ಎಂದರು.

'ಸಚಿವ ಸ್ಥಾನಕ್ಕಾಗಿ ಒಡಕು ಮೂಡಿಸುವ ಯತ್ನ'

'ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವವರು ಒಡಕು ಮೂಡಿಸಲು ಯತ್ನಿಸುತ್ತಿದ್ದಾರೆ' ಎಂದು ಅಬ್ದುಲ್ ಜಬ್ಬಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸಚಿವ ಜಮೀರ್ ಅವರ ಕಡೆಯಿಂದ ಯಾವ ತಪ್ಪೂ ಆಗಿಲ್ಲ. ಅವರು ಪ್ರಚಾರಕ್ಕೆ ಬಂದ ನಂತರ ಶೇ 50ರಷ್ಟು ವಿರೋಧ ಕಡಿಮೆ ಆಗಿತ್ತು. ಪಕ್ಷದ ಕಚೇರಿಯಲ್ಲೇ ಸುದ್ದಿಗೋಷ್ಠಿ ನಡೆಸಿ ಇಂತಹ ಆರೋಪ ಮಾಡಿರುವುದು ಸರಿಯಲ್ಲ' ಎಂದು ರಿಜ್ವಾನ್ ಅರ್ಷದ್ ಮತ್ತು ಸಲೀಂ ಅಹ್ಮದ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಉಪ ಚುನಾವಣೆ ಕುರಿತು ಪಕ್ಷದ ಯಾವೊಬ್ಬ ನಾಯಕರೂ ನನ್ನೊಂದಿಗೆ ಚರ್ಚಿಸಿಲ್ಲ. ನನ್ನನ್ನು ಬಿಟ್ಟು ಚುನಾವಣೆಗೆ ಹೋದರು. ಆದರೆ, ಒಂದೇ ಮನೆಯಲ್ಲಿ ನಾಲ್ವರಿಗೆ ಟಿಕೆಟ್ ಕೊಟ್ಟರೆ ಹೇಗೆ ಎಂದು ಪ್ರಶ್ನಿಸಿದ್ದೇ ತಪ್ಪಾಯಿತೇ? ನನ್ನಿಂದ ಏನು ತಪ್ಪಾಗಿದೆ' ಎಂದು ಅವರು ಪ್ರಶ್ನಿಸಿದರು.

ದ್ವಿಪಕ್ಷೀಯ ರಕ್ಷಣಾ ಪಾಲುದಾರಿಕೆ: ಅಮೆರಿಕ– ಭಾರತ ಚರ್ಚೆ

ವಾಷಿಂಗ್ಟನ್ (ಪಿಟಿಐ): ಭಾರತೀಯ ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಮತ್ತು ಅಮೆರಿಕದ ವಾಯುಪಡೆ ಮುಖ್ಯಸ್ಥ ಜನರಲ್ ಕೆನ್ ವಿಲ್ಸ್‌ಬಾಚ್ ಅವರು ಉಭಯ ದೇಶಗಳ ನಡುವಿನ ರಕ್ಷಣಾ ಪಾಲುದಾರಿಕೆ ಹಾಗೂ ಆದ್ಯತೆಗಳ ಕುರಿತು ಚರ್ಚೆ ನಡೆಸಿದರು.

ಏಪ್ರಿಲ್ 8ರಂದು ಇಲ್ಲಿನ ಜಾಯಿಂಟ್ ಬೇಸ್ ಅನಾಕೋಸ್ಟಿಯಾ–ಬೋಲಿಂಗ್‌ಗೆ ಸಿಂಗ್ ಭೇಟಿ ನೀಡಿದರು. ನಂತರ, ಪೆಂಟಗನ್‌ನಲ್ಲಿ ವಾಯುಪಡೆಯ ಕಾರ್ಯದರ್ಶಿ ಟ್ರಾಯ್ ಮಿಂಕ್ ಮತ್ತು ವಿಲ್ಸ್‌ಬಾಚ್ ಅವರನ್ನು ಭೇಟಿಯಾದರು.

ಕೊಲೊರಾಡೋದ ಪೀಟರ್ಸನ್ ಸ್ಪೇಸ್ ಫೋರ್ಸ್ ಬೇಸ್‌ಗೆ ಭೇಟಿ ನೀಡಿದ ಸಿಂಗ್, ವಾಯುಪಡೆಯಲ್ಲಿನ ತಂತ್ರಜ್ಞಾನಗಳ ಕುರಿತು ಮಾಹಿತಿ ಪಡೆದರು.

ನೆವಾಡಾದ ನೆಲ್ಲಿಸ್ ವಾಯುಪಡೆ ನೆಲೆಗೂ ಭೇಟಿ ನೀಡಿ, ವಾರ್‌ಫೇರ್ ಸೆಂಟರ್‌ನಲ್ಲಿ ಎಫ್–15 ಇಎಕ್ಸ್ ಈಗಲ್ 2 ವಿಮಾನ ಹಾರಾಟದ ಬಗ್ಗೆ ಮಾಹಿತಿ ಪಡೆದರು.

'ನಮ್ಮ ವಾಯುಪಡೆಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆ ಬಲಪಡಿಸಲು ಈ ರೀತಿಯ ಅವಕಾಶಗಳು ನಿರ್ಣಾಯಕವಾಗಿವೆ' ಎಂದಿದ್ದಾರೆ.

ಎಂಜಿನಿಯರಿಂಗ್ ಶುಲ್ಕ: ಶೇ 7.5 ಹೆಚ್ಚಳ

ಒಂದನೇ ಪುಟದಿಂದ..

ಖಾಸಗಿ ಎಂಜನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟು ಪಡೆದ ವಿದ್ಯಾರ್ಥಿಗಳೇ ಈ ಶುಲ್ಕವನ್ನು ಪಾವತಿಸಬೇಕು.

ವಿಶ್ವವಿದ್ಯಾಲಯಗಳ ಶುಲ್ಕ ₹10,610 ನಿಗದಿಪಡಿಸಲಾಗಿದ್ದು, ಕಾಲೇಜುಗಳಿಗೆ ಇತರೆ ಶುಲ್ಕವಾಗಿ ಗರಿಷ್ಠ ₹20,000 ವಸೂಲಿ ಮಾಡಲು ಅನುಮತಿ ನೀಡಲಾಗಿದೆ.

2025–26ನೇ ಸಾಲಿನಲ್ಲೂ ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು ಶೇ 7.5ರಷ್ಟು ಹೆಚ್ಚಿಸಲಾಗಿತ್ತು. ಸರ್ಕಾರಿ ಕಾಲೇಜುಗಳ ಸೀಟುಗಳಿಗೂ ಶೇ 5 ಶುಲ್ಕ ಹೆಚ್ಚಳ ಮಾಡಲಾಗಿತ್ತು. ಆದರೆ, 2026–27ನೇ ವಸಾಲಿನಲ್ಲಿ ಸರ್ಕಾರಿ ಕಾಲೇಜುಗಳ ಶುಲ್ಕ ಹೆಚ್ಚಳ ಕುರಿತು ಸಭೆ ಯಾವುದೇ ತೀರ್ಮಾನ ಕೈಗೊಂಡಿಲ್ಲ.

INSTITUTE OF HOTEL MANAGEMENT CATERING TECHNOLOGY AND APPLIED NUTRITION
"An Autonomous Body under Ministry of Tourism, Govt. of India"
S.J.P. Campus, Seshadri Road, Bangalore 560 001.
www.ihmbangalore.ac.in
E-mail: ihmbengaluru@gmail.com, Ph. 080-22262960 / 22268562

ADMISSION NOTICE

APPLICATIONS ARE INVITED FOR ADMISSION TO THE 1 ½ YR.DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2026-27
*****

1. Application form along with other details is available on payment of Rs.300/- (Rs.150/- for SC/ST) inclusive of Registration fee payable by cash or D.D. in person. By post Rs.350/- (Rs.175/- for SC/ST & P.H.)
2. Issue of application form from: **13.04.2026**
3. Last date for receipt of filled in Application Form by the Institute: **27.07.2026**
4. Limited Hostel facility available.
5. For details of courses/fee etc., please visit: https://ihmbangalore.ac.in.

Sd/-
PRINCIPAL

ಆಶಾ ಭೋಸ್ಲೆ ಆಸ್ಪತ್ರೆಗೆ

ಪ್ರಜಾವಾಣಿ ವಾರ್ತೆ

ಮುಂಬೈ: ಹಿಂದಿ ಚಿತ್ರರಂಗದ ಸ್ವರ ಸಾಮ್ರಾಜ್ಞಿ ಆಶಾ ಭೋಸ್ಲೆ (92) ಅವರು ಹೃದಯ ಸ್ತಂಭನದಿಂದ ಇಲ್ಲಿನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಗರದ ಪೆದ್ದಾರ್ ರಸ್ತೆಯಲ್ಲಿರುವ ಅವರ ನಿವಾಸದ ಸನಿಹದಲ್ಲೇ ಇರುವ ಬ್ರೀಚ್ ಕ್ಯಾಂಡಿ ಆಸ್ಪತ್ರೆಯ ತುರ್ತು ವೈದ್ಯಕೀಯ ಸೇವೆಗಳ ಘಟಕಕ್ಕೆ ಆಶಾ ಅವರನ್ನು ದಾಖಲಿಸಲಾಗಿದೆ.

ಆಶಾ ಭೋಸ್ಲೆ

ವಿಶಿಷ್ಟ ಧ್ವನಿ ಹಾಗೂ ವಿಶಿಷ್ಟ ಗಾಯನ ಶೈಲಿಯಿಂದಲೇ ಹೆಸರುವಾಸಿಯಾದ ಆಶಾ ಅವರಿಗೆ ಪದ್ಮ ವಿಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಸಂದಿವೆ.

ಆಶಾ ಅವರು 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದವರು. ಅತ್ಯಧಿಕ ರೆಕಾರ್ಡಿಂಗ್ ಹಾಡುಗಳ ಒಡತಿ ಎಂಬ ಗಿನ್ನಿಸ್ ದಾಖಲೆಯನ್ನೂ ಸ್ಥಾಪಿಸಿದವರು.

ಆಸ್ಪತ್ರೆ ಅಥವಾ ಮಂಗೇಶ್ಕರ್ ಕುಟುಂಬ ಯಾವುದೇ ಹೇಳಿಕೆ ನೀಡಿಲ್ಲ.

ಮುಸ್ಲಿಂ ಧರ್ಮಗುರು ಬಂಧಿಸಿದ ಎಟಿಎಸ್

ಸಹಾರನ್‌ಪುರ (ಉತ್ತರ ಪ್ರದೇಶ), (ಪಿಟಿಐ): ಸಾಮಾಜಿಕ ಮಾಧ್ಯಮದಲ್ಲಿ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಕ್ಕಾಗಿ ಹಾಗೂ ಪಾಕಿಸ್ತಾನದ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿರುವ ಆರೋಪದಡಿ ಇಲ್ಲಿನ ದೇವಬಂದ್‌ನ ಮುಸ್ಲಿಂ ಧರ್ಮಗುರುವೊಬ್ಬರನ್ನು ಉತ್ತರ ಪ್ರದೇಶದ ಭಯೋತ್ಪಾದನಾ ವಿರೋಧಿ ದಳ (ಎಟಿಎಸ್) ಬಂಧಿಸಿದೆ.

ದೇವಬಂದ್‌ನ ಮಿಲ್ ವಾಲಾ ಪಾಠಕ್ ಮೇಲೆ ದಾಳಿ ನಡೆಸಿದ ಎಟಿಎಸ್ ಇನ್‌ಸ್ಪೆಕ್ಟರ್ ಸುಧೀರ್ ಉಜ್ವಲ್ ಅವರು ಆರೋಪಿ ಮುಫ್ತಿ ಜಾಕಿರ್‌ನನ್ನು ಬಂಧಿಸಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಸಿಎಎ, ಎನ್‌ಆರ್‌ಸಿ, ಯುಜಿಸಿ, ಎಸ್‌ಐಆರ್, ರಾಮಮಂದಿರಕ್ಕೆ ಸಂಬಂಧಿಸಿದ ತೀರ್ಪು ಹಾಗೂ ಐ ಲವ್ ಮೊಹಮ್ಮದ್ ಪ್ರತಿಭಟನೆ ಸಮಯದಲ್ಲಿ ತೆಗೆದುಕೊಂಡ ಕ್ರಮಗಳನ್ನು ವಿರೋಧಿಸುವ ಮೂಲಕ ಜನರನ್ನು ಪ್ರಚೋದಿಸಲು ಸಾಮಾಜಿಕ ಮಾಧ್ಯಮದ ಮೂಲಕ ಸಂದೇಶಗಳನ್ನು ಜಾಕೀರ್ ಹಂಚಿಕೊಂಡಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ.

ಜೈಲಿನಲ್ಲಿರುವ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರ ವಿಡಿಯೊಗಳಿಂದ ಸ್ಫೂರ್ತಿ ಪಡೆದಿದ್ದಾರೆ. ಇಸ್ಲಾಮಿಕ್ ವಿದ್ವಾಂಸರು ಹಾಗೂ ರಾಜಕಾರಣಿಗಳ ಬಗ್ಗೆಯೂ ಅವರು ದ್ವೇಷ ಹೊಂದಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಕನ್ನಡ ತೇರ್ಗಡೆಗೆ 16 ಶಿಫಾರಸು

ಒಂದನೇಪುಟದಿಂದ...

ಕನ್ನಡ ಭಾಷಾ ವಿಷಯದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನ ಒದಗಿಸುವ ಜತೆಗೆ, ಮುಂದಿನ ಹಂತದ ವಿದ್ಯಾಭ್ಯಾಸದ ಆಯ್ಕೆಯಲ್ಲಿ ಆದ್ಯತೆ ನೀಡಬೇಕು. ಸರ್ಕಾರಿ ಉದ್ಯೋಗಗಳಲ್ಲಿ ಕನಿಷ್ಠ ಶೇ 25 ರಷ್ಟು ಮೀಸಲಾತಿಯನ್ನು ಜಾರಿಗೊಳಿಸಬೇಕು ಎಂದು ವರದಿ ಶಿಫಾರಸು ಮಾಡಿದೆ.

ಕನ್ನಡ ಭಾಷಾ ಶಿಕ್ಷಣವನ್ನು ಬಲಪಡಿಸಲು ಕಾಲ ಕಾಲಕ್ಕೆ ಅಗತ್ಯವಾದ ನೀತಿಗಳನ್ನು ರೂಪಿಸಬೇಕು. ಇದಕ್ಕಾಗಿ ಪ್ರಾಥಮಿಕ ದತ್ತಾಂಶಗಳನ್ನೊಳ ಗೊಂಡ ಅಧ್ಯಯನವು ಅಗತ್ಯವಾಗಿದೆ. ಆದ್ದರಿಂದ 2025ರಲ್ಲಿ ಅನುತ್ತೀರ್ಣ ರಾಗಿರುವ ಮತ್ತು 2026ರಲ್ಲಿ ಅನುತ್ತೀರ್ಣ ರಾಗುವ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿ ವರದಿ ತಯಾರಿಸಲು, ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಸಂಶೋಧನೆ ಕೈಗೊಳ್ಳಬೇಕು. ಈ ಪ್ರಕ್ರಿಯೆಯು ಕನ್ನಡದಲ್ಲಿ ಅನುತ್ತೀರ್ಣ ರಾಗುವ ಮಕ್ಕಳ ಸಂಖ್ಯೆ ಗಣನೀಯ ವಾಗಿ ಇಳಿಯುವವರೆಗೂ ಮುಂದುವರೆಸ ಬೇಕು ಎಂದು ಹೇಳಲಾಗಿದೆ.

ಕನ್ನಡ ಕಡ್ಡಾಯ: ಅಂಗನವಾಡಿ, ಪೂರ್ವ ಪ್ರಾಥಮಿಕ ಹಂತದಿಂದ ಆರಂಭಿಸಿ, ಪದವಿ, ವೃತ್ತಿಪರ ಕೋರ್ಸ್‌ಗಳಲ್ಲಿಯೂ ಕನ್ನಡವನ್ನು ಒಂದು ಭಾಷೆಯನ್ನಾಗಿಯಾದರೂ ಕಡ್ಡಾಯ ಗೊಳಿಸಬೇಕು. ಶಾಲೆಗಳನ್ನು ವಿವಿಧ ಪಠ್ಯ ಕ್ರಮದ ಆಧಾರದಲ್ಲಿ ವರ್ಗೀಕರಿಸುವ ಬದಲು, ಕರ್ನಾಟಕದಲ್ಲಿನ ಎಲ್ಲ ವಿಧದ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯ ಗೊಳಿಸುವ 'ಕನ್ನಡ ಭಾಷಾ ಕಲಿಕಾ ಕಾಯ್ದೆ 2015' ಅನ್ನು ಪರಿಣಾಮಕಾರಿ ಯಾಗಿ ಜಾರಿ ಗೊಳಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಾಧಿಕಾರವು ಇದೇ 13ಕ್ಕೆ ಸಾಮಾನ್ಯ ಸಭೆಯನ್ನು ಹಮ್ಮಿಕೊಂಡಿದೆ. ಈ ಸಭೆಯಲ್ಲಿ ವರದಿಗೆ ಅನುಮೋದನೆ ದೊರೆತ ಬಳಿಕ, ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಿದೆ. ಶಿಫಾರಸುಗಳ ಅನುಷ್ಠಾನಕ್ಕೆ ಭಾಷಾ ತಜ್ಞರನ್ನು ಒಳಗೊಂಡ ಅಧಿಕಾರಯುಕ್ತ ಸಮಿತಿಯನ್ನು ರಚಿಸಬೇಕೆಂದು ಸಹ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ತ್ರಿಭಾಷೆ ಬದಲು, ದ್ವಿಭಾಷಾ ನೀತಿ

ಪ್ರಾಧಿಕಾರದ ತಜ್ಞರ ಸಮಿತಿ ಮಾಡಿರುವ ಪ್ರಮುಖ ಶಿಫಾರಸುಗಳು ಹೀಗಿವೆ:

- ಕನ್ನಡ ಕಲಿಕೆಯನ್ನು ಮತ್ತಷ್ಟು ಸದೃಢಗೊಳಿಸಲು ಮತ್ತು ಅನಗತ್ಯ ಭಾಷಾ ಕಲಿಕೆಗಳ ಹೊರೆ ತಗ್ಗಿಸಲು ಈಗಿರುವ ತ್ರಿಭಾಷಾ ಸೂತ್ರವನ್ನು ಕೈಬಿಟ್ಟು, ದ್ವಿಭಾಷಾ ನೀತಿಯನ್ನು ಅಳವಡಿಸಿಕೊಳ್ಳಬೇಕು
- ಪ್ರಾಥಮಿಕ ಹಂತದಿಂದಲೇ ಮಕ್ಕಳು ಕನ್ನಡ ಹಾಗೂ ಆಂಗ್ಲ ಭಾಷೆಯನ್ನು ಪ್ರಭುತ್ವದ ಮಟ್ಟಕ್ಕೆ ಕಲಿಯಲು ಮತ್ತು ಕಲಿಸಲು ಎಲ್ಲ ಬಗೆಯ ಏರ್ಪಾಡುಗಳನ್ನು ಕೈಗೊಳ್ಳಬೇಕು
- ಭಾಷಾ ಕಲಿಕೆಗೆ ಆಯಾ ಭಾಷೆಗಳ ಮೇಲೆ ಪ್ರಭುತ್ವ, ತಜ್ಞತೆ, ತರಬೇತಿ ಮತ್ತು ವೃತ್ತಿ ನೈಪುಣ್ಯತೆ ಹೊಂದಿರುವ ಶಿಕ್ಷಕರನ್ನು ಪೂರ್ವ ಪ್ರಾಥಮಿಕದಿಂದಲೇ ನೇಮಕಾತಿ ಮಾಡಬೇಕು
- ಭಾಷಾ ಶಿಕ್ಷಕರು ತಮ್ಮ ಭಾಷಾ ಕಲಿಕೆಯ ನೈಪುಣ್ಯತೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವಂತೆ ಮಾಡಲು ಭಾಷಾ ಬೋಧನಾ ತರಬೇತಿಗಳನ್ನು ಆಯೋಜಿಸಬೇಕು
- ವಿಷಯಾಧಾರಿತ ಪಠ್ಯದ ಬದಲಾಗಿ ಭಾಷಾಧಾರಿತ ಪಠ್ಯವು ಭಾಷಾ ತಜ್ಞರು ಹಾಗೂ ಭಾಷಾ ಶಿಕ್ಷಕರಿಂದ ರಚನೆಯಾಗಬೇಕು
- ಕನ್ನಡ ಕಲಿಕಾ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ವಿಫಲರಾಗುವ ಅಧಿಕಾರಿಗಳ ವಿರುದ್ಧ ಮತ್ತಷ್ಟು ಕಠಿಣ ಕ್ರಮ ಜರುಗಿಸಲು ಅನುಕೂಲವಾಗುವಂತೆ 'ಕನ್ನಡ ಕಲಿಕಾ ಅಧಿನಿಯಮ 2015'ಕ್ಕೆ ಸೂಕ್ತ ತಿದ್ದುಪಡಿ ತರಬೇಕು
- ಸರ್ಕಾರ ಬದಲಾದಂತೆ ಪಠ್ಯಪುಸ್ತಕಗಳನ್ನು ಬದಲಾಯಿಸುವ ರಾಜಕೀಯ ಪ್ರೇರಿತ ಅವೈಜ್ಞಾನಿಕ ಕ್ರಮವನ್ನು ಕೈಬಿಡಬೇಕು
- ಭಾಷಾ ಕಲಿಕೆಗೆ ನಿಗದಿಪಡಿಸಿದ ಅವಧಿಗಳನ್ನು ಇತರ ವಿಷಯಗಳಿಗೆ ಹಂಚಿಕೆ ಮಾಡಬಾರದು. ಕಲಿಸುವ ಹೊಣೆ ಭಾಷಾ ಶಿಕ್ಷಕರಿಗೆ ಇರಬೇಕು

ಕೊಪ್ಪ ಟೌನ್ ಪಂಚಾಯಿತಿ ಕಾರ್ಯಾಲಯ, ಕೊಪ್ಪ –577126 ಚಿಕ್ಕಮಗಳೂರು ಜಿಲ್ಲೆ
Email: koppatownco@gmail.com E-mail: koppatown@yahoo.co.in
ಸಂ.ಪಪಂಕೊ/ಪ.ಪ್ರ./01/2025-26 ದಿನಾಂಕ: 07–04–2026

:: ಪ್ರಕಟಣೆ ::

ಕೊಪ್ಪ ಪಟ್ಟಣ ಪಂಚಾಯಿತಿಯ ಎಂಟರ್ ಪ್ರೈಸಸ್ ಅನುದಾನದಡಿ ಮಂಜೂರಾದ ಈ ಕೆಳಕಂಡ ಕಾಮಗಾರಿ. ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ 2 ಲಕೋಟೆ ಪದ್ಧತಿಯಡಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ತಮ್ಮ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ಪಟ್ಟಣ ಪಂಚಾಯಿತಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿದೆ.

ಕ್ರ ಸಂ	ಐಟಂ ವಿವರ	ಅ. ಮೊತ್ತ (ಲಕ್ಷ)	ಇ.ಎಂ.ಡಿ	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಪಟ್ಟಣ ಪಂಚಾಯಿತಿ ಎಂಟರ್ ಪ್ರೈಸಸ್ ಅನುದಾನದಡಿ				
1	DMA/2025-26BD/ work_INDENT56180/Call-1	74.84	1,50,000/-	23-04-2026 17.00 ಘಂಟೆ	24-04-202 17.00 ಘಂಟೆ

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯ್ತಿ, ಕೊಪ್ಪ
ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯ್ತಿ, ಕೊಪ್ಪ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಶಾಖೆ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027.
ಸಂಖ್ಯೆ:ಕರಾಸಾ/ಕೇಕ/ಉ&ಖ/27/2026–27 ದಿನಾಂಕ:11.04.2026

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 01 ದಿನಾಂಕ: 11.04.2026

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು/ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in. ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @17.00 ಗಂಟೆ
KSRTC/2026-27/ IND0288	ಟೈರ್,ಟ್ಯೂಬ್ & ಫ್ಲಾಪ್ ಸೆಟ್ಸ್, ಟ್ಯೂಬ್‌ಲೆಸ್ ರೇಡಿಯಲ್ ಟೈರ್ಸ್ & ಹೆಚ್ಚುವರಿ ಟ್ಯೂಬ್ಸ್ & ಫ್ಲಾಪ್ಸ್ ಖರೀದಿಸುವ ಬಗ್ಗೆ	40.00	12.05.2026
KSRTC/2026-27/ IND0292	ಬಿ.ಎಸ್–VI ಟಾಟ ಮತ್ತು ಅಶೋಕ್ ಲೈಲ್ಯಾಂಡ್ ಬಸ್‌ಗಳಿಗೆ ಓ.ಎ.ಟಿ (ಆರ್ಗ್ಯಾನಿಕ್ ಆಸಿಡ್ ತಂತ್ರಜ್ಞಾನ) ಗಳ ಖರೀದಿ	1.95	28.04.2026
KSRTC/2026-27/ IND0287	ಅಲ್ಯೂಮಿನಿಯಂ ಫಾಯಿಲ್ ಜೊತೆಗೆ ಕೋಲ್ಡ್ ಅಪ್ಲೈಡ್‌ಸೆಲ್ಫ್ ಅಡ್ಹೆಸಿವ್‌ಪಾಲಿಮರ್ ಮಾರ್ಪಡಿಸಿದ ಬಿಟುಮಿನಸ್ ಕಾಂಪೋಸಿಟ್ ಮೆಂಬರೇನ್ ಖರೀದಿ.	1.00	21.04.2026
KSRTC/2026-27/ SE2712	ಕ.ರಾ.ರ.ಸಾ ನಿಗಮದ ಬಸ್‌ಗಳಿಗೆ ಫ್ಯೂಮಿಗೇಷನ್ ಸೇವೆ ಒದಗಿಸುವ ಕುರಿತು.	0.60	28.04.2026
	SHORT TERM TENDER		
KSRTC/2026-27/ IND0289	ಟ್ರೆಡ್ ರಬ್ಬರ್ ಮತ್ತು ಪೂರಕ ಸಾಮಗ್ರಿಗಳ ಖರೀದಿ	8.00	18.04.2026
KSRTC/2026-27/ IND0293	ಇಟಿಎಂಗಾಗಿ ಜಂಬೋ ಥರ್ಮಲ್ ಪೇಪರ್ ರೋಲ್‌ಗಳ ಖರೀದಿ	7.00	18.04.2026
KSRTC/2026-27/ IND0291	ಆಟೋಮೋಟಿವ್ ಗ್ರೀಸ್‌ಗಳ ಖರೀದಿ	3.00	28.04.2026
KSRTC/2026-27/ IND0290	ಇ.ಆರ್.ಡಬ್ಲ್ಯೂ ಜಿ.ಐ ಸ್ಕೇರ್ ಟ್ಯೂಬ್ ಮತ್ತು ಸಿಆರ್.ಎಂಎಸ್ ರೌಂಡ್ ಟ್ಯೂಬ್‌ಗಳ ಖರೀದಿ	2.50	28.04.2026

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in. ಅಥವಾ ದೂರವಾಣಿ ಸಂಖ್ಯೆ: 080–46010000/080–68948777, ಕರೆಮಾಡಿ Support@eprochelpdesk.com, ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ಡುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ cosp@ksrtc.org, ನಲ್ಲಿ ಸಂಪರ್ಕಿಸ ಬಹುದಾಗಿದೆ. (ಸಂಪರ್ಕಿಸಿ: 7760990225, 7760990224.

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)
DIPR/CP/JA/158/2026-27

ತೋಡ್ನಿ ಗ್ಯಾಂಗ್ ತುಂಡು ತುಂಡಾದ ಬದುಕು

ವರ್ಷದಲ್ಲಿ ಆರು ತಿಂಗಳು–ಜೀವನವೇ ಕಬ್ಬಿನ ಗದ್ದೆಯಲ್ಲಿ. ಬೆಳಗು–ಕತ್ತಲೆ ಎಲ್ಲವೂ ಕಟಾವಿನ ಸುತ್ತಲೇ. ಮಹಾರಾಷ್ಟ್ರದಿಂದ ವಲಸೆ ಬರುವ ಅಂದಾಜು 3 ಲಕ್ಷ ಕಾರ್ಮಿಕರ ಬದುಕು ಮಾತ್ರ ಇನ್ನೂ ಬಟಾಬಯಲು.

ಬಯಲ ಬದುಕಿನ ತುಣುಕು...

ಚಿತ್ರ: ಬಸವರಾಜ ಶಿರಸಂಗಿ

• ಸಂತೋಷ ಈ. ಚಿನಗುಡಿ

ಕಬ್ಬೂರ ಸಮೀಪ ಕಬ್ಬಿನಗದ್ದೆಯಲ್ಲಿ ಹಾಕಿದ್ದ ಜೋಪಡಿ. ಅದರ ಮುಂದೆ ತಾಯಿ ತನ್ನ ಕಂದನಿಗೆ ಎದೆಹಾಲು ಉಣಿಸುತ್ತಿದ್ದಳು. ವೇಗವಾಗಿ ಬಂದ ಟ್ರ್ಯಾಕ್ಟರ್ ಚಾಲಕ 'ಪುಂಯ್...' ಎಂದು ಕರ್ಕಶ ಹಾರನ್ ಬಾರಿಸಿದ. ಹಾಲುಣಿಸುವುದನ್ನು ಬಿಟ್ಟು ದಡಬಡಿಸಿ ಎದ್ದ ತಾಯಿ, ಮಗುವನ್ನು ಪಕ್ಕದಲ್ಲಿದ್ದ ಚೀಲದ ಮೇಲೆ ಮಲಗಿಸಿ ಓಡಿಹೋಗಿ ಟ್ರ್ಯಾಕ್ಟರ್ ಹತ್ತಿ, ಕಬ್ಬು ಕಟಾವು ಮಾಡಲು ಹೊರಟಳು.

ಸವದತ್ತಿ ತಾಲ್ಲೂಕಿನ ಗೊಂದಿ ಗ್ರಾಮದಲ್ಲಿ ಹತ್ತು ಜೋಪಡಿಗಳು ಒಂದೇ ಕಡೆ ಇದ್ದವು. ಗೃಹಿಣಿಯರ ತಂಡ ಅಕ್ಕಿ ಹಸನು ಮಾಡುತ್ತಿತ್ತು. ಅಷ್ಟರಲ್ಲಿ ಜೋರಾಗಿ ಗಾಳಿ ಬೀಸಿತು. ಮಹಿಳೆಯರು ಲಗುಬಗೆಯಿಂದ ಅಕ್ಕಿಯನ್ನು ಜತನ ಮಾಡಿಕೊಳ್ಳಲು ಮುಂದಾದರು. ನಿಮಿಷದೊಳಗೆ ದೂಳು, ಕಸ, ಕಡ್ಡಿ ಅಕ್ಕಿಯೊಂದಿಗೆ ಬೆರೆತುಹೋಯಿತು.

ಚಿಕ್ಕೋಡಿ ಸಮೀಪ ರಸ್ತೆ ಪಕ್ಕದಲ್ಲಿ ಬಿಡಾರ ಹೂಡಿದ್ದ ಇಂಥದ್ದೇ ಕುಟುಂಬಗಳನ್ನು ಮಾತಾಡಿಸಲು ಹೋದೆ. 'ಥೋಡೆ ಅಂತರ್ ಥಾಂಬಾ, ನಂತರ್ ಪರತ್ ಯಾ' (ಸ್ವಲ್ಪ ದೂರದಲ್ಲಿ ನಿಲ್ಲಿ, ನಂತರ ಬನ್ನಿ) ಎಂದು ಬಾಲಕಿ ಹೇಳಿದಳು. ಏಕೆ ಎನ್ನುವುದು ತಿಳಿಯದೇ ಗೊಂದಲದಲ್ಲಿ ಸುಮ್ಮನೇ ನಿಂತೆ. ಕೆಲ ಸಮಯದ ಬಳಿಕ ಜಳಕ ಮಾಡಿಬಂದ ಮಹಿಳೆಯೊಬ್ಬರು ಪಕ್ಕದಿಂದ ಹಾದು, ಜೋಪಡಿಯೊಳಗೆ ಹೋದರು. ರಸ್ತೆ ಪಕ್ಕದಲ್ಲಿ ಕಟ್ಟಿಗೆ ನೆಟ್ಟು, ಸೀರೆ ಕಟ್ಟಿ ಮಾಡಿದ್ದ ಬಚ್ಚಲು ಮನೆ ಅದು. ತಾನು ಜಳಕ ಮಾಡಿ ಬರುವವರೆಗೆ ತಾಯಿ ಮಗಳನ್ನು ಜೋಪಡಿಗೆ ಕಾವಲು ನಿಲ್ಲಿಸಿದ್ದಳು.

ಬೆಳಗಾವಿ ಜಿಲ್ಲೆಯ ಕಬ್ಬಿನಗದ್ದೆಗಳಲ್ಲಿ ಬೀಡುಬಿಟ್ಟ 'ತೋಡ್ನಿ ಗ್ಯಾಂಗು'ಗಳ ನೈಜ ಬದುಕು ಇದು.

'ಗನ್ನಾ ತೋಡ್ನಿ ಗ್ಯಾಂಗ್' ಎನ್ನುವುದು ಮರಾಠಿ ಪದ. ಅಂದರೆ 'ಕಬ್ಬು ಕಟಾವು ಮಾಡುವ ತಂಡ' ಎಂದರ್ಥ. ಇಂತಹ ತಂಡಗಳನ್ನು ಹೀಗೆಯೇ ಕರೆಯಲಾಗುತ್ತದೆ. ಇವೆಲ್ಲವೂ ಉದ್ಯೋಗ ವಲಸೆಗಾಗಿಯೇ ರೂಪುಗೊಂಡ ಗ್ಯಾಂಗ್‌ಗಳು.

ಬಿಸಿಲಾದರೇನು ಮಳೆಯಾದರೇನು...

> ನಮ್ಮ ಕಾರ್ಖಾನೆಯಲ್ಲಿ ಆರೋಗ್ಯ ವಿಮೆ ಸೌಲಭ್ಯ ಇದೆ. ಆದರೆ, ಅದು ಕಡ್ಡಾಯವಲ್ಲ; ಕಾರ್ಮಿಕರೇ ಆಯ್ಕೆ ಮಾಡಿಕೊಳ್ಳಬೇಕು. ಅವರು ವಿಮಾ ಕಂತು ಪಾವತಿಸಿದರೆ ಪಾಲಿಸಿ ಮಾಡಿಸಿ ಕೊಡುತ್ತೇವೆ. ಕಾರ್ಖಾನೆಯಿಂದಲೇ ಎಲ್ಲರಿಗೂ ವಿಮೆ ಮಾಡಿಸುವ ಪದ್ಧತಿ ಇಲ್ಲ
>
> **ಅಪ್ಪಾಸಾಹೇಬ ಶಿರಗಾವೆ,** ಹಾಲಸಿದ್ಧನಾಥ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ

ಬೆಳಗಾವಿ ಜಿಲ್ಲೆಯಲ್ಲಿ 3 ಲಕ್ಷ ಹೆಕ್ಟೇರ್‌ಗಳಲ್ಲಿ ಕಬ್ಬು ಬೆಳೆಯಲಾಗುತ್ತದೆ. 30 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುತ್ತಿವೆ. ಪ್ರತಿ ಕಾರ್ಖಾನೆಗೆ ಕನಿಷ್ಠ 10 ಸಾವಿರ ಕಬ್ಬು ಕಟಾವು ಕಾರ್ಮಿಕರು ಬೇಕಾಗುತ್ತಾರೆ. ಅಂದರೆ; ಅಂದಾಜು 3 ಲಕ್ಷದಷ್ಟು ಜನ ಪ್ರತಿ ವರ್ಷ ಮಹಾರಾಷ್ಟ್ರದಿಂದ ಬೆಳಗಾವಿ ಜಿಲ್ಲೆಗೆ ವಲಸೆ ಬರುತ್ತಾರೆ.

ಗುಳೆ ಬರುವ ಬಹುಪಾಲು ಕಾರ್ಮಿಕರು ಮಹಾರಾಷ್ಟ್ರದ ಬೀಡ್ ಜಿಲ್ಲೆಯವರು. ಬೀಡ್ ಜಿಲ್ಲೆ ಬರಡು ಜಮೀನು ಹೊಂದಿದೆ. ಮಳೆ ಕೊರತೆ ಇದೆ. ಅಂತರ್ಜಲವೂ ಇಲ್ಲ. ಸಜ್ಜೆ ಬಿಟ್ಟರೆ ಅಲ್ಲಿ ಇತರ ಬೆಳೆಗಳನ್ನು ಒಕ್ಕಲು ಮಾಡುವುದಿಲ್ಲ. ಹೀಗಾಗಿ, ಅಲ್ಲಿನ ಜನರಿಗೆ ಕಬ್ಬು ಕಟಾವು ವೃತ್ತಿಯೇ ಬದುಕು ಕಟ್ಟಿಕೊಳ್ಳಲು ಆಸರೆಯಾಗಿದೆ.

ಪ್ರತಿ ವರ್ಷ ಕಾರ್ಖಾನೆಗಳು ಹಂಗಾಮು ಆರಂಭಿಸುವ ಹೊತ್ತಿಗೆ, ಅಂದರೆ ಅಕ್ಟೋಬರ್ ತಿಂಗಳಲ್ಲಿ ವಲಸೆ ಶುರುವಾಗುತ್ತದೆ. ಏಪ್ರಿಲ್‌ವರೆಗೆ ಇಲ್ಲೇ ಇದ್ದು ದುಡಿಯುತ್ತಾರೆ. ಹಂಗಾಮು ಮುಗಿದ ಬಳಿಕ ಮತ್ತೆ ತಮ್ಮೂರಿಗೆ ಹೋಗುತ್ತಾರೆ. ಅಲ್ಲಿಗೆ ದುಡಿದ ಹಣ ಖರ್ಚಾಗಿ ಹೋಗುತ್ತದೆ. ಅಷ್ಟರಲ್ಲಿ ಮತ್ತೊಂದು ಹಂಗಾಮು ಆರಂಭವಾಗುತ್ತದೆ. ಮತ್ತೆ ಇವರೆಲ್ಲ ಗಂಟು–ಮೂಟೆ ಕಟ್ಟಿಕೊಂಡು ಹೊರಡುತ್ತಾರೆ.

ವಲಸೆ ತಂಡಗಳಲ್ಲಿ ತುಂಬು ಗರ್ಭಿಣಿಯರು, ಕೆಲವೇ ದಿನಗಳ ಹಿಂದೆ ಹೆರಿಗೆಯಾದ ಬಾಣಂತಿಯರೂ ಇರುತ್ತಾರೆ. ಅವರೂ ಪುರುಷರಿಗೆ ಸಮನಾಗಿ ಕಬ್ಬು ಕಟಾವು ಮಾಡುವುದು, ಪೆಂಡಿ ಕಟ್ಟುವುದು, ಲೋಡ್ ಮಾಡುವಂಥ ಕಠಿಣ ಕೆಲಸಗಳನ್ನು ಮಾಡುತ್ತಾರೆ. ಪುರುಷರಿಗಿಂತ ಹೆಚ್ಚು ಮಹಿಳೆಯರೇ ವಲಸೆ ಗ್ಯಾಂಗ್‌ಗಳಲ್ಲಿ ಇರುತ್ತಾರೆ. ಕಾರಣ ಏನಿರಬಹುದು ಎಂದು ವಿಚಾರಿಸಿದಾಗ–ಕೆಲವು ಕುಟುಂಬಗಳಲ್ಲಿ ಗಂಡಸರು ನಿಯಮಿತವಾಗಿ ದುಡಿಯದೇ ಇರುವುದರಿಂದ ಮಹಿಳೆಯರ ಮೇಲೇ ಹೊರೆ ಬೀಳುತ್ತದೆ ಎಂಬ ಮಾತು ಸ್ಥಳೀಯವಾಗಿ ಕೇಳಿಬಂದಿತು. ಹೀಗಾಗಿ ಮಹಿಳೆಯರು ದುಡಿಯಲು ಬರುವುದು ಅನಿವಾರ್ಯವಾಗುತ್ತದೆ.

'24 ವರ್ಷದ ಶಿವಾನಿ ಧೋಂಗತಿ ಗದ್ದೆಯಲ್ಲಿ ಹೆಣ್ಣುಮಗುವಿಗೆ ಜನ್ಮ ನೀಡಿದರು. ಮೂರೇ ದಿನಗಳಲ್ಲಿ ಕಬ್ಬು ಕಟಾವು ಮಾಡಲು ಬಂದಿದ್ದರು' ಎಂದು ಕಟಕೋಳದ ರೈತ ಈರನಗೌಡ ಪಾಟೀಲ ಅಚ್ಚರಿ ವ್ಯಕ್ತಪಡಿಸಿದರು.

ಪ್ರಾಯದ ಮಕ್ಕಳಿಂದ ಹಿಡಿದು ಹಿರಿಯ ಜೀವಗಳವರೆಗೆ ಇಡೀ ಕುಟುಂಬ ವಲಸೆ ಬರುತ್ತದೆ. ಇವರಲ್ಲಿ ಕಾಲೇಜು ಶಿಕ್ಷಣ ಪಡೆದವರೂ ಇದ್ದಾರೆ. ಎಲ್ಲರ ಜೀವನದ ತತ್ವ ಒಂದೇ–'ಬೆವರನ್ನು ನಂಬಿ ಬದುಕು, ಅದರಲೇ ದೇವರ ಹುಡುಕು'.

ಕೋಟ್ಯಂತರ ರೂಪಾಯಿ ವಹಿವಾಟು

ತೋಡ್ನಿ ಗ್ಯಾಂಗ್ ಅತ್ಯಂತ ವ್ಯವಸ್ಥಿತವಾದ ವಲಸೆ ಮಾದರಿಯಾಗಿದೆ. ಇದಕ್ಕೊಬ್ಬ ಮಧ್ಯವರ್ತಿ ಇರುತ್ತಾನೆ. ಅವನಿಗೆ 'ಗ್ಯಾಂಗ್‌ಮನ್' ಎಂದು ಕರೆಯುತ್ತಾರೆ. ಇಂಥ ಸಾವಿರಾರು ಗ್ಯಾಂಗ್‌ಮನ್‌ಗಳು ಕರ್ನಾಟಕ–ಮಹಾರಾಷ್ಟ್ರ ಗಡಿಯಲ್ಲಿದ್ದಾರೆ. ಒಬ್ಬೊಬ್ಬ ಗ್ಯಾಂಗ್‌ಮನ್ ಕನಿಷ್ಠ ಹತ್ತು ಗ್ಯಾಂಗುಗಳನ್ನು ಕಟ್ಟಿರುತ್ತಾನೆ. ಪ್ರತಿ ಗ್ಯಾಂಗಿನಲ್ಲೂ 30ಕ್ಕಿಂತ ಹೆಚ್ಚು ಕೆಲಸಗಾರರು ಇದ್ದೇ ಇರುತ್ತಾರೆ. ಅವರನ್ನೆಲ್ಲ ಒಟ್ಟುಗೂಡಿಸುವುದು, ಕರೆತರುವುದು, ಕೆಲಸ ಕೊಡುವುದು, ಅವಶ್ಯಕತೆಗಳನ್ನು ಪೂರೈಸುವುದು, ಮರಳಿ ಕಳುಹಿಸುವುದು–ಇಂಥವೆಲ್ಲ ಜವಾಬ್ದಾರಿಗಳನ್ನು ಈತ ನಿರ್ವಹಿಸುತ್ತಾನೆ.

9ನೇ ಪುಟಕ್ಕೆ...

ಒಂದೆಡೆ ಕಬ್ಬು ಕಟಾವು...ಇನ್ನೊಂದೆಡೆ ಮಗುವಿನ ಆರೈಕೆಯೂ...

ಜೇಬು ತುಂಬುವ 'ಬೀಟಲ್' ಮೇಕೆ

• ಚಿತ್ರ–ಲೇಖನ: ಚಂದ್ರಶೇಖರ ಎಸ್ ಚಿನಕೇಕರ

ಮೊದಲ ನೋಟಕ್ಕೆ ಸೆಳೆಯುವಷ್ಟು ದೊಡ್ಡ ದೇಹ, ಉದ್ದವಾಗಿ ನೇತಾಡುವ ಕಿವಿಗಳು, ಗಟ್ಟಿಯಾದ ಮೈಕಟ್ಟು–ಇವು ಸಾಮಾನ್ಯ ಮೇಕೆಗಳ ಲಕ್ಷಣಗಳಲ್ಲ. ಒಂದು ಕ್ಷಣಕ್ಕೆ ಆನೆಯ ಅಗಾಧತೆಯನ್ನು ನೆನಪಿಸಬಹುದಾದರೂ, ಇದು ಆನೆ ಅಲ್ಲ. ಪಂಜಾಬ್ ಮೂಲದ 'ಬೀಟಲ್' ತಳಿ ಮೇಕೆ. ದೇಹದಲ್ಲೂ, ತೂಕದಲ್ಲೂ ಸಾಮಾನ್ಯ ಮೇಕೆಗಳಿಗಿಂತ ಇವು ಬಹಳ ದೊಡ್ಡದು, ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಪಡೆಯುವ ವಿಶಿಷ್ಟ ತಳಿ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಇಟ್ನಾಳ ಗ್ರಾಮದ ರೈತ ಶಿವಪ್ಪ ಶೆಂಡೂರೆ ಇಂತಹ ಮೇಕೆಗಳನ್ನು ಸಾಕಿ ಲಕ್ಷಾಂತರ ರೂಪಾಯಿ ಗಳಿಸುತ್ತಿದ್ದಾರೆ. ಒಂದು ಕಾಲದಲ್ಲಿ ಕೇವಲ ಕೃಷಿಯನ್ನೇ ನಂಬಿಕೊಂಡಿದ್ದ ಇವರ ಬದುಕು, ಇಂದು ಹೊಸ ದಾರಿಯಲ್ಲಿ ನೆಮ್ಮದಿಯತ್ತ ಸಾಗುತ್ತಿದೆ. ಮೂರು ಎಕರೆ ಜಮೀನು ಇದ್ದರೂ ನೀರಿನ ಕೊರತೆ ಶಿವಪ್ಪರನ್ನು ಸಾಕಷ್ಟು ಕಾಡಿತ್ತು. ಕೊಳವೆಬಾವಿ ಕೊರೆಸಿದರೂ ಸಮರ್ಪಕ ನೀರು ಸಿಗಲಿಲ್ಲ. ಕಬ್ಬು ಬೆಳೆದರೂ ಲಾಭ ಕಾಣಿಸಲಿಲ್ಲ. 'ಮೂರು ಎಕರೆಯಲ್ಲಿ ಕಬ್ಬು ಬೆಳೆದರೂ ಖರ್ಚು ಕೂಡ ವಾಪಸ್ ಬರದ ಪರಿಸ್ಥಿತಿ. ಕೃಷಿಯನ್ನಷ್ಟೇ ನಂಬಿಕೊಂಡು ಬದುಕು ಸಾಗಿಸುವುದು ಕಷ್ಟವೆನಿಸಿತು' ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ಈ ಅನಿಶ್ಚಿತತೆಯ ನಡುವೆ ಸಲಹೆಯೊಂದು ಅವರ ಬದುಕಿಗೆ ತಿರುವು ನೀಡಿತು. ಸ್ನೇಹಿತರೊಬ್ಬರು ಪಂಜಾಬ್ ಮೂಲದ ಬೀಟಲ್ ಮೇಕೆಗಳ ಬಗ್ಗೆ ಹೇಳಿ, 'ಇದನ್ನು ಪ್ರಯತ್ನಿಸಿ ನೋಡಿ, ಲಾಭವಾಗಬಹುದು' ಎಂದು ಪ್ರೋತ್ಸಾಹಿಸಿದರು. ಸಂಶಯದ ಹೆಜ್ಜೆಯೊಂದಿಗೆ ಆರಂಭವಾದ ಈ ಪ್ರಯತ್ನ, ಇಂದಿಗೆ ದೃಢವಾದ ಬದುಕಿನ ದಾರಿಯಾಗಿ ಪರಿಣಮಿಸಿದೆ.

ಐದು ವರ್ಷಗಳ ಹಿಂದೆ ಪಂಜಾಬ್‌ಗೆ ತೆರಳಿ ಅಲ್ಲಿಂದ ಬೀಟಲ್ ಮೇಕೆಗಳನ್ನು ಖರೀದಿಸಿ ಸಾಕಾಣಿಕೆ ಪ್ರಾರಂಭಿಸಿದ ಶಿವಪ್ಪ, ಮೊದಲಿಗೆ ಬಕ್ರೀದ್ ಹಬ್ಬದ ಸಮಯಕ್ಕೆ ಮಾತ್ರ ಮೇಕೆಗಳನ್ನು ಮಾರಾಟ ಮಾಡುತ್ತಿದ್ದರು. ಆದರೆ ಬೇಡಿಕೆ ಹೆಚ್ಚಿದಂತೆ, ಈ ಉಪಕಸುಬು ಕ್ರಮೇಣ ವಿಸ್ತಾರಗೊಂಡಿತು. ಈಗ ವರ್ಷದಲ್ಲಿ ಎರಡು-ಮೂರು ಬಾರಿ ಮೇಕೆಗಳನ್ನು ಮಾರಾಟ ಮಾಡುವ ಮಟ್ಟಕ್ಕೆ ಬೆಳವಣಿಗೆ ಕಂಡಿದೆ. 'ಮೊದಲಿಗೆ ಒಂದು ಪ್ರಯೋಗದಂತೆ ಶುರು ಮಾಡಿದ್ದೆ. ಈಗ ಅದು ನಮ್ಮ ಕುಟುಂಬದ ಪ್ರಮುಖ ಆದಾಯವಾಗಿದೆ' ಎಂದು ಅವರು ಸಂತೋಷದಿಂದ ಹೇಳುತ್ತಾರೆ.

ಈ ಯಶಸ್ಸಿನ ಹಿಂದೆ ಅಂಕಿ-ಅಂಶಗಳೂ ಮಾತನಾಡುತ್ತವೆ. ಕೇವಲ ಒಂಬತ್ತು ತಿಂಗಳ ಹಿಂದೆ ತಲಾ ₹80 ಸಾವಿರಕ್ಕೆ ಖರೀದಿಸಿದ ಎರಡು ಮೇಕೆಗಳು, ಇತ್ತೀಚೆಗೆ ಲಕ್ಷಾಂತರ ರೂಪಾಯಿಗೆ ಮಾರಾಟವಾಗಿವೆ. 4.1 ಅಡಿ ಎತ್ತರ, 170 ಕೆ.ಜಿ. ತೂಕದ ಮೇಕೆ ₹3.90 ಲಕ್ಷಕ್ಕೆ ಮಾರಾಟವಾದರೆ, 4 ಅಡಿ ಎತ್ತರ, 160 ಕೆ.ಜಿ. ತೂಕದ ಇನ್ನೊಂದು ಮೇಕೆ ₹2.90 ಲಕ್ಷಕ್ಕೆ ಮಾರಾಟವಾಗಿದೆ. ಒಟ್ಟಾರೆ ₹6.80 ಲಕ್ಷದ ವಹಿವಾಟು–ಇದು ಶಿವಪ್ಪನವರ ಪರಿಶ್ರಮಕ್ಕೆ ಸ್ಪಷ್ಟ ಸಾಕ್ಷಿ.

ಬೀಟಲ್ ತಳಿಯ ಮೇಕೆ ಸಾಕಾಣಿಕೆ ಸುಲಭವಾದ ಕೆಲಸವಲ್ಲ. ಅವುಗಳಿಗೆ ಸಮರ್ಪಕ ಆಹಾರ, ಆರೈಕೆ ಅಗತ್ಯ. ಪ್ರತಿದಿನ ಶೇಂಗಾ ಹಿಂಡಿ, ಸದಕ, ಮೆಕ್ಕೆಜೋಳ, ಹಾಲು ಹಾಗೂ ಹಸಿರು ಮೇವು ನೀಡಲಾಗುತ್ತದೆ. ಎರಡು ಮೇಕೆಗಳನ್ನು ಸಾಕಲು ತಿಂಗಳಿಗೆ ₹4ರಿಂದ ₹5 ಸಾವಿರ ವೆಚ್ಚವಾಗುತ್ತದೆ. ಆದರೆ ಉತ್ತಮ ಗುಣಮಟ್ಟದ ಮಾಂಸ ಮತ್ತು ಮಾರುಕಟ್ಟೆಯ ಬೇಡಿಕೆ ಈ ವೆಚ್ಚವನ್ನು ಲಾಭದಲ್ಲಿ ಪರಿವರ್ತಿಸುತ್ತದೆ.

'ಕೃಷಿಯಿಂದ ಆಗದ ಲಾಭ, ಮೇಕೆ ಸಾಕಾಣಿಕೆಯಿಂದ ಸಿಕ್ಕಿತು. ಈಗ ಒಂದೇ ಆದಾಯದ ಮೇಲೆ ಅವಲಂಬಿಸಬೇಕಾದ ಪರಿಸ್ಥಿತಿ ಇಲ್ಲ' ಎಂದು ಶಿವಪ್ಪ ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಜಮ್ನಾಪುರಿ ಮತ್ತು ಮಲಬಾರಿ ತಳಿಗೆ ಹೋಲಿಕೆಯಿರುವ ಬೀಟಲ್ ಮೇಕೆಯನ್ನು 'ಲಾಹೋರಿ' ಮೇಕೆ ಎಂದೂ ಕರೆಯುತ್ತಾರೆ. ಇದರ ಮಾಂಸದ ಗುಣಮಟ್ಟ ಉತ್ತಮವಾಗಿರುವುದರಿಂದ ಮಾರುಕಟ್ಟೆಯಲ್ಲಿ ಸದಾ ಬೇಡಿಕೆ ಇದೆ. ಇದೇ ಕಾರಣದಿಂದ ಶಿವಪ್ಪ ಪಂಜಾಬ್‌ನಿಂದ ವರ್ಷಕ್ಕೆ ಹಲವು ಬಾರಿ ಮೇಕೆ ಮರಿಗಳನ್ನು ತಂದು ಸಾಕಿ ಮಾರಾಟ ಮಾಡುತ್ತಿದ್ದಾರೆ. ಈ ಪ್ರಯತ್ನದಲ್ಲಿ ಕುಟುಂಬದ ಸಹಕಾರವೂ ಅವರಿಗಿದೆ. ಪತ್ನಿ ಶಾಂತಾ ಮತ್ತು ಮೂವರು ಮಕ್ಕಳು ಕೃಷಿ ಹಾಗೂ ಮೇಕೆ ಸಾಕಾಣಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ನೀರಿನ ಕೊರತೆಯಿಂದ ಮೂರು ಎಕರೆಯಲ್ಲಿ ಒಂದು ಎಕರೆ ಮಾತ್ರ ಕಬ್ಬು ಬೆಳೆಯುತ್ತಿದ್ದರೂ, ಮೇಕೆ ಸಾಕಾಣಿಕೆ ಶಿವಪ್ಪನವರ ಬದುಕಿಗೆ ಹೊಸ ದಿಕ್ಕು ತೋರಿಸಿದೆ. ಕೃಷಿಯೊಂದೇ ದಾರಿಯಲ್ಲ; ಉಪಕಸುಬುಗಳ ಮೂಲಕವೂ ರೈತರು ಆರ್ಥಿಕವಾಗಿ ಸಬಲರಾಗಬಹುದು ಎಂಬುದನ್ನು ಅವರು ತಮ್ಮ ಜೀವನದಿಂದ ಸಾಬೀತುಪಡಿಸಿದ್ದಾರೆ.

ನೀರಿಲ್ಲದ ಜಮೀನೂ ಅಡ್ಡಿಯಾಗಲಿಲ್ಲ. ಸರಿಯಾದ ಆಯ್ಕೆ ಮಾಡಿದರೆ, ಕೃಷಿಕನ ಕೈಯಲ್ಲಿ ಯಾವಾಗಲೂ ಒಂದು ಹೊಸ ದಾರಿ ಇರುತ್ತದೆ–ಈ ಸತ್ಯವನ್ನು ಶಿವಪ್ಪ ಶೆಂಡೂರೆ ಅವರ ಯಶಸ್ಸಿನ ಕಥೆ ಸ್ಪಷ್ಟವಾಗಿ ಹೇಳುತ್ತದೆ. ❖

ನನ್ನೆತ್ತರ..ಮಗನೆತ್ತರ..ಇಗೋ ನೋಡಿ!

ಮಿಡಿ ಉಪ್ಪಿನಕಾಯಿಗೆ ಮಿಡಿಯುವ ಮನ

ಉಪ್ಪಿನಕಾಯಿಗೆ ಇಂತಹ ಮಿಡಿಗಳೇ ಉತ್ಕೃಷ್ಟ...

• ಜಯಪ್ರಕಾಶ ತಲವಾಟ

ಬೆಂಗಳೂರಿನ ಮೊಮ್ಮಗಳ ಮನೆಯಲ್ಲಿ ದಿನಗಳನ್ನು ಕಳೆಯುತ್ತಿದ್ದ ಸಾಗರದ ಅನ್ನಪೂರ್ಣಕ್ಕ, 'ಜೀರಿಗೆ ಮಿಡಿ ಕೊಯ್ಯಲು ಶುರು ಆಯ್ತು' ಎಂಬ ಊರಿನ ಸುದ್ದಿ ಕೇಳುತ್ತಿದ್ದಂತೆಯೇ ತಳಮಳಗೊಂಡರು. ನಗರದಲ್ಲಿ ಸೌಕರ್ಯಗಳಿದ್ದರೂ, ಮನಸ್ಸು ಮಾತ್ರ ಮಲೆನಾಡಿನ ಮಳೆಯ ತೇವದಲ್ಲಿ ನೆನೆದ ಮಣ್ಣಿನ ವಾಸನೆಗಾಗಿ ಕಾತರಿಸಿತು. ಹೊರಡುವಾಗ ಮೊಮ್ಮಗಳ ಮಾತು–'ಅಜ್ಜಿ, ನನಗೊಂದು ದೊಡ್ಡ ಬಾಟಲಿಯಲ್ಲಿ ಮಾವಿನಮಿಡಿ ಉಪ್ಪಿನಕಾಯಿ ರೆಡಿ ಮಾಡಿ ಇಡು'. ಇದು ಕೇವಲ ಒಂದು ಮನವಿ ಅಲ್ಲ; ತಲೆಮಾರುಗಳನ್ನು ಜೋಡಿಸುವ ರುಚಿಯ ಬಂಧ.

ಮಾವಿನ ಮಿಡಿಯ ಉಪ್ಪಿನಕಾಯಿ ಎಂದರೆ ಕೇವಲ ಅಡುಗೆಯೊಂದರ ಭಾಗವಲ್ಲ. ಅದು ಒಂದು ಭಾವನೆ. 'ಮಿಡಿ ಇದ್ದರೆ ಒಂದು ತುತ್ತು ಹೆಚ್ಚಾಗುತ್ತದೆ' ಎಂಬ ಮಾತು ಮಲೆನಾಡಿನ ಮನೆಮಾತು. ಊಟದ ತಟ್ಟೆಯಲ್ಲಿ ಸಣ್ಣ ಮಿಡಿಯೊಂದು ಇದ್ದರೆ ಸಾಕು, ಅದು ಅನ್ನಕ್ಕೆ ಸವಿಯನ್ನಷ್ಟೇ ಅಲ್ಲ, ನೆನಪಿನ ಸುವಾಸನೆಯನ್ನೂ ಸೇರಿಸುತ್ತದೆ.

ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಹೊಸನಗರ ಹಾಗೂ ಉತ್ತರ ಕನ್ನಡದ ಶಿರಸಿ, ಸಿದ್ದಾಪುರ, ಕುಮಟಾ, ಯಲ್ಲಾಪುರ ಭಾಗಗಳ ನದಿ ದಡಗಳೇ ಅಪ್ಪೆ ಮಿಡಿಯ ನಿಜವಾದ ತಾಣ. ಮಳೆ, ಮಂಜು, ತೇವಾಂಶ–ಈ ಮೂರರ ಸಂಯೋಗದಲ್ಲಿ ಬೆಳೆದ ಈ ಮಿಡಿ, ವಿಶಿಷ್ಟ ಪರಿಮಳ ಮತ್ತು ಸವಿಯನ್ನು ಹೊತ್ತು ತರುತ್ತದೆ.

ಜೀರಿಗೆ ಮಿಡಿಯ ಸುವಾಸನೆ ಬಾಯಿಗೆ ಹಾಕುವ ಮುಂಚೆಯೇ ಮನಸ್ಸನ್ನು ಸೆಳೆಯುತ್ತದೆ. ಒಮ್ಮೆ ರುಚಿ ನೋಡಿದವರು ಮತ್ತೆ ಅದನ್ನೇ ಹುಡುಕುವಷ್ಟು ಸೆಳೆದುಕೊಳ್ಳುವ ಶಕ್ತಿ ಇದಕ್ಕಿದೆ. ಮಲೆನಾಡಿನ ಮಹಿಳೆಯರು ಈ ಮಿಡಿಯಿಂದ ಇಪ್ಪತ್ತೈದಕ್ಕೂ ಹೆಚ್ಚು ಬಗೆಯ ಖಾದ್ಯಗಳನ್ನು ತಯಾರಿಸುವುದು, ಈ ಸಂಸ್ಕೃತಿಯ ಆಳವನ್ನು ತೋರಿಸುತ್ತದೆ.

ರಿಪ್ಪನ್‌ಪೇಟೆ–ಉಪ್ಪಿನಕಾಯಿಯ ಕೇಂದ್ರ

ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆ ಮಿಡಿ ಉಪ್ಪಿನಕಾಯಿ ತಯಾರಿಕೆಯ ಪ್ರಮುಖ ಕೇಂದ್ರ. ನೂರಾರು ಕುಟುಂಬಗಳಿಂದ ಮಿಡಿ ಸಂಗ್ರಹಿಸಿ, ಮಹಿಳೆಯರಿಗೆ ವರ್ಷಪೂರ್ತಿ ಉದ್ಯೋಗ ನೀಡುವ ಕೇಂದ್ರ ಇಲ್ಲಿದೆ.

ಇಲ್ಲಿನ ಆರ್.ಆರ್. ಪಿಕಲ್ಸ್‌ನ ರಾಮಕೃಷ್ಣಯ್ಯ ಅವರು 80ರ ದಶಕದಲ್ಲಿ ಶೇಷಮ್ಮ ಎಂಬ ಹಿರಿಯರ ಪ್ರೇರಣೆಯಿಂದ ಸಣ್ಣ ಪ್ರಮಾಣದಲ್ಲಿ ಆರಂಭಿಸಿದ ವ್ಯವಹಾರವನ್ನು ಇಂದು ಕೋಟ್ಯಂತರ ರೂಪಾಯಿಗಳ ಮಟ್ಟಕ್ಕೆ ಬೆಳೆಸಿದ್ದಾರೆ.

'ಅವರ ಪ್ರೋತ್ಸಾಹ ಮರೆಯಲು ಸಾಧ್ಯವೇ ಇಲ್ಲ' ಎಂದು ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಸೀಸನ್‌ನಲ್ಲಿ ದಿನಕ್ಕೆ ಒಂದು ಟನ್‌ವರೆಗೂ ಕಾಯಿ ಖರೀದಿಸುವ ಮಟ್ಟಕ್ಕೆ ಈ ವ್ಯವಹಾರ ಬೆಳೆದಿದೆ.

ಹೆಬ್ಬಾರ್ ಪಿಕಲ್ಸ್‌ನ ಸುಧಾ ಹೆಬ್ಬಾರ್ ಹೇಳುವಂತೆ, 'ಇದು ಕೇವಲ ಉದ್ಯಮವಲ್ಲ, ಪರಂಪರೆ'. ಅವರ ಘಟಕದಲ್ಲಿ ವರ್ಷಪೂರ್ತಿ ಮಹಿಳೆಯರಿಗೆ ಉದ್ಯೋಗ ಸಿಗುತ್ತಿದ್ದು, ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ.

ಸುಧೀಂದ್ರ ಹೆಬ್ಬಾರ್ ವಿವರಿಸುವಂತೆ, 'ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಸೀಸನ್. ಈ ವರ್ಷ ಫಸಲು ಉತ್ತಮವಾಗಿದ್ದರೂ, ಹವಾಮಾನ ವೈಪರೀತ್ಯದಿಂದ ನಿರೀಕ್ಷಿತ ಮಟ್ಟ ತಲುಪಿಲ್ಲ. ಆದರೂ, ಬೇಡಿಕೆ ಮಾತ್ರ ಕಡಿಮೆಯಾಗಿಲ್ಲ'.

ಮಿಡಿಗಳನ್ನು ಉಪ್ಪಿನಲ್ಲಿ ಶೇಖರಿಸಿಡಲು ಸಿದ್ಧಗೊಳಿಸುತ್ತಿರುವ ಮಹಿಳೆಯರು...

ಅಡುಗೆಮನೆಯಿಂದ ಮಾರುಕಟ್ಟೆಗೆ

ಒಮ್ಮೆ ಅಜ್ಜಿ–ಅಮ್ಮಂದಿರ ಕೈಚಳಕದಲ್ಲಿ ಮನೆಗೇ ಸೀಮಿತವಾಗಿದ್ದ ಈ ಉಪ್ಪಿನಕಾಯಿ, ಇಂದು ಮಾರುಕಟ್ಟೆಯಲ್ಲಿ ಗ್ರಾಹಕರ ಮನ ಗೆದ್ದಿದೆ. ಮಹಿಳಾ ಸ್ವಸಹಾಯ ಸಂಘಗಳು, ಸಣ್ಣ ಉದ್ಯಮಗಳು ಮತ್ತು ಸ್ಥಳೀಯ ಬ್ರ್ಯಾಂಡ್‌ಗಳು ಈ ಸಾಂಪ್ರದಾಯಿಕ ರುಚಿಯನ್ನು ಉದ್ಯಮವಾಗಿ ವಿಸ್ತರಿಸಿವೆ.

ಸಾಗರ–ಹೊಸನಗರ ಭಾಗದಲ್ಲಿ ಇದು ಪ್ರಮುಖ ಉದ್ಯಮವಾಗಿ ರೂಪುಗೊಂಡಿದ್ದು, ಅನೇಕ ಕುಟುಂಬಗಳಿಗೆ ಜೀವನೋಪಾಯವಾಗಿದೆ. ಸಂಭ್ರಮದ ಭಾಗವಾಗಿದ್ದ ಮಿಡಿ ಉಪ್ಪಿನಕಾಯಿ, ಇಂದು ಆರ್ಥಿಕ ಶಕ್ತಿಯೂ ಆಗಿದೆ.

ಮಿಡಿ ಉಪ್ಪಿನಕಾಯಿ ತಯಾರಿಕೆ ಒಂದು ಕ್ರಮಬದ್ಧ ಪ್ರಕ್ರಿಯೆ. ಬೆಳಿಗ್ಗೆ ಕೊಯ್ದ ಮಿಡಿಯನ್ನು ಸೊಪ್ಪಿನಿಂದ ಬೇರ್ಪಡಿಸಿ, ಶುಭ್ರ ಬಟ್ಟೆಯಲ್ಲಿ ಒರೆಸಿ, ಉಪ್ಪಿನೊಂದಿಗೆ ಪದರ ಪದರವಾಗಿ ಭರಣಿಯಲ್ಲಿ ಹಾಸುತ್ತಾರೆ. ಪ್ರತಿ ನಾಲ್ಕು–ಐದು ದಿನಕ್ಕೊಮ್ಮೆ ಕೈಯಾಡಿಸುವುದು–ಇದು ಕೇವಲ ಕೆಲಸವಲ್ಲ, ಅನುಭವದ ಸ್ಪರ್ಶ. ಹತ್ತರಿಂದ ಹನ್ನೆರಡು ದಿನಗಳ ಬಳಿಕ ಜೀರಿಗೆ, ಸಾಸಿವೆ, ಮೆಂತೆ, ಮೆಣಸಿನಪುಡಿ, ಅರಿಸಿನ ಸೇರಿಸಿ ಮತ್ತೆ ಹಾಸಿದರೆ, ವರ್ಷಪೂರ್ತಿ ಉಳಿಯುವ ಉಪ್ಪಿನಕಾಯಿ ಸಿದ್ಧ.

ಈ ಪ್ರಕ್ರಿಯೆಯಲ್ಲಿ ಅಮ್ಮ, ಅಜ್ಜಿ, ಮುತ್ತಜ್ಜಿಯರ ಶ್ರಮ ಮಾತ್ರವಲ್ಲ; ಅವರ ಸಹನೆ ಮತ್ತು ಪ್ರೀತಿಯೂ ಬೆರೆತಿರುತ್ತದೆ.

ಜೀರಿಗೆ ಮಿಡಿಗೆ ಅಪಾರ ಬೇಡಿಕೆ ಇದೆ. ಒಂದು ಮಿಡಿ 5 ರಿಂದ 15 ರೂಪಾಯಿವರೆಗೆ, ತಯಾರಾದ ಉಪ್ಪಿನಕಾಯಿ ಕೆ.ಜಿ.ಗೆ 300 ರಿಂದ 800 ರೂಪಾಯಿವರೆಗೆ ಬೆಲೆ ಇರುತ್ತದೆ. ಸಾಗರ ಪ್ರದೇಶದ ಅಪ್ಪೆಮಿಡಿಗೆ ದೊರೆತಿರುವ ಭೌಗೋಳಿಕ ಗುರುತು (ಜಿ.ಐ ಟ್ಯಾಗ್) ಅದರ ವಿಶೇಷತೆಯನ್ನು ವಿಶ್ವದ ಮುಂದೆ ಪರಿಚಯಿಸಿದೆ.

10ನೇ ಪುಟಕ್ಕೆ...

ಬಣ್ಣ ನೆನಪು ಮತ್ತು ಕನಸುಗಳ ಸುವರ್ಣ ಯಾನ

• ಬಿ.ಜೆ.ಧನ್ಯಪ್ರಸಾದ್

ಧಾರವಾಡದ ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ ಐವತ್ತು ವರ್ಷಗಳ ಸೃಜನಾತ್ಮಕ ಪಯಣವನ್ನು ಸಂಭ್ರಮದಿಂದ ಆಚರಿಸುತ್ತಿದೆ. ಈ ಸಂಸ್ಥೆಯಲ್ಲಿ ತರಬೇತಿ ಪಡೆದ ಅನೇಕ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ತಮ್ಮ ಕಲಾ ಸಾಧನೆಯ ಮೂಲಕ ಗುರುತಿಸಿಕೊಂಡಿದ್ದಾರೆ.

ಬಣ್ಣಗಳಿಂದ ಹೊಳೆಯುವ ಆವರಣ... ಗೋಡೆಗಳ ಮೇಲೆ ಅರಳಿರುವ ಜನಪದ ಸ್ಪಂದನೆ... ನೆನಪುಗಳು, ಸಾಧನೆಗಳು ಮತ್ತು ಕನಸುಗಳು–ಇವೆಲ್ಲವೂ ಒಂದೇ ಚೌಕಟ್ಟಿನಲ್ಲಿ. ವಿದ್ಯಾಕಾಶಿ ಧಾರವಾಡದ ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ ತನ್ನ ಐವತ್ತು ವರ್ಷದ ಪಯಣವನ್ನು ಸಂಭ್ರಮಿಸುತ್ತಿದೆ. ಇದು ಕೇವಲ ಸಂಭ್ರಮವಲ್ಲ; ಇದು ಕಲೆಯ ಮೂಲಕ ರೂಪುಗೊಂಡ ಒಂದು ಪೀಳಿಗೆಯ ಯಾನ.

ಮಹಾವಿದ್ಯಾಲಯದ ಆವರಣಕ್ಕೆ ಕಾಲಿಟ್ಟ ಕ್ಷಣದಿಂದಲೇ ಒಂದು ಹಬ್ಬದ ಭಾವನೆ ಮನದಲ್ಲಿ ಮೂಡುತ್ತದೆ. ಕಟ್ಟಡಕ್ಕೆ ಹೊಸ ಬಣ್ಣ, ಗೋಡೆಗಳ ಮೇಲೆ ವಿದ್ಯಾರ್ಥಿಗಳ ಕೈಚಳಕ–ಪ್ರತಿ ಚಿತ್ರವೂ ಒಂದು ಕಥೆ ಹೇಳುತ್ತದೆ. ಕಿನ್ನಾಳ, ವರ್ಲಿ, ಪಹಾಡಿ, ಮೈಸೂರು, ರಾಜಸ್ಥಾನಿ, ಅಜಂತಾ ಶೈಲಿಗಳ ಸಂಯೋಜನೆ ಜೀವಂತವಾಗಿದೆ. ಇದು ಕೇವಲ ಅಲಂಕಾರವಲ್ಲ; ಇದು ವಿದ್ಯಾರ್ಥಿಗಳ ಕಲಾತ್ಮಕ ಅಭಿವ್ಯಕ್ತಿ. ಪ್ರತಿಯೊಂದು ಬಣ್ಣದ ರೇಖೆಯಲ್ಲೂ ಅವರ ಕನಸುಗಳು ಸ್ಪಷ್ಟವಾಗಿ ಮೂಡಿ ಬರುತ್ತವೆ.



ಕಲಾದೇವಿ ಪ್ರತಿಮೆ

1975ರಲ್ಲಿ ಒಂದು ಚಿಕ್ಕ ಪ್ರಯತ್ನವಾಗಿ ಆರಂಭವಾದ ಈ ಸಂಸ್ಥೆ, ಈಗ ಉತ್ತರ ಕರ್ನಾಟಕದ ಪ್ರಮುಖ ಕಲಾ ಕೇಂದ್ರವಾಗಿ ಬೆಳೆದಿದೆ. ಧಾರವಾಡದಿಂದ ಹಿಡಿದು ಹಾವೇರಿ, ಗದಗ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ, ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ, ಕಲಬುರಗಿ, ಶಿವಮೊಗ್ಗ–ಹೀಗೆ ಅನೇಕ ಜಿಲ್ಲೆಗಳ ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಕಲಾ ಶಿಕ್ಷಣ ಪಡೆದು ತಮ್ಮದೇ ಗುರುತು ಬಿಟ್ಟಿದ್ದಾರೆ.

ಪತ್ರಿಕೋದ್ಯಮ, ಸಿನಿಮಾ, ಶಿಕ್ಷಣ–ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ತಮ್ಮ ಕಲೆಗೊಂದು ದಾರಿ ಕಂಡುಕೊಂಡಿದ್ದಾರೆ. 1999ರಲ್ಲಿ ಪದವಿ ಕೋರ್ಸ್ ಪ್ರಾರಂಭವಾದ ಬಳಿಕ, ಈ ಸಂಸ್ಥೆ ಇನ್ನಷ್ಟು ಗಟ್ಟಿಯಾದ ಹೆಜ್ಜೆ ಇಟ್ಟಿತು. ಅನೇಕ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಗಳಿಸಿ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಶಿವಶಂಕರ ಹಿರೇಮಠ ಅವರು ಆರಂಭಿಸಿದ ಡ್ರಾಯಿಂಗ್ ಕೋರ್ಸ್ ಈ ಸಂಸ್ಥೆಯ ಮೊದಲ ಬೀಜ. ಅದನ್ನು ಬೆಳೆಸಿ ಹೆಮ್ಮರ ಮಾಡಿದವರು ಎಂ.ಆರ್. ಬಾಳಿಕಾಯಿ. ಅವರು ವಿದ್ಯಾರ್ಥಿಗಳನ್ನು ಕೇವಲ ತರಗತಿಗಳಲ್ಲಿ ಸೀಮಿತಗೊಳಿಸದೇ ಬೇಲೂರು, ಹಳೇಬೀಡು, ಮೈಸೂರು, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಐತಿಹಾಸಿಕ ತಾಣಗಳಿಗೆ ಕರೆದುಕೊಂಡು ಹೋಗಿ ಕಲೆಯ ನಿಜಸ್ವರೂಪವನ್ನು ಪರಿಚಯಿಸಿದರು.

ಕಾಲೇಜಿನ ಗೋಡೆಯಲ್ಲಿ ಬಣ್ಣದ ಚಿತ್ತಾರ
ಚಿತ್ರಗಳು ಬಿ.ಎಂ.ಕೇದಾರನಾಥ

'ವಿದ್ಯಾರ್ಥಿಗಳ ಸಾಧನೆ ಸಂಸ್ಥೆಗೆ ಕೀರ್ತಿ ತರುತ್ತದೆ' ಎಂಬ ಅವರ ನಂಬಿಕೆ ಸತ್ಯವಾಗಿರುವುದೇ ಈ ಸುವರ್ಣ ಸಂಭ್ರಮ. ಅವರ ಶಿಷ್ಯರು ಇಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಈ ಮಾರ್ಗದರ್ಶನದ ಫಲ.

ಈ ಸಂಭ್ರಮದ ವಿಶೇಷತೆ ಹಳೆಯ ವಿದ್ಯಾರ್ಥಿಗಳ ಭಾಗವಹಿಸುವಿಕೆ. ಅವರು ಕೇವಲ ನೆನಪುಗಳೊಂದಿಗೆ ಬಂದಿಲ್ಲ; ತಮ್ಮ ಹೊಣೆಗಾರಿಕೆಯನ್ನು ಕೂಡ ಹೊತ್ತಿದ್ದಾರೆ. ಹಣ ಸಂಗ್ರಹಿಸಿ, ಕಾರ್ಯಕ್ರಮಗಳ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

ರಂಗನಾಥ ಕಿರಿಕಿರಿ ಅವರ ಕೊಡುಗೆ ವಿಶೇಷ. ಮಹಾವಿದ್ಯಾಲಯದ ಆವರಣದಲ್ಲಿ ಕೊಳವೆಬಾವಿ ಕೊರೆಸಿ, ಅದಕ್ಕೆ 'ಸುವರ್ಣ ಜಲಧಾರೆ' ಎಂಬ ಹೆಸರು ನೀಡಿದ್ದಾರೆ. ಇದು ಕೇವಲ ನೀರಿನ ವ್ಯವಸ್ಥೆಯಲ್ಲ; ಅದು ಕೃತಜ್ಞತೆಯ ಸಂಕೇತ. ಇಂತಹ ಸಣ್ಣ ಸಣ್ಣ ಕೊಡುಗೆಗಳೇ ಈ ಸಂಸ್ಥೆಯ ಬಲವಾದ ಬಾಂಧವ್ಯವನ್ನು ತೋರಿಸುತ್ತವೆ.

'ಕಲಾ ದೇವಿ' ಪ್ರೇರಣೆಯ ಪ್ರತಿಮೆ

ಆವರಣದ ಮಧ್ಯದಲ್ಲಿ ನಿಂತಿರುವ 'ಕಲಾ ದೇವಿ' ಶಿಲ್ಪವು ಎಲ್ಲರ ಗಮನ ಸೆಳೆಯುತ್ತದೆ. ಬಲಗೈನಲ್ಲಿ ಪ್ಯಾಲೆಟ್, ಎಡಗೈನಲ್ಲಿ ಕುಂಚ ಹಿಡಿದಿರುವ ಈ ಪ್ರತಿಮೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಸೃಜನಶೀಲತೆಯ ಸಂಕೇತ. ಹಳೆಯ ವಿದ್ಯಾರ್ಥಿ ಶಿವಕುಮಾರ ಕಂಕನಾಡಿ ಅವರ ಕುಸುರಿಯಲ್ಲಿ ಮೂಡಿಬಂದ ಈ ಕಲಾಕೃತಿ, ಕಲೆಯ ಆಧ್ಯಾತ್ಮಿಕ ರೂಪವನ್ನು ಸ್ಮರಿಸುತ್ತದೆ. ಈ ಶಿಲ್ಪವು ಆವರಣದ ಸಾಂಸ್ಕೃತಿಕ ಹೆಗ್ಗುರುತಿನಂತಿದೆ.

ಏಪ್ರಿಲ್ 11 ಮತ್ತು 12ರಂದು ನಡೆಯುವ ಕಾರ್ಯಕ್ರಮಗಳು ಈ ಸುವರ್ಣೋತ್ಸವಕ್ಕೆ ಜೀವ ತುಂಬಲಿವೆ. ಸ್ತಬ್ಧಚಿತ್ರ ಮೆರವಣಿಗೆ, ಕಲಾ ಪ್ರದರ್ಶನ, ಗೋಷ್ಠಿಗಳು–ಪ್ರತಿ ಕಾರ್ಯಕ್ರಮವೂ ಕಲೆಯ ವೈವಿಧ್ಯತೆಯನ್ನು ತೋರಿಸುತ್ತದೆ.

ವಿದ್ಯಾರ್ಥಿಗಳ ಸಾಧನೆ: ಸಂಸ್ಥೆಗೆ ಕೀರ್ತಿ

'ಸರ್ಕಾರಿ ಚಿತ್ರಕಲಾ ಶಾಲೆಯಲ್ಲಿ ಪ್ರಥಮ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ಪ್ರತಿ ವರ್ಷ ವಿದ್ಯಾರ್ಥಿಗಳನ್ನು ಬೇಲೂರು, ಹಳೇಬೀಡು, ಮೈಸೂರು, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ತಾಣಗಳಿಗೆ ಕರೆದುಕೊಂಡು ಹೋಗಿ ಕಲೆ ಮತ್ತು ವಾಸ್ತುಶಿಲ್ಪದ ಪರಿಚಯ ಮಾಡಿಸುತ್ತಿದ್ದೆ. ಅವರು ಕಲಾಕೃತಿಗಳನ್ನು ರಚಿಸಿ ಲಲಿತಾ ಕಲಾ ಅಕಾಡೆಮಿ ಪ್ರದರ್ಶನಗಳಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಿದ್ದೆ. ಈ ಸಂಸ್ಥೆಯಲ್ಲಿ ಕಲಿತ ಅನೇಕರು ಸಾಧನೆ ಮಾಡಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ' ಎಂದು ಎಂ.ಆರ್. ಬಾಳಿಕಾಯಿ ಹೆಮ್ಮೆಪಡುತ್ತಾರೆ.

ಇದು ಒಂದು ಉತ್ಸವ ಮಾತ್ರವಲ್ಲ; ಇದು ಕಲಾವಿದರ ಮಹಾಸಂಗಮ. ಹಳೆಯ ಮತ್ತು ಹಾಲಿ ವಿದ್ಯಾರ್ಥಿಗಳು ಒಂದೇ ವೇದಿಕೆಯಲ್ಲಿ ಸೇರುವ ಈ ಕ್ಷಣಗಳು ನೆನಪುಗಳನ್ನು ಮತ್ತಷ್ಟು ಗಾಢಗೊಳಿಸುತ್ತವೆ.

ಸಂಭ್ರಮದ ಮಧ್ಯೆ ಭವಿಷ್ಯದ ಚಿಂತನೆ ಕೂಡ ಇದೆ. ಕಲಾಕೃತಿ ಮಾರಾಟ ಮಳಿಗೆ, ವರ್ಷಕ್ಕೊಮ್ಮೆ ಕಲಾ ಸಂತೆ–ಇವು ಸಂಸ್ಥೆಯ ಮುಂದಿನ ಹೆಜ್ಜೆಗಳ ಕನಸುಗಳು. ಈ ಯೋಜನೆಗಳು ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳನ್ನು ತೆರೆದಿಡಲಿವೆ.

ಒಂದು ಸಂಸ್ಥೆ, ಹಲವು ಕಥೆಗಳು

ಸರ್ಕಾರಿ ಚಿತ್ರಕಲಾ ಶಾಲೆಯಿಂದ ಆರಂಭವಾಗಿ ಮಹಾವಿದ್ಯಾಲಯದ ಹಂತ ತಲುಪಿದ ಈ ಸಂಸ್ಥೆ, ಇಂದು ಉತ್ತರ ಕರ್ನಾಟಕದ ಹೆಮ್ಮೆ. ಇಲ್ಲಿ ಕಲಿತ ಅನೇಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಈ ಸಂಸ್ಥೆಯು ಕೇವಲ ಕಲಾವಿದರನ್ನು ರೂಪಿಸಿಲ್ಲ; ಸಂವೇದನಾಶೀಲ ವ್ಯಕ್ತಿತ್ವಗಳನ್ನು ಬೆಳೆಸಿದೆ.

ಈ ಸುವರ್ಣ ಸಂಭ್ರಮ ಒಂದು ಅಂತ್ಯವಲ್ಲ–ಇದು ಇನ್ನೊಂದು ಪ್ರಾರಂಭ. ಪ್ರತಿ ಕುಂಚದ ಕಳಕದಲ್ಲೂ, ಪ್ರತಿ ಬಣ್ಣದ ಹನಿಯಲ್ಲೂ, ಈ ಸಂಸ್ಥೆಯ ಆತ್ಮ ಜೀವಂತವಾಗಿದೆ.

ಇದು ಕೇವಲ ಒಂದು ಕಾಲೇಜು ಅಲ್ಲ; ಇದು ಕನಸುಗಳನ್ನು ಬಣ್ಣಗೊಳಿಸುವ ಕಾರ್ಯಾಗಾರ.

ಸಾಧನೆಯ ಛಲ ಒಳಗಣ್ಣಿನ ಫಲ

• ಅಭಿಲಾಷ್ ಪಿ.ಎಸ್.

ಸಿದ್ದು ಲೌಟೆ ಚಿತ್ರ: ಪ್ರಶಾಂತ್ ಎಚ್.ಜಿ.

ಕಚೇರಿಗೆ ಬಂದಿದ್ದ ಇವರ ಮುಂದೆ ಕುಳಿತಾಗ, 'ನಮಸ್ತೆ ನಾನು ಸಿದ್ದು ಲೌಟೆ, ಸೂಪರ್ ಹ್ಯೂಮನ್ ಕಂಪ್ಯೂಟರ್...' ಎಂದು ತಮ್ಮನ್ನು ಪರಿಚಯಿಸಿಕೊಂಡರು.

ನಾನು 'ಗೊತ್ತಿದೆ... ನಿಮ್ಮ ಬಗ್ಗೆ ಓದಿದ್ದೆ. ಪುನೀತ್ ರಾಜ್‌ಕುಮಾರ್ ಅವರ ಜೊತೆ 'ಕನ್ನಡದ ಕೋಟ್ಯಧಿಪತಿ'ಯಲ್ಲಿ ಭಾಗವಹಿಸಿದ್ದ ಕಾರ್ಯಕ್ರಮವನ್ನು ನೋಡಿದ್ದೆ' ಎಂದೆ. ಬಳಿಕ ಅವರನ್ನು ಪರೀಕ್ಷಿಸಲು 'ನಾನು ಹುಟ್ಟಿದ್ದು 1992ರ ಮೇ ಎರಡನೇ ಭಾನುವಾರ' ಎಂದಿದ್ದೇ ತಡ...

ಒಂದರೆಕ್ಷಣ ತಲೆಯಾಡಿಸಿದ ಅವರಿಂದ '10' ಎಂಬ ಪ್ರತಿಕ್ರಿಯೆ ಬಂತು. ನಾನು ಚಕಿತನಾದೆ. ಕಣ್ಣಿಲ್ಲದಿದ್ದರೂ ಅವರ ಮಿದುಳಿನ ಓಟ ಮಿಂಚಿನ ಓಟದಂತಿತ್ತು.

ಬೆಳಗಾವಿಯ ಅಥಣಿ ತಾಲ್ಲೂಕಿನ ಕಕಮರಿಯ ಸಿದ್ದು ಲೌಟೆ 'ಸೂಪರ್ ಹ್ಯೂಮನ್ ಕಂಪ್ಯೂಟರ್' ಎಂದೇ ಖ್ಯಾತಿ ಪಡೆದವರು. ಹುಟ್ಟಿನಿಂದಲೇ ದೃಷ್ಟಿ ಕಳೆದುಕೊಂಡವರು. ಇದು ಸಹಜವಾಗಿ ಅವರನ್ನು, ಕುಟುಂಬದವರನ್ನು ಕಾಡಿತ್ತು. ತಿರಸ್ಕಾರ, ತಾರತಮ್ಯ ಬೆನ್ನಿಗೆ ಅಂಟಿತು. ಇಂತಹ ಸ್ಥಿತಿಯಲ್ಲಿ ವಿದ್ಯಾಭ್ಯಾಸ ಮುಂದುವರಿಯಿತು.

ಹೀಗಿದ್ದಾಗ ಒಂದು ದಿನ ಶಾಲೆಯಲ್ಲಿ ಏಳನೇ ತರಗತಿಯ ವಿದ್ಯಾರ್ಥಿಯೊಬ್ಬ ನೂರರವರೆಗೆ ಮಗ್ಗಿ ಹೇಳಿದ್ದಕ್ಕೆ ವಿಶೇಷ ಪ್ರಶಸ್ತಿ ಪಡೆದುಕೊಂಡಿದ್ದ. ಆ ವಿದ್ಯಾರ್ಥಿಯನ್ನು ಎಲ್ಲರೂ ಗೌರವದಿಂದ ನಡೆಸಿಕೊಳ್ಳುತ್ತಿದ್ದದ್ದು ಸಿದ್ದು ಅವರ ಗಮನ ಸೆಳೆಯಿತು. ಅದುವೇ ಅವರಿಗೆ ಪ್ರೇರಣೆಯಾಯಿತು.

ಬೆಳಕಿದ್ದೂ ಕತ್ತಲಲ್ಲೇ ಇದ್ದ ಅವರು, ಮಗ್ಗಿಯನ್ನು ಕೇವಲ ಪಾಠವನ್ನಾಗಿ ಕಲಿತಿಲ್ಲ, ಅದನ್ನೇ ತಮ್ಮ ಚಿಂತನೆಯ ಭಾಗವನ್ನಾಗಿ ಮಾಡಿಕೊಂಡರು. ಹಗಲು–ರಾತ್ರಿ ಅಭ್ಯಾಸದ ಮೂಲಕ ಸಂಖ್ಯೆಗಳೊಂದಿಗೆ ಒಂದು ಅಪರೂಪದ ಸ್ನೇಹ ಬೆಳೆಸಿಕೊಂಡರು.

ಒಂದು ಹಂತದಲ್ಲಿ ಅವರು ಎಲ್ಲರನ್ನೂ ಬೆರಗುಗೊಳಿಸಿದರು. ನೂರಲ್ಲ... ಸಾವಿರವೂ ಅಲ್ಲ... ಲಕ್ಷಾಂತರ ಸಂಖ್ಯೆಗಳ ಮಟ್ಟದ ಲೆಕ್ಕಾಚಾರವನ್ನು ಮನಸ್ಸಿನಲ್ಲೇ ನಿಭಾಯಿಸುವ ಸಾಮರ್ಥ್ಯ!

ಇಲ್ಲಿಂದ ಅವರ ಹೊಸ ಪಯಣ ಆರಂಭವಾಯಿತು. ದೌರ್ಬಲ್ಯವನ್ನೇ ದಿನದ 24 ಗಂಟೆಯೂ ಶಕ್ತಿಯನ್ನಾಗಿ ರೂಪಿಸಿಕೊಂಡ ಇವರ ಕಥೆಯೇ ಸ್ಫೂರ್ತಿದಾಯಕ.

'ಕಣ್ಣು ಇಲ್ಲದೇ ಇದ್ದರೂ ವಿಷಯಗಳನ್ನು ಇತರರಿಗಿಂತ ಬೇಗನೇ ಗ್ರಹಿಸುವ ವಿಶೇಷ ಶಕ್ತಿ ನನ್ನೊಳಗೆ ಇರುವುದನ್ನು ನಾನು ಅನುಭವಿಸಿದ್ದೇನೆ. ಇದನ್ನು ಮಾತಿನಲ್ಲಿ ಹೇಳಲು ಕಷ್ಟ. ಯಾವುದೇ ಭಾವನಾತ್ಮಕ ಬೆಂಬಲವೂ ಇಲ್ಲದೆ ಹುಬ್ಬಳ್ಳಿಯಲ್ಲಿ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದೆ. ಪ್ರೌಢಶಾಲೆಯಲ್ಲಿ ಕೆಲ ಸಹಪಾಠಿಗಳು ನನ್ನ ಮೇಲಿನ ಅಸೂಯೆಯಿಂದ ಪ್ರಶಸ್ತಿ ಪತ್ರಗಳನ್ನು ಹರಿದು ಹಾಕಿದ್ದು ಇನ್ನೂ ನನ್ನ ಮನಸ್ಸಿನಲ್ಲಿ ಘಾಸಿಯಾಗಿ ಉಳಿದಿದೆ. ಕಾಗದ ಹರಿದರೂ ನನ್ನೊಳಗಿನ ಬೌದ್ಧಿಕ ಶಕ್ತಿ ಹರಿತವಾಗುತ್ತಲೇ ಇತ್ತು.'

'ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ರಾಜಧಾನಿ ಪಾಲಾದೆ. ಪಿಯುಸಿ ಶಿಕ್ಷಣದ ಜೊತೆಗೆ ಇಂಗ್ಲಿಷ್ ಮಾತನಾಡುವ ಕೋರ್ಸ್ ಸೇರಿಕೊಂಡೆ. ನಂತರ ಎಲ್‌ಎಲ್‌ಬಿ ಪದವಿಗಾಗಿ ಎಂ ಎಸ್ ರಾಮಯ್ಯ ಕಾಲೇಜು ಸೇರಿಕೊಂಡೆ. ಐಎಎಸ್ ಕನಸು ಕಂಡೆ. ಇದರ ಜೊತೆಗೆ ಮಿದುಳಿಗೆ ಕೆಲಸ ನೀಡುತ್ತಿದ್ದೆ. ಪ್ರಸ್ತುತ ಯಾವುದೇ ದೊಡ್ಡ ಸಂಖ್ಯೆಗಳ ಗುಣಾಕಾರವನ್ನು ತಕ್ಷಣವೇ ಮಾಡಬಲ್ಲೆ. ನನ್ನ ಮಿದುಳಿನಲ್ಲಿ ಸಾವಿರಾರು ಮೊಬೈಲ್ ಸಂಖ್ಯೆಗಳು ದಾಖಲಾಗಿವೆ. ಯಾವುದೇ ವರ್ಷದ ಯಾವುದೇ ದಿನ ಕೇಳಿದರೂ ವಾರವನ್ನು ತಿಳಿಸಬಲ್ಲೆ; ಅದೇ ರೀತಿ ವಾರ ಹೇಳಿದರೆ ದಿನಾಂಕ ಹೇಳಬಲ್ಲೆ' ಎನ್ನುತ್ತಾ ಸಣ್ಣಗೆ ನಕ್ಕರು.

'ಕಣ್ಣು ಕಾಣದೇ ಇರುವುದರಿಂದ ತೊಂದರೆ ಎನಿಸುವುದಿಲ್ಲವೇ' ಎಂಬ ನನ್ನ ಪ್ರಶ್ನೆಗೆ, 'ರಾತ್ರಿ ಕರೆಂಟ್ ಹೋದರೆ ನೀವು ಮೊಬೈಲ್ ಲೈಟ್, ಟಾರ್ಚು ಹುಡುಕುತೀರಿ. ಬೆಳಕಿಲ್ಲದೆ ಇದ್ದರೆ ನಿಮಗೇ ಕಣ್ಣು ಕಾಣಿಸಲ್ಲ' ಎಂದು ಥಟ್ಟನೆ ಉತ್ತರ ನೀಡಿ ಸುಮ್ಮನಾದರು.

'ನನ್ನ ಕಥೆ ಇನ್ನೂ ಇದೆ' ಎನ್ನುತ್ತಾ ಮಾತು ಮುಂದುವರಿಸಿದ ಅವರು, 'ನಾನು ಟಿವಿ ಚಾನೆಲ್ ಒಂದರಲ್ಲಿ ಆ್ಯಂಕರ್ ಆಗಿದ್ದೆ. ಹಿಂದಿಯ 'ಎಂಟರ್‌ಟೈನ್ಮೆಂಟ್ ಕೇ ಲಿಯೇ ಕುಚ್ ಬಿ ಕರೇಗಾ' ರಿಯಾಲಿಟಿ ಶೋದಲ್ಲಿ ಭಾಗವಹಿಸಿದ್ದೇನೆ. 'ಎದ್ದೇಳು ಮಂಜುನಾಥ' ಸಿನಿಮಾದಲ್ಲಿ ನಟಿಸಿದ್ದೇನೆ. ಸಾಧನೆ ಮಾಡುವ ಛಲವಿದ್ದರೆ ಯಾವ ದೈಹಿಕ ನ್ಯೂನತೆಗಳೂ ಅಡ್ಡಿಯಾಗಲಾರದು ಎನ್ನುವುದು ನನ್ನ ನಂಬಿಕೆ.'

'ಹೀಗಾಗಿಯೇ ನನ್ನ ಕಥೆಯನ್ನು ಇತರರೊಂದಿಗೆ ಹಂಚಿಕೊಳ್ಳುತ್ತೇನೆ. ನನ್ನ ರೀತಿ ಹಲವರು ವಿವಿಧ ಕಾರಣಗಳಿಗೆ ಮಾನಸಿಕವಾಗಿ ಜರ್ಜರಿತರಾಗಿದ್ದಾರೆ. ಅವರೊಂದಿಗೆ ಮಾತನಾಡಿ, ನನ್ನ ಅನುಭವ ಹಂಚಿಕೊಂಡು, ಸಮಾಲೋಚನೆ ನಡೆಸಿ ಧೈರ್ಯ ತುಂಬುತ್ತಿದ್ದೇನೆ' ಎಂದರು ಸಿದ್ದು.

ಕನಸು ಇನ್ನೂ ಹತ್ತಾರು...

ದಾಖಲೆ ಬರೆಯುವ ಉದ್ದೇಶದಿಂದ ಸಿನಿಮಾವೊಂದನ್ನು ನಿರ್ದೇಶಿಸುವ ಯೋಜನೆಯನ್ನು ಸಿದ್ದು ಹಾಕಿಕೊಂಡಿದ್ದಾರೆ. ಕಥೆ ಸಿದ್ಧಪಡಿಸಿಕೊಂಡು ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದಾರೆ. ಮುಂದೆ ಅಸಾಧ್ಯವೆನ್ನಿಸಬಹುದಾದಷ್ಟು ದೀರ್ಘಕಾಲಾವಧಿಯನ್ನು ಒಳಗೊಂಡ ಕ್ಯಾಲೆಂಡರ್ ರೂಪಿಸುವ ಆಲೋಚನೆಯೂ ಇದೆ. ಜೊತೆಗೆ ಕನ್ನಡ–ಇಂಗ್ಲಿಷ್ ನಿಘಂಟನ್ನು ಸಂಪೂರ್ಣವಾಗಿ ಮನನ ಮಾಡಿಕೊಳ್ಳುವ ಕೆಲಸ ಆರಂಭಿಸಿದ್ದಾರೆ. ಪದಗಳ ಸಾಂದರ್ಭಿಕ ಮತ್ತು ವಿಶೇಷ ಅರ್ಥಗಳನ್ನು ಕಂಠಪಾಠ ಮಾಡುತ್ತಿದ್ದಾರೆ. ಇವು ಬ್ರೈಲ್‌ನಲ್ಲಿ ಲಭ್ಯವಿಲ್ಲದ ಕಾರಣ, ಮೊಬೈಲ್‌ನ ಟಾಕಿಂಗ್ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ.

ಆರೋಗ್ಯ ಸವಾಲುಗಳ ನಡುವೆಯೂ ಅವರು ಕನಸು ಕಾಣುವುದನ್ನು, ಮಿದುಳಿಗೆ ಸಾಣೆ ಹಿಡಿಯುವುದನ್ನು ನಿಲ್ಲಿಸಿಲ್ಲ.

ತೋಡ್ನಿ ಗ್ಯಾಂಗ್...

8ನೇ ಪುಟದಿಂದ..

'ಗ್ಯಾಂಗ್ ಕಟ್ಟುವುದು, ಕಾರ್ಮಿಕರನ್ನು ಕರೆತರುವುದು, ಕಾರ್ಖಾನೆಗಳೊಂದಿಗೆ ಸಂಪರ್ಕ ಸಾಧಿಸುವುದು–ಈ ಎಲ್ಲವನ್ನೂ ಸೇರಿ ನಿರ್ವಹಣೆಯ ಜವಾಬ್ದಾರಿ ದೊಡ್ಡದು; ಅದಕ್ಕೇ ಕಮಿಷನ್ ಪಡೆಯುತ್ತೇವೆ. ನಾನು ಈ ಹಂಗಾಮಿನಲ್ಲಿ ಸುಮಾರು ₹10 ಲಕ್ಷದ ವಹಿವಾಟು ಮಾಡಿದ್ದೇನೆ. ಅದರಲ್ಲಿ ₹4 ಲಕ್ಷ ನನಗೆ ಉಳಿಯುತ್ತದೆ' ಎನ್ನುತ್ತಾರೆ ಗ್ಯಾಂಗ್‌ಮನ್ ಯುವರಾಜ ಲಖರೆ.

ಗ್ಯಾಂಗ್‌ಮನ್‌ಗಳು ಹೊಲಗದ್ದೆಗಳಲ್ಲಿ ದುಡಿಯುವುದಿಲ್ಲ. ಇವರ ಕೆಲಸ ನಿರ್ವಹಣೆ ಮತ್ತು ಆರ್ಥಿಕ ವ್ಯವಹಾರ ನೋಡಿಕೊಳ್ಳುವುದು. ಪ್ರತಿ ಟನ್ ಕಬ್ಬಿಗೆ ಕನಿಷ್ಠ ₹20 ಕಮಿಷನ್ ಪಡೆಯುವುದು ರೂಢಿಯಾಗಿದೆ. ಆದರೆ, ಕಾರ್ಖಾನೆಗಳು ಇವರ ಖಾತೆಗೆ ಎಲ್ಲ ಕಾರ್ಮಿಕರ ಹಣವನ್ನು ಸಂದಾಯ ಮಾಡುತ್ತವೆ. ಈ ವ್ಯಕ್ತಿ ನಿಗದಿ ಮಾಡಿದ ಹಣವೇ ಕಾರ್ಮಿಕರ ಪಾಲಾಗುತ್ತದೆ. ಹೀಗೆ ಒಬ್ಬೊಬ್ಬ ಗ್ಯಾಂಗ್‌ಮನ್ 1 ಕೋಟಿಯಿಂದ 5 ಕೋಟಿ ರೂಪಾಯಿಗೂ ಹೆಚ್ಚು ವ್ಯವಹಾರ ಮಾಡುತ್ತಾನೆ.

ಕಾರ್ಮಿಕರ ಒಂದು ಜೋಡಿಗೆ ಈ ಬಾರಿ ಟನ್‌ಗೆ ₹475 ಕೂಲಿ ನೀಡಲಾಗುತ್ತಿದೆ. ಇದಲ್ಲದೇ ರೈತರೂ ವೈಯಕ್ತಿಕವಾಗಿ ತಲಾ ₹200 ಕೊಡುತ್ತಾರೆ. ಜೋಡಿ ದಿನಕ್ಕೆ ಕನಿಷ್ಠ ಮೂರು ಟನ್ ಕಬ್ಬು ಕಟಾವು ಮಾಡಬಲ್ಲದು. ಒಂದು ಹಂಗಾಮಿನಲ್ಲಿ ಒಂದು ಜೋಡಿ ಕನಿಷ್ಠ 1 ಲಕ್ಷದಿಂದ ₹1.5 ಲಕ್ಷ, ಎರಡು ಜೋಡಿ ಕನಿಷ್ಠ 3 ಲಕ್ಷ ರೂಪಾಯಿವರೆಗೆ ಗಳಿಸುತ್ತದೆ. ಎತ್ತು–ಚಕ್ಕಡಿ ಸಮೇತ ಬರುವವರು ಅಥವಾ ಟ್ರ್ಯಾಕ್ಟರ್ ಹೊಂದಿದವರು ಕಬ್ಬು ಸಾಗಣೆ ಮಾಡಿಯೂ ಮತ್ತಷ್ಟು ಸಂಪಾದನೆ ಮಾಡುತ್ತಾರೆ.

ಮುಂಗಡ ಎಂಬ ಜಾಲ

ಪ್ರತಿ ವರ್ಷ ಸಕ್ಕರೆ ಕಾರ್ಖಾನೆಗಳು ಕೋಟ್ಯಂತರ ರೂಪಾಯಿಯನ್ನು ಈ ತೋಡ್ನಿ ಗ್ಯಾಂಗಿನವರಿಗೆ ಮುಂಗಡವಾಗಿ ನೀಡಿ, ಅವರನ್ನು ಬುಕ್ ಮಾಡುತ್ತವೆ. ಇದನ್ನು ಕೂಡ ಗ್ಯಾಂಗ್‌ಮನ್‌ಗಳೇ ನಿರ್ವಹಿಸುತ್ತಾರೆ. ಕಬ್ಬು ಬೆಳೆದುನಿಂತಾಗ ಗ್ಯಾಂಗ್‌ಮನ್‌ಗಳು ಜಿಲ್ಲೆಯಲ್ಲಿ ತಿರುಗಾಡಿ ಪರಿಶೀಲಿಸುತ್ತಾರೆ. ಯಾವ ಭಾಗದಲ್ಲಿ, ಯಾವ ಕಾರ್ಖಾನೆಗೆ ದುಡಿಯಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಕಾರ್ಖಾನೆಗಳಿಂದ ಕೋಟ್ಯಂತರ ಹಣ ಮುಂಗಡ ಪಡೆದು, ಕಾರ್ಮಿಕರಿಗೂ ಮುಂಗಡ ನೀಡುತ್ತಾರೆ. ಈ ರೀತಿ ಮುಂಗಡದ ಜಾಲದಲ್ಲಿ ಸಿಕ್ಕಿಕೊಂಡ ಕಾರ್ಮಿಕರು ಅನ್ಯಾಯಕ್ಕೂ ಒಳಗಾಗುತ್ತಾರೆ.

ಕಾರ್ಖಾನೆಗಳು ಮಾತ್ರವಲ್ಲ; ರೈತರೂ ಮುಂಗಡ ಹಣ ನೀಡಿ ಕಾರ್ಮಿಕರನ್ನು ಖಾತ್ರಿ ಮಾಡಿಕೊಂಡಿರುತ್ತಾರೆ. ಮಕ್ಕಳ ಶಿಕ್ಷಣ, ಮದುವೆ, ಮನೆ ಕಟ್ಟುವುದು, ಉಪಜೀವನ, ಅನಾರೋಗ್ಯ–ಹೀಗೆ ನಾನಾ ಕಾರಣಗಳಿಂದ ಈ ಜನ ಮುಂಗಡ ಪಡೆಯಲು ಮುಗಿಬೀಳುತ್ತಾರೆ. ಜೋಡಿಗೆ ವರ್ಷಕ್ಕೆ ಕನಿಷ್ಠ ₹1ರಿಂದ ₹3 ಲಕ್ಷ ಮುಂಗಡ ನೀಡುವುದೂ ಇದೆ.

ಪಾಲಕರ ಜತೆಗೆ ಮಕ್ಕಳು ಶಾಲೆ ಬಿಟ್ಟು ಬರುತ್ತಾರೆ. ಅವರನ್ನು ದುಡಿಮೆಗೆ ಹಚ್ಚುವುದಿಲ್ಲ. ಪುಟಾಣಿ ಮಕ್ಕಳನ್ನು ನೋಡಿಕೊಳ್ಳಲು ಅಥವಾ ಜೋಪಡಿ ಕಾಯಲು ಬಿಟ್ಟುಹೋಗುತ್ತಾರೆ. ಎಳೆಯ ಮಕ್ಕಳು ಐದು ತಿಂಗಳು ಶಾಲೆಯಿಂದ ದೂರವೇ ಇರುತ್ತಾರೆ. ಆದರೆ, ಇತ್ತೀಚೆಗೆ ಕೆಲ ಕುಟುಂಬಗಳು ಮಕ್ಕಳನ್ನು ಮಹಾರಾಷ್ಟ್ರದಲ್ಲೇ ಸಂಬಂಧಿಕರ ಮನೆ ಅಥವಾ ವಸತಿ ನಿಲಯಗಳಲ್ಲಿ ಇರಿಸುವ ಪ್ರವೃತ್ತಿಯೂ ಶುರುವಾಗಿದೆ.

ಸ್ನಾನ ಮಾಡುವ ಸ್ಥಳ

ಮಕ್ಕಳಿಗಾಗಿ ಕೆಲ ವರ್ಷಗಳ ಹಿಂದೆ ಸರ್ಕಾರವೇ ಟೆಂಟ್ ಶಾಲೆಗಳನ್ನು ಆರಂಭಿಸಿತ್ತು. ಆದರೆ, ಅವರೆಲ್ಲ ಮರಾಠಿ ಮಾಧ್ಯಮದ ಮಕ್ಕಳಾಗಿದ್ದರಿಂದ ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಸಾಧ್ಯವಾಗಲಿಲ್ಲ. ಮತ್ತೆ ಕೆಲವು ಕಾರ್ಖಾನೆಗಳು ಅವರಿದ್ದಲ್ಲೇ ತಾತ್ಕಾಲಿಕ ಟೆಂಟ್ ಶಾಲೆಗಳನ್ನು ತೆರೆದಿದ್ದವು. ಕಳೆದೊಂದು ದಶಕದಿಂದ ಅವೂ ಬಹುತೇಕ ಸ್ಥಗಿತಗೊಂಡಿವೆ. ಕೆಲ ಅಧಿಕಾರಿಗಳ ಪ್ರಕಾರ, ಮಹಾರಾಷ್ಟ್ರದ ಹಳ್ಳಿಗಳಲ್ಲಿ ಈಗ ಶಾಲೆಗಳ ಲಭ್ಯತೆ ಹೆಚ್ಚಿರುವುದರಿಂದ, ಕೆಲವು ಪಾಲಕರು ಮಕ್ಕಳನ್ನು ಅಲ್ಲೇ ಬಿಟ್ಟು ಬರುತ್ತಿದ್ದಾರೆ ಎನ್ನಲಾಗುತ್ತದೆ.

ಎಂಟು ತಾಸು ದುಡಿಯುವ ಕಾರ್ಮಿಕರಿಗೆ ಇರುವ ಸಾಮಾನ್ಯ ಕೂಲಿ ಮಾನದಂಡಗಳಿಗೆ ಹೋಲಿಸಿದರೆ, ಕಬ್ಬು ಕಟಾವು ಮಾಡುವವರು 12 ರಿಂದ 14 ತಾಸು ದುಡಿಯುತ್ತಾರೆ. ತಕ್ಕಮಟ್ಟಿನ ಕೂಲಿ ಸಿಗದೇ ಅನ್ಯಾಯ ಅನುಭವಿಸುತ್ತಿದ್ದಾರೆ. ಮುಂಗಡ ನೀಡುವ ಕಾರ್ಖಾನೆಗಳು ನಂತರ ಸೂಕ್ತ ಕೂಲಿ ನೀಡದೆ ದುಡಿಸಿಕೊಳ್ಳುತ್ತವೆ.

ಇನ್ನೊಂದೆಡೆ, ಮಧ್ಯವರ್ತಿಯೂ ಇವರ ಬೆವರಿನ ಪ್ರತಿಫಲದಲ್ಲೇ ಪಾಲು ಪಡೆಯುತ್ತಾನೆ. ಇವರು ಗುಡಿಸಲು ಹಾಕಿಕೊಳ್ಳಲು ಬಳಸಿಕೊಳ್ಳುವ ಜಾಗಕ್ಕೂ ರೈತರು ಬಾಡಿಗೆ ಪಡೆಯುತ್ತಾರೆ.

ಇವರ ಹಕ್ಕುಗಳಿಗೆ ಹೋರಾಡುವ 'ಗನ್ನಾ ತೋಡ್ನಾ ಗ್ಯಾಂಗ್' ಎಂಬ ಎನ್‌ಜಿಒ ಮಹಾರಾಷ್ಟ್ರದಲ್ಲಿದೆ. ಅದರ ಶಾಖೆಯನ್ನು ಕಬ್ಬೂರಿನಲ್ಲಿ ಆರಂಭಿಸಿರುವ ನಾಮದೇವ ಹಿರೇಕೋಡಿ 2022ರಿಂದ ಇವರಿಗೆ ನ್ಯಾಯ ಒದಗಿಸಲು ಹೋರಾಟ ನಡೆಸುತ್ತಿದ್ದಾರೆ.

'ಹೆಣ್ಣುಮಕ್ಕಳು ನಸುಕಿನ 4ಕ್ಕೇ ಎದ್ದು ಬಯಲಲ್ಲೇ ಸ್ನಾನ ಮಾಡಬೇಕು. ಬಯಲಲ್ಲೇ ಬಹಿರ್ದೆಸೆ ಮುಗಿಸಬೇಕು. ಬಯಲಲ್ಲೇ ಅಡುಗೆ ಮಾಡಬೇಕು. ಅವರಿಗೆ ಸುರಕ್ಷತೆ ಇಲ್ಲ. ಸ್ಥಳದಲ್ಲಿ ಆರೋಗ್ಯ, ನೀರು, ಬೆಳಕಿನ ವ್ಯವಸ್ಥೆ ಇರುವುದಿಲ್ಲ. ಕಬ್ಬು ಕಟಾವು ಮಾಡುವಾಗ ಕೈ–ಕಾಲು, ಬೆರಳು ಕತ್ತರಿಸಿಕೊಂಡವರು ಹಲವರು. ಹಾವು ಕಚ್ಚಿ ಪ್ರಾಣ ಕಳೆದುಕೊಂಡವರೂ ಇದ್ದಾರೆ. ಕಾರ್ಖಾನೆಗಳು ವಿಮೆ ಸೌಲಭ್ಯ ನೀಡಬೇಕು ಎಂಬ ನಿಯಮ ಇದ್ದರೂ, ಅದು ಪರಿಣಾಮಕಾರಿಯಾಗಿ ತಲುಪಿದ ಉದಾಹರಣೆಗಳು ವಿರಳ. ಇವರ ತೋಳುಗಳ ಶ್ರಮದಿಂದ ಕಾರ್ಖಾನೆಗಳ ಮಾಲೀಕರು ಸಾಕಷ್ಟು ಶ್ರೀಮಂತರಾಗಿದ್ದಾರೆ. ಎರಡು–ಮೂರು ಕಾರ್ಖಾನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ, ದುಡಿಯುವ ಜನರ ಬದುಕು ಮೂರು ತಲೆಮಾರುಗಳಿಂದಲೂ ಮೂರಾಬಟ್ಟೆಯಾಗಿದೆ. ಅವರ ಬೆವರಿಗೂ ಬೆಲೆ ಇಲ್ಲ; ಬದುಕಿಗೂ ನೆಲೆ ಇಲ್ಲ' ಎನ್ನುವುದು ನಾಮದೇವ ಅವರ ಕಳವಳ.

ಈ ಗ್ಯಾಂಗ್‌ಗಳು ಒಂದು ಹಂಗಾಮಿನಲ್ಲಿ ಮೂರು ಕಾಲಗಳನ್ನು ಅನುಭವಿಸುತ್ತವೆ. ಅಂದರೆ ಅಕ್ಟೋಬರ್‌ನಲ್ಲಿ ಬಿರುಸಾದ ಮಳೆ, ಡಿಸೆಂಬರ್‌ನಲ್ಲಿ ಕಡುಚಳಿ, ಮಾರ್ಚ್‌ನಲ್ಲಿ ನೆತ್ತಿಸುಡುವ ಬಿಸಿಲು. ಮಳೆ, ಚಳಿ, ಬಿಸಿಲಿಗೆ ಅಂಜದೇ ಜೋಪಡಿಯಲ್ಲಿ ಬದುಕಬೇಕು. ಅದು ಇಂದೋ ನಾಳೆಯೋ ಜೀವ ಬಿಡುವ ವೃದ್ಧರಾಗಲಿ, ಇಂದು–ನಿನ್ನೆಯಷ್ಟೇ ಕಣ್ಣುಬಿಟ್ಟ ಹಸುಗೂಸೇ ಇರಲಿ–ಇವರ ಬದುಕು ಬಟಾಬಯಲು.

ಆರಂಭದಲ್ಲಿ ಕಂಡ ಆ ತಾಯಿ... ಶಿವಾನಿಯಂಥ ಮಹಿಳೆಯರು... ಇಂತಹ ಸಾವಿರಾರು ತಾಯಂದಿರ ಬದುಕು ಹಸನಾಗಬೇಕು ಅಷ್ಟೇ.

ಮುನ್ನೋಟ 12-04-2026 ರಿಂದ 18-04-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಸುಂದರವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ನಿಮ್ಮ ಅಗತ್ಯಕ್ಕೆ ತಕ್ಕಂತೆ ಇರುತ್ತದೆ. ಗುರುಹಿರಿಯರಿಂದ ಪ್ರಯೋಜನವನ್ನು ಪಡೆಯುವಿರಿ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕೆ ಹೆಚ್ಚು ಕಷ್ಟಪಡಬೇಕು. ಅಜೀರ್ಣ ಅಥವಾ ಅತಿಸಾರ ಕೆಲವರನ್ನು ಕಾಡಬಹುದು. ಸಂಗಾತಿಗೆ ಆರ್ಥಿಕ ಸಹಕಾರ ನೀಡುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಾರದ ಆರಂಭದಲ್ಲಿ ಸ್ವಲ್ಪ ನಿರಾಸೆ ಕಾದಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಕಲಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ನಿಮ್ಮ ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಕೆಲವರಿಗೆ ಅನಿರೀಕ್ಷಿತ ಆದಾಯವಿರುತ್ತದೆ. ಹಿರಿಯರ ಕೃಷಿಭೂಮಿ ದೊರೆಯುವ ಸಾಧ್ಯತೆಯಿದೆ. ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವವರಿಗೆ ನಿರೀಕ್ಷೆಗಿಂತ ಹೆಚ್ಚು ಅಭಿವೃದ್ಧಿ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳು ನಿಧಾನಗತಿಯಲ್ಲಿರುತ್ತವೆ. ಮಧ್ಯವರ್ತಿ ಕೆಲಸ ಮಾಡುವವರಿಗೆ ವ್ಯವಹಾರದಲ್ಲಿ ಸಾಮಾನ್ಯ ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಯಂತ್ರಗಳೊಂದಿಗೆ ಕೆಲಸ ಮಾಡುವವರು ಎಚ್ಚರದಿಂದಿರಿ. ಸಂಗಾತಿಯಿಂದ ನಿರೀಕ್ಷಿಸಿದಷ್ಟು ಸಹಕಾರ ಸಿಗುತ್ತದೆ. ಪಶು ಸಂಗೋಪನೆ ಮಾಡುವವರ ಆದಾಯ ಕಡಿಮೆಯಾಗಬಹುದು. ವೃತ್ತಿಯಲ್ಲಿ ಬಡ್ತಿ ದೊರೆಯಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಕುಟುಂಬದಲ್ಲಿ ಸಂತೋಷದ ವಾತಾವರಣವಿರುತ್ತದೆ. ಆದಾಯ ಕಡಿಮೆ ಇರುತ್ತದೆ. ಒಡಹುಟ್ಟಿದವರ ವಿರೋಧ ಎದುರಾಗಬಹುದು. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಕೆಲವರಿಗೆ ಪಿತ್ತ ಬಾಧೆ ಕಾಣಿಸಬಹುದು. ಕದ್ದುಮುಚ್ಚಿ ಪ್ರೀತಿ ಮಾಡುತ್ತಿರುವವರಿಗೆ ಹಿರಿಯರ ಒಪ್ಪಿಗೆ ದೊರೆಯುತ್ತದೆ. ವಾಹನ ಮಾರಾಟಗಾರರ ವ್ಯಾಪಾರ ಹೆಚ್ಚುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಾರದ ಆರಂಭದಲ್ಲಿ ಅತಿಯಾದ ಆಲಸಿತನವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಅನಿರೀಕ್ಷಿತ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿದೆ. ಕೆಲವರಿಗೆ ಶೀತ ಸಂಬಂಧಿ ದೋಷಗಳು ಕಾಣಿಸಬಹುದು. ಸಂಗಾತಿಗೆ ವಿದೇಶದಲ್ಲಿ ಈಗ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಸರ್ಕಾರಿ ಕೆಲಸಗಳಲ್ಲಿ ಅಡೆತಡೆಗಳು ಇರುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮೆಲ್ಲ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಕ್ತದ ಒತ್ತಡ, ಉಸಿರಾಟ ಹಾಗೂ ಶ್ವಾಸಕೋಶದ ತೊಂದರೆ ಇರುವವರು ಎಚ್ಚರ ವಹಿಸಿ. ಕರಕುಶಲ ವಸ್ತುಗಳನ್ನು ಮಾರುವವರಿಗೆ ಆದಾಯ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಚುರುಕುತನವಿರುತ್ತದೆ. ಆದಾಯವು ಕಡಿಮೆ ಇದ್ದು, ಅದರಲ್ಲೇ ನಿಭಾಯಿಸಬೇಕಾಗಬಹುದು. ಹಿರಿಯರಿಂದ ನಿರೀಕ್ಷಿಸಿದ ಸಹಕಾರ ಸಿಗುವುದಿಲ್ಲ. ಕೃಷಿ ಮಾಡುವವರಿಗೆ ಬಹಳ ಅಭಿವೃದ್ಧಿ ಇರುತ್ತದೆ. ಹೈನುಗಾರಿಕೆ ಮಾಡುವವರ ಆದಾಯ ಹೆಚ್ಚುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶಗಳು ತೆರೆದುಕೊಳ್ಳುತ್ತವೆ. ಸಂಗಾತಿಯ ಸಹಾಯದಿಂದ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಹಳಷ್ಟು ಉತ್ಸಾಹವಿರುತ್ತದೆ. ಕೆಲಸ ಮಾಡುವ ಹುಮ್ಮಸ್ಸು ಇರುತ್ತದೆ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿರುವವರಿಗೆ ಆಸ್ತಿ ಮಾಡುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಬರುತ್ತದೆ. ಸಂಗಾತಿ ಆರೋಗ್ಯದಲ್ಲಿ ಏರುಪೇರುಗಳಾಗಬಹುದು. ಕೆಲವರಿಗೆ ಅನಿರೀಕ್ಷಿತ ಆದಾಯ ಲಭಿಸುತ್ತದೆ. ವೃತ್ತಿಯಲ್ಲಿ ನಿರೀಕ್ಷಿತ ಪ್ರಗತಿ ಇಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ವ್ಯಕ್ತಿತ್ವದಲ್ಲಿ ಗಂಭೀರತೆ ಇರುತ್ತದೆ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ಭೂಮಿಯನ್ನು ಒದಗಿಸುವವರಿಗೆ ಹೆಚ್ಚು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ದೀರ್ಘಕಾಲದಿಂದ ಅನಾರೋಗ್ಯಕ್ಕೆ ತುತ್ತಾದವರ ಆರೋಗ್ಯ ಈಗ ಸುಧಾರಿಸುತ್ತದೆ. ನಿಮ್ಮ ಸಂಗಾತಿ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸಾಕಷ್ಟು ಆನಂದವನ್ನು ಕಾಣಬಹುದು ಹಾಗೂ ಸಿಹಿ ಸುದ್ದಿಗಳು ನಿಮಗೆ ದೊರೆಯುತ್ತವೆ. ಆದಾಯವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷೆಯ ಹತ್ತಿರದ ಫಲಿತಾಂಶ ದೊರೆಯುತ್ತದೆ. ಪಿತ್ತೋಷ್ಣಗಳು ಹೆಚ್ಚಾಗಬಹುದು. ಅನಿರೀಕ್ಷಿತವಾಗಿ ಪ್ರೀತಿಯ ಬಲೆಗೆ ಬೀಳುವ ಸಂದರ್ಭವಿದೆ. ಧರ್ಮಕಾರ್ಯಗಳಿಗೆ ಹೆಚ್ಚು ಹಣ ಖರ್ಚಾಗುತ್ತದೆ. ತಂದೆಯಿಂದ ನಿಮಗೆ ಉತ್ತಮ ಸಹಕಾರ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯ ಮಧ್ಯಮಗತಿಯಲ್ಲಿರುತ್ತದೆ. ಸಹೋದರರ ಸಹಕಾರ ದೊರೆಯುತ್ತದೆ. ಕೃಷಿಯಿಂದ ಆದಾಯವಿರುತ್ತದೆ ಹಾಗೂ ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ತಾಯಿಯ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಬಹುದು. ಅದಿರು ವ್ಯಾಪಾರ ಮಾಡುವವರ ಆದಾಯ ಹೆಚ್ಚುತ್ತದೆ. ಹೊಸ ಆದಾಯದ ಮೂಲಗಳನ್ನು ಕಂಡುಕೊಳ್ಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ನಿರೀಕ್ಷೆಯಷ್ಟಿರುತ್ತದೆ. ಸಂಗಾತಿಯಿಂದ ಆರ್ಥಿಕ ಸಹಕಾರ ಸಿಗುತ್ತದೆ. ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿರುತ್ತದೆ. ಹೊಟ್ಟೆಗೆ ಸಂಬಂಧಿಸಿದ ಕೆಲವು ದೋಷಗಳು ನಿಮ್ಮನ್ನು ಕಾಡುತ್ತವೆ. ನಿಮ್ಮ ವ್ಯವಹಾರಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ.

ಪದಬಂಧ 2939

ಮೇಲಿಂದ ಕೆಳಕ್ಕೆ

1.ಕನ್ನಡದ ಇಲಿ ಗಣಪನ ವಾಹನವಾಗಿ ಸಂಸ್ಕೃತದಲಿ ಹೀಗೆ 3
2.ಜಾರ ತಲೆಕೆಳಕಾಗಿ ಬಿಡುವು 2
3. ಹಿತಮಿತದ ಸಮ್ಮಿಶ್ರ 2
4. ದಿಣ್ಣೆ ಮೇಲೆ ಬರುವ ಮದುವೆ ಮೆರವಣಿಗೆ 3
6. ಶಾಂತವಾಗಿ ವಿರಾಮ ಪಡೆಯುವ ನಿವೃತ್ತ ಜೀವನ 3
8. ಉತ್ತರಭಾರತದವರಿಗೆ ಆಡುನುಡಿಯಲ್ಲಿ ಆಗುವ ನಷ್ಟ 3
9. ಕಾವ್ಯದ ಸರಳ ರೂಪ 3
10. ಸ್ತ್ರೀಕುಲಕ್ಕೆ ಮಾದರಿಯಾದ ವಿರಳವಾದ ಪಾಂಡವರ ಮಾತೆಯರು 5
11. ಉಪ್ಪಿನ ಹೊಳಪನ್ನು ನೀಡುವವ 5
12. ಕೆಲಸ ಆಗಬೇಕಾದಾಗ ಹೊಡೆಯಬೇಕಾದ ನಮಸ್ಕಾರ 3
14. ಹರಳಿನಂತೆ ಹೊಳೆಯುವ ಅಂಗಿ ಧರಿಸಿದವಳು 3
16. ಸಂನ್ಯಾಸಿಯಲ್ಲ, ಕುಟುಂಬದ ಜವಾಬ್ದಾರಿ ಹೊತ್ತ ಸಂಸ್ಕಾರಿ 3
18. ಒತ್ತಾಯಪೂರ್ವಕ ಪಾಲಿಸಬೇಕಾದಾಗ ನೆನಪಾಗುವ ಕಜ್ಜಾಯ 3
20. ಉತ್ತರಕನ್ನಡದ ವೃತ್ತಿಪತ್ರಿಕೆಗೆ ಕಾಗದದ ಗತಿ 3
21. ಮುದಿತನವನ್ನು ಅನುಭವಿಸುವ ವೃದ್ಧ 3
23. ಅಂಬಿನಂತೆ ತಲೆಬಾಗಿದ ಶಿವ ಭಕ್ತ 3
24. ಗಣಿತದಲ್ಲಿ ಒಂದು ಸಂಖ್ಯೆಯಿಂದ ಇನ್ನೊಂದನ್ನು ತೆಗೆ 2
25. ಕೈಯಿಂದ ಕೊಡಬೇಕಾದ ಸುಂಕ 2

ಎಡದಿಂದ ಬಲಕ್ಕೆ

1. ಧನಕ್ಕೆ ಆಧಾರವಾಗುವ ಚಕ್ರ 4
3. ತಾನು ಹಿಡಿದ ಛಲವನ್ನು ಬಿಡದೆ ಸಾಧಿಸುವವ 4
5. ಮತ, ಕುಲ ಮತ್ತು ವರ್ಣಗಳ ನಡುವೆ ನಡೆಯುವ ವಾದ ಕಲಹ 5
7. ನಮ್ಮ ಕರಾವಳಿಯ ದುರ್ಗಾಪರಮೇಶ್ವರಿ ಕ್ಷೇತ್ರ 3
9. ಶುಭ ಪ್ರದ ವಿವಾಹ 3
10. ಚಾಲುಕ್ಯರ ಪ್ರಾಚೀನ ಪ್ರದೇಶದಲ್ಲಿ ಶಕುಂತಲ ವಾಸಿಸಿದ್ದಳೆ? 3
12. ಪರಸ್ಪರ ಆಗುವ ಕಷ್ಟಸುಖಕ್ಕೆ ಮಿಡಿಯುವ ಗುಣ 5
13. ಅಕ್ಕ, ಬಸವ, ಅಲ್ಲಮರಂತೆ ನುಡಿ ನಿಸ್ಸೀಮ 5
15. ಮುಚ್ಚುಮರೆಯಿಲ್ಲದೆ ಅಭಿಪ್ರಾಯವನ್ನು ಬಿಚ್ಚಿಡುವ ಪರಸ್ಪರ ಮಾತುಕತೆ 5
17. ಅರಣ್ಯದಲ್ಲಿ ಚೇಷ್ಟೆ ಮಾಡುವ ಕೋತಿ ಚಿಕ್ಕ ಅಂಗಿ ಧರಿಸಿದೆ 5
19. ಕೆಟ್ಟುಕೂತ ಹಳೆ ಸಮಾನಿನ ದುರಸ್ತಿ 3
21. ಮುರನೆಂಬ ರಕ್ಕಸನನ್ನು ಕೊಂದ ಮುಕುಂದ 3
22. ಯತಿ ಮುನಿಗಳ ಒಡೆಯ 3
24. ಚಿತ್ರರಚನೆ, ಹಾಡು, ನೃತ್ಯ ಇತ್ಯಾದಿ ಲಲಿತಕಲೆಯ ರಸವನ್ನು ಅನುಭವಿಸುವವ 5
26. ಸಮುದ್ರದ ತೀರ ಪ್ರದೇಶ 4
27. ಮನಸ್ಸನ್ನು ಆಹ್ಲಾದಗೊಳಿಸುವ ತಂಗು ಪ್ರದೇಶ 4



ಪದಬಂಧ ಉತ್ತರ -2938

ಮೇಲಿಂದ ಕೆಳಕ್ಕೆ

1.ಚಂದನವನ 2.ನಯನ 3.ಶೇಷಶಯನ 4.ಪ್ರತೀಕಾರ 6. ಪುಟ್ಟಕಾಲು 8.ತದಿಗೆ 11.ನಯಗಾ 12.ಹೊಸ್ತಿಲು 13.ಮಹಾಸಮುದ್ರ 14.ಹುರಿಗಾಳು 15.ವರಿಷ್ಟ 16.ಸಂಬಳದಿನ 17.ತೆನೆಹಾಲು 19.ಅಗೆತ

ಎಡದಿಂದ ಬಲಕ್ಕೆ

1.ಚಂದ್ರವದನ 4.ಪ್ರಮೋದ 5.ಯಜ್ಞಪುರುಷ 7.ನವಕೇತನ 9.ಕಾಳೀಯ 10.ರಸನ 11.ನಗೆಹೊನಲು 14.ಹುಲ್ಲುಗಾವಲು 16.ಸಂಚಿಕೆ 18.ಹಾಜರಿ 19.ಅಷ್ಟಮಂಗಳ 20.ಮುಗುಳುನಗೆ 21.ದಿಗಿಲು 22.ತತ್ವವಚನ

ಗೋಡೆಯ ಮೇಲೆ ಹೂವುಗಳು ಅರಳುತ್ತಿವೆ. ಚಿಟ್ಟೆಗಳು ಹಾರುತ್ತಿವೆ. ವಾಸ್ತವವಾಗಿ ಇಲ್ಲಿ ಗೋಡೆಗಳೇ ಇಲ್ಲ! ಜಪಾನಿನ ಇಂಥದ್ದೊಂದು ವಿಸ್ಮಯ ಡಿಜಿಟಲ್ ಲೋಕದ ಪರಿಚಯ ಇಲ್ಲಿದೆ...

ಹೂವು, ಚಿಟ್ಟೆಗಳ ಲೋಕದಲ್ಲಿ...

ಕಲಾಕೃತಿಗಳ ನಡುವೆ ಕಾಣುವ ಪ್ರತಿಕೃತಿ

ಗಡಿಗಳಿಲ್ಲದ ಬೆಳಕಿನ ಲೋಕದಲ್ಲಿ...!

ಟೀಮ್‌ಲ್ಯಾಬ್ ಬಾರ್ಡರ್‌ಲೆಸ್ ಮ್ಯೂಸಿಯಂ ಒಳಗೆ

• ವೇದಾ ಅಠವಳೆ

ಗೋಡೆಯಿಲ್ಲದ ಗೋಡೆಗಳ ನಡುವೆ ನಾನು ನಿಂತಿದ್ದೆ. ಕಾಲಡಿಯಲ್ಲಿ ಕತ್ತಲೆ, ಎದುರು ಬೆಳಕು, ಮೇಲೆ ಅನಂತ ಮಿಂಚು. ಹೂವುಗಳು ಗೋಡೆಯ ಮೇಲೆ ಅರಳುತ್ತಿವೆ; ಚಿಟ್ಟೆಗಳು ನನ್ನ ಉಸಿರಿನ ರಭಸಕ್ಕೆ ತಕ್ಕಂತೆ ಹಾರಾಡುತ್ತಿವೆ. ನಾನು ಕೈಚಾಚಿದಾಗ ಅವು ಬದಲಾಗುತ್ತಿವೆ. ಅದು ಚಿತ್ರವಲ್ಲ. ಅದು ಕನಸೂ ಅಲ್ಲ. ಅದು ಕಲೆ; ಆದರೆ ಕಾಗದವಿಲ್ಲದ, ಕುಂಚವಿಲ್ಲದ, ಬಣ್ಣವಿಲ್ಲದ ಕಲೆ!

ಅದು ಜಪಾನ್‌ನ ರಾಜಧಾನಿ ಟೋಕಿಯೊದಲ್ಲಿರುವ 'ಟೀಮ್ ಲ್ಯಾಬ್ ಬಾರ್ಡರ್‌ಲೆಸ್ ಮ್ಯೂಸಿಯಂ'.

ಕಲೆಯನ್ನು ನಾವು ಸಾಮಾನ್ಯವಾಗಿ ಚೌಕಟ್ಟಿನೊಳಗೆ ನೋಡುವ ಅಭ್ಯಾಸ ಮಾಡಿಕೊಂಡಿದ್ದೇವೆ. ಅಂದರೆ, ಗೋಡೆಯ ಮೇಲೆ ನೇತುಹಾಕಿದ ಚಿತ್ರ, ಅದರ ಮುಂದೆ ನಿಂತು ನೋಡುವುದು. ಆದರೆ ಇಲ್ಲಿ ಗಡಿಗಳೇ ಇಲ್ಲ. 'ಬಾರ್ಡರ್‌ಲೆಸ್' ಎಂಬ ಹೆಸರು ಸೂಚಿಸುವಂತೆ, ಇಲ್ಲಿ ಚಿತ್ರಗಳು ಚಲಿಸುತ್ತವೆ, ಒಂದರೊಳಗೆ ಇನ್ನೊಂದು ಕರಗುತ್ತವೆ, ವೀಕ್ಷಕರ ಸ್ಪರ್ಶಕ್ಕೆ ಪ್ರತಿಕ್ರಿಯಿಸುತ್ತವೆ.

ಈ ಡಿಜಿಟಲ್ ಕಲಾ ಪ್ರಪಂಚವನ್ನು ರೂಪಿಸಿದವರು ಜಪಾನಿನ ಕಲಾ ಸಮೂಹ ಟೀಮ್‌ಲ್ಯಾಬ್. 2001ರಲ್ಲಿ ತೋಷಿಯುಕಿ ಇನೋಕೊ ಮತ್ತು ಅವರ ಸಂಗಾತಿಗಳ ನೇತೃತ್ವದಲ್ಲಿ ಆರಂಭವಾದ ಈ ಸಂಸ್ಥೆ ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಪ್ರಕೃತಿ–ಇವುಗಳ ಸಂಗಮವನ್ನು ಕಲೆಯಲ್ಲಿ ಅನ್ವೇಷಿಸಲು ಮುಂದಾಯಿತು.

2018 ರಲ್ಲಿ ಟೋಕಿಯೊದ ಒಡೈಬಾ ಪ್ರದೇಶದಲ್ಲಿ ಮೊದಲ ಬಾರಿಗೆ 'ಬಾರ್ಡರ್‌ಲೆಸ್' ಮ್ಯೂಸಿಯಂ ಜನತೆಗೆ ತೆರೆದಿತು. ನಂತರ 2024ರಲ್ಲಿ ಇದು ಅಜಾಬುದೈ ಹಿಲ್ಸ್ ಸಂಕೀರ್ಣಕ್ಕೆ ಸ್ಥಳಾಂತರಗೊಂಡು ಹೊಸರೂಪದಲ್ಲಿ ಮತ್ತೆ ಅರಳಿತು. ಇಂದು ಟೋಕಿಯೊ ನಗರದ ಪ್ರಮುಖ ಸಾಂಸ್ಕೃತಿಕ ಆಕರ್ಷಣೆಗಳಲ್ಲಿ ಒಂದಾಗಿದೆ.

ಗೋಡೆಯ ಹಿಂದೆ ಗೋಡೆಯಿಲ್ಲ

ಹತ್ತು ಸಾವಿರ ಚದರ ಮೀಟರ್‌ಗೂ ಅಧಿಕ ವಿಸ್ತೀರ್ಣದ ಈ ಕಲಾ ಸಾಗರದಲ್ಲಿ ದಾರಿ ತೋರಿಸುವ ಫಲಕಗಳಿಲ್ಲ. ಗೈಡ್‌ಗಳಿಲ್ಲ. ಕತ್ತಲೆಯ ಕೋಣೆಗಳಲ್ಲಿ ಸಾವಿರಾರು ಪ್ರೊಜೆಕ್ಟರ್‌ಗಳು ಕಣ್ಣಿಗೆ ಕಾಣದಂತೆ ಕೆಲಸ ಮಾಡುತ್ತವೆ. ಅತ್ಯಾಧುನಿಕ ಕಂಪ್ಯೂಟರ್‌ಗಳು ರಿಯಲ್-ಟೈಮ್ ಪ್ರೋಗ್ರಾಮಿಂಗ್ ಮೂಲಕ ಪ್ರತಿ ಕ್ಷಣ ಹೊಸ ದೃಶ್ಯಗಳನ್ನು ರಚಿಸುತ್ತವೆ.

ಇದು ಮುಂಚಿತವಾಗಿ ರೆಕಾರ್ಡ್ ಮಾಡಿರುವ ವಿಡಿಯೊ ಪ್ರದರ್ಶನವಲ್ಲ. ನೀವು ಹತ್ತಿರ ಬಂದಾಗ ಸೆನ್ಸರ್‌ಗಳು ನಿಮ್ಮ ಚಲನವಲನವನ್ನು ಗ್ರಹಿಸುತ್ತವೆ. ನಿಮ್ಮ ಸ್ಪರ್ಶ, ನಿಮ್ಮ ನೆರಳು, ನಿಮ್ಮ ಉಸಿರಾಟ ಎಲ್ಲವೂ ಕಲೆಯ ಭಾಗವಾಗುತ್ತವೆ. ಕ್ಷಣಕಾಲದ ಹಿಂದೆ ಕಂಡ ದೃಶ್ಯ ಮತ್ತೊಮ್ಮೆ ಕಾಣುವುದಿಲ್ಲ. ನಿಜವಾಗಿ ನೋಡಿದರೆ ಅಲ್ಲಿ ಕಪ್ಪು ಗೋಡೆಗಳು ಮಾತ್ರ. ಆದರೆ ಡಿಜಿಟಲ್ ಬೆಳಕು ಅವುಗಳನ್ನು ಅನಂತ ಜಗತ್ತಾಗಿ ರೂಪಿಸುತ್ತದೆ.

ಹೂವಿನೊಂದಿಗೆ ಸಂವಾದ

ಒಂದು ಕೋಣೆಯಲ್ಲಿ ಗೋಡೆಯೆಲ್ಲ ಬಣ್ಣಬಣ್ಣದ ಹೂಗಳು. ಚಿಟ್ಟೆಗಳು ಸುತ್ತಲೂ ಹಾರಾಟ. ನಾನು ಒಂದು ನೀಲಿ ಹೂವನ್ನು ಮುಟ್ಟಿದೆ. ಅದು ತಕ್ಷಣ ಹಳದಿಯಾಗಿ ಅರಳಿತು. ಅದರ ಸುತ್ತ ಇನ್ನಷ್ಟು ಹೂಗಳು ಮಿಂಚಿದವು. ಅಲ್ಲಿಂದ ಚಿಟ್ಟೆಗಳು ಭುರ್ರನೆ ಹಾರಿದವು. ಕ್ಷಣಕಾಲದಲ್ಲಿ ದೃಶ್ಯ ಬದಲಾಯಿತು.

'ಪರಿವರ್ತನೆ ಜಗದ ನಿಯಮ' ಎನ್ನುವ ಮಾತು ಅಚಾನಕ್ ಮನಸ್ಸಿನಲ್ಲಿ ಮಿಂಚಿತು. ಕಳೆದುಹೋದ ಹೂವಿಗಾಗಿ ಮರುಗಬೇಕಿಲ್ಲ; ಹೊಸ ಬಣ್ಣವನ್ನು ಸ್ವೀಕರಿಸಬೇಕು. ಕಲೆ ಇಲ್ಲಿ ಕೇವಲ ದೃಶ್ಯವಲ್ಲ; ಅದು ಬೋಧನೆ.

ಮತ್ತೊಂದು ಕೋಣೆಯಲ್ಲಿ ಮೇಲಿನಿಂದ ಇಳಿಬಿಟ್ಟ ನೂರಾರು ಗಾಜಿನ ದೀಪಗಳು. ಗೋಡೆಗಳೆಲ್ಲ ಕನ್ನಡಿಗಳು. ಎತ್ತ ನೋಡಿದರೂ ಬೆಳಕು, ಕೆಳ ನೋಡಿದರೂ ಬೆಳಕು–ಅನಾದಿ ಅನಂತ ಪ್ರಕಾಶ.

ಒಂದು ದೀಪಕ್ಕೆ ಬೆರಳ ತುದಿ ಸೋಕಿಸಿದೆ. ಆ ಬೆಳಕು ಪಕ್ಕದ ದೀಪಕ್ಕೆ ಹರಡಿತು. ಕ್ಷಣಕಾಲದಲ್ಲಿ ಮಹಾಪ್ರವಾಹದಂತೆ ಕೋಣೆಯೆಲ್ಲ ಮಿನುಗಿತು. ನಂತರ ನಿಧಾನವಾಗಿ ಮಂದವಾಯಿತು.

ಅದು ಪಿಸುನುಡಿಯಿತು–'ನಿನ್ನಿಂದ ಏನು ಸಾಧ್ಯ?' ಎಂದು ಅಲ್ಲ, 'ನಿನ್ನಿಂದ ಏನೆಲ್ಲಾ ಸಾಧ್ಯ? ಎಂದು ಯೋಚಿಸು'. ಸಣ್ಣ ಸ್ಪರ್ಶವೂ ಇಲ್ಲಿ ದೊಡ್ಡಪ್ರಭಾವ ಬೀರುತ್ತದೆ.

ಸ್ಥಾವರಕ್ಕೆ ಅಳಿವುಂಟು... ಈ ಮ್ಯೂಸಿಯಂ ಗೋಡೆಯ ಅಂದ ಹೆಚ್ಚಿಸಲು ರಚಿಸಿದ ಚಿತ್ರಗಳಲ್ಲ. ಚಪ್ಪಾಳೆಗಾಗಿ ಸೃಷ್ಟಿಸಿದ ಪ್ರದರ್ಶನಗಳಲ್ಲ. ಇಲ್ಲಿ ನೀವು ಕೇವಲ ವೀಕ್ಷಕರಲ್ಲ; ಸಹ ಸೃಷ್ಟಿಕರ್ತರು.

ಕಲೆಯು ಇಲ್ಲಿ ನದಿಯಂತೆ ಹರಿಯುತ್ತದೆ. ನಿರಂತರ, ನೂತನ, ಸ್ವಚ್ಛ. ಕ್ಷಣಕ್ಷಣವೂ ಬದಲಾಗುತ್ತದೆ. ಅದನ್ನು ಹಿಡಿದುಕೊಳ್ಳಲು ಸಾಧ್ಯವಿಲ್ಲ. ಅನುಭವಿಸಬೇಕು. ಹೊರಬಂದಾಗ ಮನದಲ್ಲಿ ಅನುರಣಿಸಿದ ಮಾತು–'ಸ್ಥಾವರಕೆ ಅಳಿವುಂಟು; ಜಂಗಮಕ್ಕೆ ಇಲ್ಲ.'

ಡಿಜಿಟಲ್ ಕಲೆ ಇಲ್ಲಿ ಯಾಂತ್ರಿಕತೆಯ ಪ್ರದರ್ಶನವಲ್ಲ. ಅದು ಭಾವಗಳ ಮೆರವಣಿಗೆ. ಅಲೌಕಿಕದ ಧ್ಯಾನ. ಶುದ್ಧ ಸಂತೋಷ.

ಬೆಳಕಿನ ನಡುವೆ ನಾನು ನಿಂತಿದ್ದೆ. ಆದರೆ ನಿಜವಾಗಿ ನೋಡಿದರೆ, ಬೆಳಕೇ ನನ್ನೊಳಗೆ ನಿಂತಿತ್ತು! ❖

ಕಥೆ

ಆಶಾ ಜಗದೀಶ ಅವರ **ಒಂದು ಕತೆ, ಎರಡು ಮುಖ**

prajavani.net/short-story

ಕವನ

ರೂಪ ಹಾಸನ ಅವರ **ಪ್ರಶ್ನೋತ್ತರದಾಚೆಗೆ...**

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ವೈರುಧ್ಯಗಳ ಮುಖಾಮುಖಿ ಪಾರ್ಟಿ

• ಕೆ.ನರಸಿಂಹಮೂರ್ತಿ

ನಾಟಕದ ದೃಶ್ಯ — ಚಿತ್ರ: ಅನೂಪ್ ರಾಘ. ಟಿ.

ಆಧುನಿಕ ಮರಾಠಿ ರಂಗಭೂಮಿಯ ಪ್ರಮುಖ ಹೆಸರುಗಳಲ್ಲಿ ಒಂದಾದ ಮಹೇಶ್ ಎಲಕುಂಚವಾರ್ ಅವರು 70ರ ದಶಕದಲ್ಲಿ ರಚಿಸಿದ 'ಪಾರ್ಟಿ'–ಮರಾಠಿ ಸಾಹಿತ್ಯ-ರಂಗಭೂಮಿಯಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾದ ಈ ನಾಟಕ ಇದೀಗ ಕನ್ನಡಕ್ಕೂ ಬಂದಿದೆ. ಅನುವಾದಗೊಂಡ ಕೆಲವೇ ದಿನಗಳಲ್ಲಿ ರಂಗಮಂಚವೇರಿರುವುದು, ಕೇವಲ ಪಠ್ಯದಿಂದ ಪ್ರದರ್ಶನದತ್ತ ನಡೆದ ಅದರ ವೇಗದ ಪಯಣವೇ ಈ ಪ್ರಯತ್ನದ ಉತ್ಸಾಹವನ್ನು ಸೂಚಿಸುತ್ತದೆ.

ಮೈಸೂರಿನ 'ನಿರಂತರ ಫೌಂಡೇಶನ್'ನ ಪ್ರಸಾದ್ ಕುಂದೂರು ಆರಂಭದಲ್ಲಿ ಅನುವಾದವನ್ನು ಪಠ್ಯ ಮಟ್ಟದಲ್ಲೇ ಸೀಮಿತಗೊಳಿಸುವ ಉದ್ದೇಶ ಹೊಂದಿದ್ದರು. ಆದರೆ ಅನುವಾದದ ಓದಿನ ಸಂದರ್ಭದಲ್ಲೇ, ಅದರ ಒಳಹುರುಪು ಮತ್ತು ರಂಗಸಾಧ್ಯತೆಗಳನ್ನು ಗುರುತಿಸಿದ ಸಂಸ್ಥೆಯ ಹವ್ಯಾಸಿ ರಂಗತಂಡ ಒಮ್ಮತದಿಂದ ಅದನ್ನು ವೇದಿಕೆಗೆ ತರಲು ಮುಂದಾಯಿತು.

ನಾಟಕದ ಕೇಂದ್ರ 'ಪಾರ್ಟಿ'. ಪ್ರತಿಷ್ಠೆಗಾಗಿ ಮನೆಯಲ್ಲಿ ಪಾರ್ಟಿ ಏರ್ಪಡಿಸುವ ದಮಯಂತಿ; ಅದರ ಅಸಂಗತತೆಯನ್ನು ತೀಕ್ಷ್ಣವಾಗಿ ಬಿಚ್ಚಿಡುವ ಅವಳ ನಿಸ್ಪೃಹ ಡಾಕ್ಟರ್ ಪತಿ; ಪ್ರಶಸ್ತಿಗಳಿಗಾಗಿ ಕೃತಕ ಪ್ರೀತಿ ತೋರುವ ಲೇಖಕ ದಿವಾಕರ್ ಬರ್ವೆ ಮತ್ತು ಆತನ ಪ್ರೀತಿಗಾಗಿ ತನ್ನದೇ ವ್ಯಕ್ತಿತ್ವವನ್ನು ಕರಗಿಸಿಕೊಳ್ಳುವ ಮೋಹಿನಿ; ಆಹ್ವಾನವಿಲ್ಲದೆ ಬರುವ ಮದ್ಯಪ್ರಿಯೆ ಸೋನು ಮತ್ತು ಆಕೆಯ ನಿದ್ರಪ್ರಿಯ ಗಂಡ ನರೇಂದ್ರ; ಸಾಂಗತ್ಯಕ್ಕಾಗಿ ಅಲೆದಾಡುವ ವೃಂದಾ; ಇವರ ನಡುವೆ ಅಪಹಾಸ್ಯಕ್ಕೀಡಾಗುವ ಯುವ ಲೇಖಕ ಆಗಾಶೆ... ರಂಗದ ಮೇಲೆ ಕಾಣಿಸದಿದ್ದರೂ ಕೊನೆಯವರೆಗೂ ತನ್ನ ಹಾಜರಾತಿ ತಿಳಿಸುತ್ತಲೇ ಇರುವ ಹೋರಾಟಗಾರ ಅಮೃತ್. ಹೀಗೆ ಹದಿಮೂರು ಪಾತ್ರಗಳ ಜಾಲದಲ್ಲಿ ನಾಟಕ ಹಲವು ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಸಂಘರ್ಷಗಳನ್ನು ಕಟ್ಟುತ್ತದೆ.

ಮೇಲ್ವರ್ಗದ ಹೊಳಪಿನ ಒಳಗೆ ಅದುಮಿಟ್ಟ ಖಾಲಿತನ, ತಳವರ್ಗದ ಹೋರಾಟದ ನಿರ್ಗತಿಕತೆ–ಇವೆರಡನ್ನೂ ನಾಟಕ ಒಂದೇ ಬೆಳಕಿನಲ್ಲಿ ನಿಲ್ಲಿಸುತ್ತದೆ. ಬಡವರು–ಶ್ರೀಮಂತರು, ಬಂಡವಾಳಶಾಹಿಗಳು–ಕಮ್ಯುನಿಸ್ಟರು, ಮೋಹಿತರು–ನಿರ್ಮೋಹಿಗಳು, ಭಾವುಕರು–ನಿರ್ಲಿಪ್ತರು... ಹೀಗೆ ವೈರುಧ್ಯಗಳ ಸರಪಳಿ ಇಲ್ಲಿ ನಿರಂತರ ಮುಖಾಮುಖಿಯಾಗುತ್ತದೆ. ಪಾರ್ಟಿ ಸಂಭ್ರಮದ ಸಂಕೇತವಾದರೂ, ಅದರ ಬೆಳಕಿನಲ್ಲಿ ಅನಾವರಣಗೊಳ್ಳುವುದು ಸಂಬಂಧಗಳ ಅಸಹಜತೆ, ಆತ್ಮಸಂಘರ್ಷ ಮತ್ತು ಅಂತರಂಗದ ಖಾಲಿತನ.

ಒಂದು ಗಂಟೆ ನಲವತ್ತು ನಿಮಿಷಗಳ ಈ ನಾಟಕವು ದಮಯಂತಿಯ ಮನೆಯಲ್ಲಿ ನಡೆಯುವ ಒಂದು ಸಂಜೆ ಪಾರ್ಟಿಯನ್ನೇ ಕೇಂದ್ರೀಕರಿಸುತ್ತದೆ. ಚುಚ್ಚುವ ವ್ಯಂಗ್ಯ, ಚುರುಕಿನ ಸಂಭಾಷಣೆಗಳು ಮತ್ತು ಮಾತಿನ ಆಚೀಚೆಯ ಅರ್ಥಗಳನ್ನು ಹೊತ್ತಿರುವ ನಾಟಕೀಯ ಭಾಷೆ–ಇವೆಲ್ಲದರ ಮೂಲಕ ನಾಟಕಕಾರನ ವಿಶಿಷ್ಟ ಶಕ್ತಿ ವ್ಯಕ್ತವಾಗುತ್ತದೆ. ಈ ಅಡಗಿರುವ ಅರ್ಥಗಳನ್ನು ನಟರ ಅಭಿನಯದ ಮೂಲಕ ಹೊರತರುವಲ್ಲಿ ನಿರ್ದೇಶಕ ಚಿದಂಬರರಾವ್ ಜಂಬೆಯವರ ಹಿಡಿತ ಸ್ಪಷ್ಟವಾಗಿ ಗೋಚರಿಸುತ್ತದೆ.

ನಟರೆಲ್ಲರೂ ಹವ್ಯಾಸಿಗಳು. ತಮ್ಮ ತಮ್ಮ ವೃತ್ತಿ, ಕುಟುಂಬ ಜವಾಬ್ದಾರಿಗಳ ನಡುವೆ ನಾಟಕವನ್ನು ಆರಿಸಿಕೊಂಡವರು. 'ನಿರಂತರ' ಸಂಸ್ಥೆಯೊಂದಿಗೆ ಬೆಳೆದ ಇವರಿಗೆ, ವಾಸ್ತವವಾದಿ ನಾಟಕದ ಈ ಹೊಸ ದೇಹಭಾಷೆ ಒಂದು ಸವಾಲಾಗಿದ್ದರೂ, ಅದನ್ನು ಸ್ವೀಕರಿಸಿ ಅಭಿವ್ಯಕ್ತಿಯಲ್ಲಿ ಅನುವಾದಿಸಿರುವುದು ನಾಟಕದ ಮುಖ್ಯ ಶಕ್ತಿಗಳಲ್ಲಿ ಒಂದಾಗಿದೆ.

ಆರಂಭದ ಸನ್ನಿವೇಶದಲ್ಲಿ ಬೇಕಾದ ಭಾವತೀವ್ರತೆ ಸ್ವಲ್ಪ ತಡವಾಗಿ ಕಟ್ಟಿಕೊಳ್ಳುತ್ತದೆ ಎಂಬ ಭಾವ ಮೂಡುತ್ತದೆ. ಸಂಭಾಷಣೆಯ ಮೇಲೆ ಹೆಚ್ಚು ಅವಲಂಬಿತವಾಗಿರುವ ಆರಂಭ, ಕ್ಷಣಿಕವಾಗಿ ನಾಟಕದ ಹರಿವನ್ನು ನಿಧಾನಗೊಳಿಸಿದರೂ, ಮುಂದಿನ ಸನ್ನಿವೇಶಗಳಲ್ಲಿ ನಟರ ಪಳಗಿದ ಅಭಿನಯವೇ ಅದನ್ನು ಸಮತೋಲನಕ್ಕೆ ತರುತ್ತದೆ.

ಮೋಹಿನಿಯ ಪಾತ್ರದಲ್ಲಿ ಹಿಮ ಅವರ ಅಭಿನಯ ವಿಶೇಷವಾಗಿ ಮನಸ್ಸಿನಲ್ಲಿ ಉಳಿಯುತ್ತದೆ–ಅನಿಯಂತ್ರಿತ, ಸಹಜ ಮತ್ತು ಆಂತರಿಕ ಒತ್ತಡಗಳನ್ನು ಹೊತ್ತಿರುವಂತೆ. ಡಾಕ್ಟರ್ ಪಾತ್ರದ ಸೋಮಶೇಖರ್, ಪತ್ರಕರ್ತ ಜೋಗದಂಡ್ ಪಾತ್ರದ ನಿರ್ವಹಣೆ ಗಮನ ಸೆಳೆಯುತ್ತದೆ. ಪತ್ನಿ–ಪತಿ–ಪರಪುರುಷರ ನಡುವಿನ ಸೂಕ್ಷ್ಮ ತ್ರಿಕೋನ ಸಂಬಂಧದಲ್ಲಿ ಆಕರ್ಷ, ಯಶಸ್ವಿನಿ ಮತ್ತು ಸೋಮಶೇಖರ್ ಅಭಿನಯ ಮಿಂಚುತ್ತದೆ.

'ಮಹತ್ವಾಕಾಂಕ್ಷೆ ಎಂಬುದು ನಿಮಗೆ ನೀವೇ ಮಾಡಿಕೊಂಡ ಗಾಯ', 'ಸಾಹಿತ್ಯದಲ್ಲಿ ಒರಿಜಿನಾಲಿಟಿ ಅಂದ್ರೆ ಜಾಣ ನಕಲು'–ಇಂಥ ಸಂಭಾಷಣೆಗಳು ನಾಟಕದ ಆಲೋಚನಾ ವಿಸ್ತಾರವನ್ನೇ ಬಿಚ್ಚಿಡುತ್ತವೆ.

ಕಿರಣ್ ಬಿ.ಕೆ ಅವರ ಸಂಗೀತ ಸನ್ನಿವೇಶಗಳ ಭಾವತೀವ್ರತೆಯನ್ನು ಮೃದುವಾಗಿ ದಾಟಿಸುತ್ತದೆ. ವಸ್ತ್ರ ವಿನ್ಯಾಸ ಮತ್ತು ರಂಗ ವಿನ್ಯಾಸದಲ್ಲಿ ಮರಿನಾ ಪ್ರಸಾದ್ ಅವರ ಕೆಲಸ ಗಮನಾರ್ಹ. ನೆರಳು–ಬೆಳಕಿನ ವಿನ್ಯಾಸವು ಭಾವಗಳ ಏರಿಳಿತಕ್ಕೆ ತಕ್ಕಂತೆ ಓಲಾಡುತ್ತಾ, ನಾಟಕದ ಅಂತರಂಗವನ್ನು ದೃಶ್ಯಮಾಡುತ್ತದೆ.

ವಸ್ತು ಮತ್ತು ಅಭಿವ್ಯಕ್ತಿಯ ಹೊಸತನವನ್ನು ಒಟ್ಟುಗೂಡಿಸಿರುವ 'ಪಾರ್ಟಿ'–ನಟರಿಗೆ ಹೊಸ ಅಭ್ಯಾಸ, ಪ್ರೇಕ್ಷಕರಿಗೆ ಹೊಸ ಅನುಭವ. ಕೇವಲ ಒಂದು ಪಾರ್ಟಿಯ ಕಥೆಯಲ್ಲ, ಅದು ಮಾನವ ಸಂಬಂಧಗಳ ಒಳಹೊಕ್ಕು ನೋಡುವ ಕನ್ನಡಿ. ❖

ಮಾರಾಟಕ್ಕೆ ಸಿದ್ಧವಾದ ಅಪ್ಪೆಮಿಡಿ

ಮಿಡಿ ಉಪ್ಪಿನಕಾಯಿಗೆ ಮಿಡಿಯುವ ಮನ

8ನೇ ಪುಟದಿಂದ..

ಮಾವಿನಕಾಯಿಯ ತೊಟ್ಟು ಮುರಿದಾಗ ಹೊರಬರುವ ಸೊನೆ, ಉಪ್ಪಿನಕಾಯಿಗೆ ನೈಸರ್ಗಿಕ ರಕ್ಷಣಾ ಕವಚ. ಇದು ಮಿಡಿಯ ಬಾಳಿಕೆಯನ್ನು ಹೆಚ್ಚಿಸುತ್ತದೆ. ಕೆಲವರು ಇದನ್ನು ಬೆಂಕಿಯಿಂದ ಪರೀಕ್ಷಿಸುವುದೂ ಇದೆ. ಒಂದು ಮಿಡಿಯೇ ಇಡೀ ಊಟಕ್ಕೆ ಪರಿಮಳ ತುಂಬುವಷ್ಟು ಶಕ್ತಿಯಿದೆ.

ಒಂದೇ ಕಾಲದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಂಡುಬಂದ ಅಪ್ಪೆಮಿಡಿ ಮರಗಳು ಇಂದು ಕಡಿಮೆಯಾಗುತ್ತಿವೆ. ಕೊಂಬೆ ಕತ್ತರಿಸುವುದು, ಅತಿಯಾದ ಕೊಯ್ಯುವಿಕೆ, ಅಭಿವೃದ್ಧಿಯ ಒತ್ತಡ–ಇವೆಲ್ಲಾ ಈ ತಳಿಗಳಿಗೆ ಅಪಾಯ ತಂದಿವೆ. ಮರ ಏರಿ ಮಿಡಿ ಕೊಯ್ಯುವ ಕೌಶಲ್ಯವೂ ನಿಧಾನವಾಗಿ ಮರೆಯಾಗುತ್ತಿದೆ.

ಈ ಅಪಾಯವನ್ನು ಅರಿತ ಕೆಲ ರೈತರು, ಸಂಶೋಧಕರು ಮತ್ತು ಪರಿಸರ ತಜ್ಞರು ಅಪರೂಪದ ಮಿಡಿ ತಳಿಗಳನ್ನು ಗುರುತಿಸಿ ಸಂರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇದು ಕೇವಲ ಕೃಷಿಯಲ್ಲ; ಒಂದು ಸಂಸ್ಕೃತಿಯ ಉಳಿವು.

ಮಾವಿನ ಮಿಡಿ ಕೇವಲ ಉಪ್ಪಿನಕಾಯಿ ಅಲ್ಲ. ಅದು ಮಲೆನಾಡಿನ ನೆನಪು, ಮಹಿಳೆಯರ ಶ್ರಮ, ಪ್ರಕೃತಿಯ ಕೊಡುಗೆ.

ಈ ರುಚಿ ಮುಂದಿನ ತಲೆಮಾರಿಗೆ ತಲುಪಬೇಕಾದರೆ, ಅದರ ಮೂಲವಾದ ಮರಗಳನ್ನು ಉಳಿಸಬೇಕು. ಮಿಡಿ ಉಳಿಯಬೇಕಾದರೆ, ಮಿಡಿಮರಗಳು ಉಳಿಯಲೇಬೇಕು. ❖

ಹಸಿ ಅಪ್ಪೆಮಿಡಿ

ಮೊದಲ ಓದು

ತಿರುಚಿದ ಇತಿಹಾಸ ತಿದ್ದುವ ಪ್ರಯತ್ನ



ಕರಾವಳಿಯ ಚರಿತ್ರೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್
ಲೇ: ನವೀನ್ ಸೂರಿಂಜೆ
ಪ್ರ: ನವಕರ್ನಾಟಕ
ಸಂ: 080-22161900

ಶೀರ್ಷಿಕೆಯೇ ಹೇಳುವಂತೆ ಕರಾವಳಿಯ ಇತಿಹಾಸದಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಅವರ ಕೊಡುಗೆಯನ್ನು ಪರಿಚಯಿಸುವ ಕೃತಿಯಿದು. ಮಲಬಾರ್ ಪ್ರದೇಶದಿಂದ ಹಿಡಿದು ಉತ್ತರ ಕನ್ನಡದವರೆಗೂ ಆಡಳಿತ ನಡೆಸಿದ್ದ ಇವರಿಬ್ಬರು, ಬ್ರಿಟಿಷರ ವಿರುದ್ಧ ಮಾಡಿದ ಹೋರಾಟ, ಸ್ಥಳೀಯ ರಾಜರೊಂದಿಗೆ ಕಾಯ್ದುಕೊಂಡಿದ್ದ ಸೌಹಾರ್ದ ಸಂಬಂಧ, ಧರ್ಮಗಳ ನಡುವೆ ಸೌಹಾರ್ದತೆ ನೆಲೆಸಲು ಮಾಡಿದ್ದ ಪ್ರಯತ್ನಗಳನ್ನು ದಾಖಲೆಗಳ ಸಮೇತ ಚಿತ್ರಿಸಲಾಗಿದೆ. ಕರಾವಳಿಯ ಬ್ರಾಹ್ಮಣ, ಜೈನ, ಒಕ್ಕಲಿಗ ಹಾಗೂ ಬಂಟ ಸಮುದಾಯಗಳೊಂದಿಗೆ ಇವರಿಗಿದ್ದ ಸ್ನೇಹ ಸಂಬಂಧಗಳ ಕುರಿತಾದ ದಾಖಲೆಗಳನ್ನು ನೀಡಲಾಗಿದೆ. ಬದಲಾದ ಸನ್ನಿವೇಶದಲ್ಲಿ ಹೈದರ್ ಹಾಗೂ ಟಿಪ್ಪುವನ್ನು ಕೋಮುವಾದದ ಕನ್ನಡಿಯಿಂದ ನೋಡುವ ಅಪಾಯಗಳನ್ನೂ ಪುಸ್ತಕ ತೆರೆದಿಡುತ್ತದೆ.

ಟಿಪ್ಪು ಕೋಮುವಾದಿ, ಕ್ರಿಶ್ಚಿಯನ್ ವಿರೋಧಿ, ಹಿಂದೂ ವಿರೋಧಿ, ದೇವಸ್ಥಾನಗಳ ಭಂಜಕ ಎನ್ನುವ ಆರೋಪಗಳಿಗೂ ಇಲ್ಲಿ ಉತ್ತರವಿದೆ. ರಾಜಕೀಯ ಸಿದ್ಧಾಂತಗಳಿಗೆ ಸಿಲುಕಿದ, ತಿರುಚಿದ ಇತಿಹಾಸವನ್ನು ತಿದ್ದುವ ಪ್ರಯತ್ನವನ್ನು ಲೇಖಕ ಮಾಡಿದ್ದಾರೆ. ಪ್ರತಿಯೊಂದು ಅಧ್ಯಾಯಕ್ಕೂ ಆಧಾರವನ್ನು ಉಲ್ಲೇಖಿಸಲಾಗಿದೆ. ಇತಿಹಾಸ-ವರ್ತಮಾನದ 35 ಪುಸ್ತಕಗಳನ್ನು ಅಧ್ಯಯನ ಮಾಡಿ ಈ ಕೃತಿ ರಚಿಸಲಾಗಿದೆ ಎಂದು ಲೇಖಕರೇ ಹೇಳಿಕೊಂಡಿದ್ದಾರೆ.

ಇವರಿಬ್ಬರು ಆಗಿನ ಕಾಲದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕುವ ಸಾಹಸ ಮಾಡಿದ್ದು, ಸಮಾಜ ಸುಧಾರಣೆ, ಸಮಸಮಾಜದ ನಿರ್ಮಾಣಕ್ಕೆ ಹಾಕಿದ ಕ್ರಾಂತಿಕಾರಿ ಹೆಜ್ಜೆಗಳ ಉಲ್ಲೇಖವಿದೆ. ಕಪ್ಪ ಕೊಡಲಾಗದ ರಾಜರುಗಳಿಗೆ ವಿನಾಯಿತಿ, ಅವರೊಂದಿಗೆ ಕ್ರೂರವಾಗಿ ನಡೆದುಕೊಂಡ ತನ್ನ ಪ್ರತಿನಿಧಿಗಳನ್ನೇ ವಜಾ ಮಾಡಿದ ನಿದರ್ಶನಗಳನ್ನು ಇಲ್ಲಿ ನೀಡಲಾಗಿದೆ. ಮಠ ಹಾಗೂ ಸ್ವಾಮೀಜಿಗಳೊಂದಿಗೆ ಇದ್ದ ಆಪ್ತ ಸಂಬಂಧಗಳನ್ನೂ ಲೇಖಕ ದಾಖಲಿಸಿದ್ದಾರೆ. ಸ್ಥಳೀಯ ಹೋರಾಟಗಳಿಗೆ ಟಿಪ್ಪುವೇ ಸ್ಫೂರ್ತಿಯಾದ ನಿದರ್ಶನಗಳ ದಾಖಲೆಯೂ ಇದೆ.

ಪುಟ: 136 ₹180

ಬಂಜಾರ ಬದುಕಿನ ಅನಾವರಣ



ಕೊಳ್ಳ
ಲೇ: ಡಾ.ಕೆ.ಬಿ. ಪವಾರ
ಪ್ರ: ಕಣ್ವ
ಸಂ: 08029550757

ಬಿಟ್ಟುಂದೀವಿಯೆ ನಮ್ಮ ಹುಟ್ಟೂರನ
ಜನ್ಮಕೊಟ್ಟೂರನ| ಧನ್ಯವಿದ್ದೂರನ|

ಎಂಬ ಸಾಲುಗಳಿಂದ 'ಕೊಳ್ಳ' ಕಾದಂಬರಿ ಪ್ರಾರಂಭವಾಗುತ್ತದೆ. ಇಡೀ ಕೃತಿ ಊರೂರು ಅಲೆಯುತ್ತ, ಅಲೆಮಾರಿ ಬದುಕು ಸವೆಸುವ ಬಂಜಾರ ಸಮುದಾಯದವರ ಚಿತ್ರಣವನ್ನು ಕಟ್ಟಿಕೊಂಡುವುದರಿಂದ, ಕಾದಂಬರಿ ಓದಿ ಮುಗಿಸುವ ಹೊತ್ತಿಗೆ ಮೇಲಿನ ಸಾಲುಗಳು ಬಹಳ ಅರ್ಥಪೂರ್ಣ ಅನ್ನಿಸುತ್ತವೆ.

ಬಂಜಾರ ಯುವಕ ಇಸರಾನ ಕಥೆಯೊಂದಿಗೆ ಈ ಕೃತಿ ತೆರೆದುಕೊಳ್ಳುತ್ತದೆ. ಅಲೆಮಾರಿಯಾಗಿ ದನ, ಕುದುರೆಗಳ ಜೊತೆ ಅಲೆದಾಡುವ ಈತ ಆಮಗೋತ ಕುಟುಂಬಕ್ಕೆ ಸೇರಿದವನು. ಈತನ ಪತ್ನಿ ಮೂಂಗೀಬಾಯಿ, ಮಕ್ಕಳಾದ ಹೋಬ್ಯಾ, ಖೂಬ್ಯಾ ಅವರ ಬದುಕು, ಬವಣೆಗಳೊಂದಿಗೆ ಕಥೆ ಸಾಗುತ್ತದೆ. ಈ ಕುಟುಂಬದ ಪೂರ್ವಜರನ್ನು ಪರಿಚಯಿಸುತ್ತ, ಸಮುದಾಯದ ಇತಿಹಾಸ ಹೇಳಿಕೊಂಡು ಹೋದ ಶೈಲಿ ಸೊಗಸಾಗಿದೆ. ಮೂರು ತಲೆಮಾರಿನ ಕಥೆ ಇಲ್ಲಿ ಬರುತ್ತದೆ.

ಮಧ್ಯಪ್ರದೇಶದಲ್ಲಿ ಪ್ರಾರಂಭವಾಗುವ ಕಥೆ ಬ್ರಿಟಿಷ್ ಆಳ್ವಿಕೆ ಕಾಲದಲ್ಲಿನ ಬಂಜಾರರ ಸ್ಥಿತಿಗತಿಗಳನ್ನು ಪರಿಚಯಿಸುತ್ತದೆ. ಸ್ವಾತಂತ್ರ ಹೋರಾಟದಲ್ಲಿ ಹೋರಾಟಗಾರರಿಗೆ ಮದ್ದುಗುಂಡುಗಳನ್ನು ಪೂರೈಸುತ್ತ ಈ ಸಮುದಾಯದವರು ದೇಶಭಕ್ತಿ ಮೆರೆದ ಬಗೆಯನ್ನು ವಿವರಿಸುತ್ತದೆ. ಲೇಖಕ ತಾಂಡಾದಲ್ಲಿನ ಅನೇಕ ಘಟನೆ, ಸಂಪ್ರದಾಯಗಳನ್ನು ಬಹಳ ಸರಳವಾಗಿ ಓದುಗನಿಗೆ ದಾಟಿಸಿದ್ದಾರೆ.

ಕೃತಿಯಲ್ಲಿ ಲಂಬಾಣಿ ಸಮುದಾಯದ ಹಾಡುಗಳನ್ನು ಯಥಾವತ್ತಾಗಿ ಬಳಸಿದ್ದಾರೆ. ಅನಕ್ಷರಸ್ಥರಾಗಿದ್ದರೂ ಇಲ್ಲಿನ ಪಾತ್ರಗಳಿಗಿದ್ದ ಸಾಹಿತ್ಯ ಪ್ರಜ್ಞೆ ಅಚ್ಚರಿ ಮೂಡಿಸುತ್ತದೆ. ಜಾನುವಾರುಗಳ ಜತೆ ಲಂಬಾಣಿಗರ ಒಡನಾಡ ಬಹಳ ಆಪ್ಯವಾಗಿದೆ. ಒಟ್ಟಾರೆಯಾಗಿ ಕಥನರೂಪದಲ್ಲಿ ಲಂಬಾಣಿ ಇತಿಹಾಸ ಓದಿದ ಅನುಭವ ನೀಡುವ ಕೃತಿ, ಅಧ್ಯಯನಕ್ಕೂ ಯೋಗ್ಯವಾಗಿದೆ.

ಪುಟ: 580 ₹582

ಪ್ರೀತಿ-ಮೈತ್ರಿಯ ಹುಡುಕಾಟದಲ್ಲಿ



ಮನುಷ್ಯ ಮತ್ತು ಪ್ರೀತಿ
ಲೇ: ಸುಜಾತಾ ಚಲವಾದಿ
ಪ್ರ: ಸಪ್ನ ಬುಕ್ ಹೌಸ್
ಸಂ: 9739299731

ಸುಜಾತಾ ಚಲವಾದಿ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಮನುಷ್ಯ ಮತ್ತು ಪ್ರೀತಿ' ಅವರ ಮೊದಲ ಪ್ರಬಂಧ ಸಂಕಲನ. ಇದರಲ್ಲಿ ಒಟ್ಟು 12 ಪ್ರಬಂಧಗಳಿವೆ.

ಲೇಖಕಿ ಮುನ್ನುಡಿಯಲ್ಲಿ ಹೇಳಿಕೊಂಡಂತೆ ಅವರ ನೋವು, ನಲಿವು, ಹಸಿವು, ಬಡತನ, ದಾರಿದ್ರ್ಯದ ನಿವಾರಣೆ, ಪ್ರೀತಿ-ಮೈತ್ರಿಯ ಹುಡುಕಾಟದ ಜೊತೆಗೆ ಪ್ರಾಣಿ-ಪಕ್ಷಿ ಸಂಕುಲದ ಒಡನಾಟದಿಂದ ನಾವು ಕಲಿಯಬಹುದಾದ ಪಾಠಗಳನ್ನು ಇಲ್ಲಿ ಲಘು ಬರಹದಲ್ಲಿ ಹೇಳಲು ಪ್ರಯತ್ನಿಸಿದ್ದಾರೆ.

ಈ ಸಂಕಲನದಲ್ಲಿರುವ ಅಪ್ಪ, ಉಗುರು ಬಣ್ಣ, ಹೆಣ್ಣೆಂಬ ನಾನೂ, ಮನುಷ್ಯ ಮತ್ತು ಪ್ರೀತಿ ಹೆಸರಿನ ಪ್ರಬಂಧಗಳಲ್ಲಿ ಲೇಖಕಿ ತಮ್ಮ ಕುಟುಂಬದ ಅನುಭವಗಳನ್ನು ಹೆಕ್ಕಿ ತೆಗೆದಿದ್ದಾರೆ. ಇದರಲ್ಲಿ ಅವರ ಬಾಲ್ಯ, ಅಪ್ಪ, ಅಮ್ಮನ ಕುರಿತಾದ ನೆನಪುಗಳಿವೆ.

ಗುಬ್ಬಿ ಮರಿ, ಡೊಕಾರಿ ಪಾತರಗಿತ್ತಿ, ವೇಷತೊಟ್ಟ ಮಾರ್ಜಾಲ, ಕಾಗೆಯೊಂದಗುಳ ಕಂಡರೆ ಪ್ರಬಂಧಗಳು ಪ್ರಾಣಿ ಮತ್ತು ಪಕ್ಷಿಗಳ ಒಡನಾಟದ ಕುರಿತಾಗಿವೆ. ಇದರಲ್ಲಿನ ಕಂಡಕ್ಟರನ ಪಜೀತಿ ಪ್ರಬಂಧವು ನಗು ಉಕ್ಕಿಸಿದರೆ, 'ಅವಾಂತರ', 'ಮತ್ತೆ ಮತ್ತೆ ನೆನಪಾಗುತ್ತಾನೆ' ಮನುಷ್ಯತ್ವದ ವಿವಿಧ ಮಜಲುಗಳನ್ನು ತೋರಿಸುವ ಪ್ರಯತ್ನ ಮಾಡುತ್ತದೆ.

ಈ ಸಂಕಲನದ ಎಲ್ಲಾ ಪ್ರಬಂಧಗಳು ಕೂಡ ಲೇಖಕಿಯ ನೆನಪುಗಳಿಂದ ಅಕ್ಷರರೂಪಕ್ಕೆ ಇಳಿದಿವೆ. ಅವರ ಅನುಭವ ಮತ್ತು ಜೀವನ ಪಯಣವನ್ನು ಇಲ್ಲಿ ಮೆಲುಕು ಹಾಕಿಕೊಂಡಿದ್ದಾರೆ. ಕೆಲವು ಪ್ರಬಂಧಗಳು ಲೇಖನದ ರೂಪದಲ್ಲಿದ್ದರೆ, ಮತ್ತೆ ಕೆಲವು ಕಥೆ ರೀತಿಯ ನಿರೂಪಣೆಯಲ್ಲಿವೆ. ಹಲವು ಪ್ರಬಂಧಗಳು ನೀತಿ ಪಾಠದಂತಿದ್ದರೆ, ಮತ್ತೆ ಕೆಲವು ಬರಹಗಳಲ್ಲಿ ಓದುಗನಿಗೆ ಉತ್ತರ ಕಂಡುಕೊಳ್ಳಲು ಬಿಡಲಾಗಿದೆ.

ಪ್ರಬಂಧಗಳ ವಿಷಯದ ಆಯ್ಕೆಯಲ್ಲಿ ಅಷ್ಟೇನೂ ವೈವಿಧ್ಯ ಕಾಣದಿದ್ದರೂ, ಸರಳ ನಿರೂಪಣೆ ಹಾಗೂ ಪ್ರಬಂಧಗಳ ನಡುವೆ ಸೇರಿಕೊಂಡಿರುವ ಉತ್ತರ ಕರ್ನಾಟಕ ಭಾಷಾ ಸೊಡಗು ಗಮನ ಸೆಳೆಯುತ್ತದೆ.

ಪುಟ: 132 ₹125

ಪ್ರವಾಸ

ಸೂರ್ಯಾಸ್ತದ ಸಂದರ್ಭದಲ್ಲಿ ಚಿನ್ನದಂತೆ ಹೊಳೆಯುವ ಕೋಟೆಯ ಅವಶೇಷ

ಭಾರತದ ಉತ್ತರದಲ್ಲಿರುವ ರಾಜಸ್ಥಾನದ ಈ ಪ್ರದೇಶ ಕೇವಲ ಪ್ರವಾಸಿ ತಾಣವಲ್ಲ. 700 ಎಕರೆ ವ್ಯಾಪ್ತಿಯಲ್ಲಿ ಹಬ್ಬಿರುವ 13 ಕಿಲೋಮೀಟರ್ ಸುತ್ತಳತೆಯ ಈ ಕೋಟೆಯೊಳಗೆ ಹರಡಿರುವ ಕಥೆಗಳು ನೂರಾರು. ರಾಣಿ ಪದ್ಮಾವತಿಯ ಕಥೆಯ ಜೊತೆಗೆ ಅಲ್ಲಿನ ಕಲ್ಲುಗಳು ಪಿಸುಗುಟ್ಟುವ ಕಥೆಗಳನ್ನು ಆಲಿಸಿಕೊಂಡು ಹೆಜ್ಜೆ ಹಾಕಿರುವ ಲೇಖಕರು ಅವುಗಳಿಗೆ ಅಕ್ಷರ ರೂಪ ನೀಡಿದ್ದಾರೆ...

ಚಿತ್ತೋರ್‌ಗಢ ಏಳು ಸುತ್ತಿನ ಕೋಟೆ

ಇದುವೇ ನೋಡಿ ವಿಜಯ ಸ್ತಂಭ...

ಕಣ್ಣು ಹಾಯಿಸಿದಷ್ಟೂ ದೂರ ಹಾಸಿಕೊಂಡಿದೆ ಈ ಕೋಟೆ...

• ವಿ.ಶ್ರೀನಿವಾಸ

ಭಾರತದ ಇತಿಹಾಸದಲ್ಲಿ ಶೌರ್ಯ, ತ್ಯಾಗ ಮತ್ತು ಆತ್ಮಗೌರವ ಒಂದೇ ದಾರಿಯಲ್ಲಿ ಸೇರುವ ಕ್ಷಣಗಳನ್ನು ಹುಡುಕಬೇಕಾದರೆ, ರಾಜಸ್ಥಾನದ ನೆಲ ನಮ್ಮನ್ನು ತಪ್ಪದೇ ಕರೆಯುತ್ತದೆ. ಆ ನೆಲದ ಹೃದಯದಲ್ಲಿ, ಕಲ್ಲಿನೊಳಗೆ ಕಥೆಗಳನ್ನೇ ಕೆತ್ತಿಕೊಂಡಂತೆ ಎದ್ದು ನಿಂತಿರುವುದು ಚಿತ್ತೋರ್‌ಗಢ. ಇದು ಕೇವಲ ಕೋಟೆಯಲ್ಲ, ಒಂದು ಸಂಸ್ಕೃತಿಯ ಉಸಿರು.

ಗುಡ್ಡದ ಮೇಲೇರಿದಂತೆ ಗಾಳಿಯೇ ನಿಧಾನವಾಗಿ ಭೂತಕಾಲದ ಕಥೆಯನ್ನು ಹೇಳಲು ಶುರುಮಾಡುತ್ತದೆ. ಸುಮಾರು 700 ಎಕರೆ ವ್ಯಾಪ್ತಿಯಲ್ಲಿ ಹರಡಿರುವ, 180 ಮೀಟರ್ ಎತ್ತರದ ಬೆಟ್ಟದ ಮೇಲೆ ಹಾಸಿಕೊಂಡಿರುವ ಈ ಮಹಾಕೋಟೆ 13 ಕಿಲೋಮೀಟರ್ ಸುತ್ತಳತೆಯೊಂದಿಗೆ ತನ್ನ ವೈಭವವನ್ನು ನಿವೇದಿಸುತ್ತದೆ. ಏಳು ಮಹಾದ್ವಾರಗಳನ್ನು ದಾಟುತ್ತಾ ಒಳನುಗ್ಗುವಾಗ, ಪ್ರತಿಯೊಂದು ದ್ವಾರವೂ ಶತ್ರುಗಳನ್ನು ತಡೆಯುವ ಕಥೆಯಷ್ಟೇ ಅಲ್ಲ; ಕಾಲವನ್ನು ತಡೆಯಲು ಮಾಡಿದ ಪ್ರಯತ್ನದ ಗುರುತುಗಳಂತೆ ಕಾಣುತ್ತದೆ.

ಈ ಕೋಟೆಯ ಮೂಲ 7ನೇ ಶತಮಾನದಲ್ಲಿ ಮೋರಿ ರಾಜವಂಶದ ಕಾಲಕ್ಕೆ ಹೋಗಿ ತಲುಪುತ್ತದೆ. ನಂತರ ರಜಪೂತ ರಾಜರು, ವಿಶೇಷವಾಗಿ ರಾಣಾ ಕುಂಭ ಅವರ ಕಾಲದಲ್ಲಿ ಇದು ತನ್ನ ಭದ್ರತೆ ಮತ್ತು ವೈಭವ ಎರಡರಲ್ಲೂ ಶಿಖರಕ್ಕೇರಿತು. ಕೋಟೆಯೊಳಗೆ ಅರಮನೆಗಳು, ದೇವಸ್ಥಾನಗಳು, ಸ್ತಂಭಗಳು, ಕೆರೆಗಳು–ಎಲ್ಲವೂ ಒಟ್ಟಾಗಿ ಒಂದು ಜೀವಂತ ನಗರವಾಗಿತ್ತು. ನೀರಿನ ವ್ಯವಸ್ಥೆ ಸಮರ್ಥವಾಗಿತ್ತು; ವರ್ಷಗಟ್ಟಲೆ ಮಳೆ ಬಾರದಿದ್ದರೂ ಜನಜೀವನಕ್ಕೆ ಕೊರತೆಯಾಗದಂತೆ ಬಾವಿಗಳು, ಸರೋವರಗಳು ಮತ್ತು ಮೆಟ್ಟಿಲುಬಾವಿಗಳು ಜಾಲದಂತೆ ಹರಡಿಕೊಂಡಿದ್ದವು.

ಆದರೆ ಚಿತ್ತೋರ್‌ಗಢದ ಹೆಸರು ಕೇಳುತ್ತಿದ್ದಂತೆಯೇ ಮನಸ್ಸಿನಲ್ಲಿ ಮೂಡುವುದು ಕೇವಲ ಶಿಲ್ಪಕಲೆ ಅಥವಾ ವಾಸ್ತುಶಿಲ್ಪವಲ್ಲ–ಒಂದು ಕದನ, ಒಂದು ದೃಢ ನಿರ್ಧಾರ, ಒಂದು ಕಾಡುವ ಕಥೆ.

ಇತಿಹಾಸಕಾರರ ಒಂದು ವರ್ಗವು ಈ ದಾಳಿಯನ್ನು ಕೇವಲ ಸಾಮ್ರಾಜ್ಯ ವಿಸ್ತರಣೆಯ ರಾಜಕೀಯ ಹಸಿವು ಎಂದು ನೋಡಿದರೆ, 'ಪದ್ಮಾವತ್' ಅಂತಹ ಕಾವ್ಯಗಳು ರಾಣಿ ಪದ್ಮಿನಿಯ ಅಪ್ರತಿಮ ಸೌಂದರ್ಯದ ಮೇಲಿನ ವ್ಯಾಮೋಹವೇ ದಾಳಿಗೆ ಕಾರಣವೆಂದು ಚಿತ್ರಿಸುತ್ತವೆ. ಇದು ಕೇವಲ ಒಬ್ಬ ಸುಲ್ತಾನನ ಹಟವೋ ಅಥವಾ ರಾಜಕೀಯ ತಂತ್ರವೋ ಎಂಬ ತರ್ಕಕ್ಕಿಂತ ಹೆಚ್ಚಾಗಿ, ಆ ಸಂಘರ್ಷವು ಸೃಷ್ಟಿಸಿದ ಸಾಂಸ್ಕೃತಿಕ ನೋವು ಇಂದಿಗೂ ಜನಮನದಲ್ಲಿ ಹಸಿರಾಗಿದೆ.

ಯುದ್ಧದ ಅಂತಿಮ ಕ್ಷಣದಲ್ಲಿ, ಶತ್ರುಗಳ ಕೈಗೆ ಸಿಕ್ಕಿ ಅವಮಾನಕ್ಕೊಳಗಾಗುವುದಕ್ಕಿಂತ ಆತ್ಮಗೌರವ ಉಳಿಸಿಕೊಳ್ಳುವುದೇ ಮುಖ್ಯವೆಂದು ನಿರ್ಧರಿಸಿದ ರಾಣಿ ಪದ್ಮಿನಿ ಮತ್ತು ಅನೇಕ ಮಹಿಳೆಯರು 'ಜೋಹರ್' ಆಚರಿಸಿದರು– ಅಂದರೆ ಅಗ್ನಿಕುಂಡದಲ್ಲಿ ಆತ್ಮತ್ಯಾಗ. ಆ ಕ್ಷಣವನ್ನು ಕಲ್ಪಿಸಿಕೊಂಡರೆ, ಕಲ್ಲಿನ ಗೋಡೆಗಳೂ ಉರಿಯುತ್ತಿದ್ದಂತೆ ಭಾಸವಾಗುತ್ತದೆ. ಆದರೆ ಇದೇ ವೇಳೆ ಆ ಘಟನೆಯನ್ನು ಕೇವಲ ಗೌರವ ಅಥವಾ ಶೌರ್ಯದ ಕಥೆಯಾಗಿ ಮಾತ್ರ ನೋಡದೆ, ಅದರ ಹಿಂದೆ ಇದ್ದ ದುಃಖ, ಒತ್ತಡ ಮತ್ತು ಕಠಿಣ ಪರಿಸ್ಥಿತಿಗಳನ್ನೂ ನಾವು ಗಮನಿಸಬೇಕು.

ಕೋಟೆಯೊಳಗೆ ಸಾಗುತ್ತಾ ಹೋದರೆ, ಕಾಲದೊಂದಿಗೆ ಹಾಳಾದ ಅರಮನೆಗಳ ಗೋಡೆಗಳು ಅರ್ಧ ಕಥೆಗಳನ್ನು ಹೇಳುತ್ತವೆ. ಆದರೆ ಕೆಲವು ಸ್ಮಾರಕಗಳು ಇನ್ನೂ ನಿಂತೇ ಇವೆ. ಅವುಗಳಲ್ಲಿ ಅತ್ಯಂತ ಗಮನ ಸೆಳೆಯುವುದು ವಿಜಯ ಸ್ತಂಭ. 15ನೇ ಶತಮಾನದಲ್ಲಿ ರಾಣಾ ಕುಂಭ ಅವರು ಮಾಲ್ವಾದ ಸುಲ್ತಾನ್ ಮಹಮೂದ್ ಖಿಲ್ಜಿಯ ವಿರುದ್ಧ ಪಡೆದ ವಿಜಯದ ಸ್ಮರಣಾರ್ಥವಾಗಿ ಕಟ್ಟಿಸಿದ ಈ ಸ್ತಂಭ, ಕೇವಲ ಕಲ್ಲಿನ ಕಟ್ಟಡವಲ್ಲ; ಒಂದು ಘೋಷಣೆ. ಒಂಬತ್ತು ಮಹಡಿಗಳ ಈ ಸ್ತಂಭದ ಮೇಲೇರಿದಾಗ, ಇತಿಹಾಸವೇ ಕೆಳಗೆ ಬಿದ್ದಂತೆ ಕಾಣುತ್ತದೆ.

ಅದರ ಪಕ್ಕದಲ್ಲೇ ನಿಂತಿರುವ ಜೈನ ಶಿಲ್ಪಕಲೆಯ ಅದ್ಭುತವಾದ ಕೀರ್ತಿಸ್ತಂಭ, ಚಿತ್ತೋರ್‌ಗಢ, ಮೀರಾಬಾಯಿ ದೇವಸ್ಥಾನ–ಇವುಗಳು ಚಿತ್ತೋರ್‌ಗಢದ ಮತ್ತೊಂದು ಮುಖವನ್ನು ತೆರೆದಿಡುತ್ತವೆ. ಇಲ್ಲಿ ಯುದ್ಧದ ಜೊತೆಗೆ ಭಕ್ತಿ, ಕಲೆ ಮತ್ತು ಸಂಸ್ಕೃತಿ ಕೂಡ ಜೀವಂತವಾಗಿದ್ದವು. ಕೃಷ್ಣನ ಭಕ್ತೆಯಾದ ಮೀರಾ ಬಾಯಿ ಇಲ್ಲಿ ಹಾಡಿದ ಭಜನೆಗಳು ಇನ್ನೂ ಗಾಳಿಯಲ್ಲಿ ಮಾರ್ದನಿಸುತ್ತಿರುವಂತೆ ಅನಿಸುತ್ತದೆ.

ಸಂಜೆ ಕತ್ತಲಾಗುತ್ತಿದ್ದಂತೆ, ಬೆಳಕಿನ ಅಲಂಕಾರದಲ್ಲಿ ಕೋಟೆ ಹೊಸ ರೂಪ ಪಡೆಯುತ್ತದೆ. ಕಲ್ಲಿನ ಗೋಡೆಗಳು ಚಿನ್ನದಂತೆ ಹೊಳೆಯುತ್ತವೆ. ಆದರೆ ಆ ಹೊಳಪಿನ ಹಿಂದೆ ಯುದ್ಧದ ಹೊಗೆ, ಜೋಹರ್‌ನ ಜ್ವಾಲೆಗಳು ಮತ್ತು ಅನೇಕ ಅನಾಮಧೇಯ ಜೀವಗಳ ಕಥೆಗಳು ಮೌನವಾಗಿವೆ.

1568ರಲ್ಲಿ ಎರಡನೇ ಉದಯಸಿಂಹ ರಾಜಧಾನಿಯನ್ನು ಉದಯಪುರಕ್ಕೆ ಸ್ಥಳಾಂತರಿಸಿದಾಗ, ಚಿತ್ತೋರ್‌ಗಢ ತನ್ನ ರಾಜಕೀಯ ಮಹತ್ವವನ್ನು ಕಳೆದುಕೊಂಡರೂ, ಅದರ ಆತ್ಮ ಎಂದಿಗೂ ಕುಗ್ಗಲಿಲ್ಲ.

ಈ ಕೋಟೆಯಿಂದ ಹೊರಬರುವಾಗ ಒಂದು ಪ್ರಶ್ನೆ ಮನಸ್ಸನ್ನು ಕಾಡುತ್ತದೆ. ಶೌರ್ಯವನ್ನು ನಾವು ಹೇಗೆ ನೆನಪಿಸಿಕೊಳ್ಳುತ್ತೇವೆ? ಜೋಹರ್‌ನಂತಹ ಕುದಿಯುವ ಘಟನೆಗಳನ್ನು ನಾವು ಗೌರವದ ಸಂಕೇತವಾಗಿ ನೋಡಬೇಕೋ, ಅಥವಾ ಕಾಲದ ಕಠಿಣ ಸತ್ಯವಾಗಿ ಅರ್ಥಮಾಡಿಕೊಳ್ಳಬೇಕೋ? ಮತ್ತು ಇದೇ ಸಮಯದಲ್ಲಿ, ನಮ್ಮ ಕರ್ನಾಟಕದ ರಾಣಿ ಅಬ್ಬಕ್ಕದೇವಿ, ಕಿತ್ತೂರು ಚನ್ನಮ್ಮ, ಕೆಳದಿ ಚನ್ನಮ್ಮ, ಬೆಳವಡಿ ಮಲ್ಲಮ್ಮ–ಯುದ್ಧರಂಗದಲ್ಲೇ ಶತ್ರುಗಳನ್ನು ಎದುರಿಸಿದ ಅವರ ಶೌರ್ಯಕ್ಕೆ ನಾವು ನೀಡುವ ಸ್ಥಾನವೇನು?

ಚಿತ್ತೋರ್‌ಗಢ ಒಂದು ಪ್ರವಾಸ ತಾಣ ಮಾತ್ರವಲ್ಲ. ಅದು ನಮ್ಮ ಇತಿಹಾಸದ ಕನ್ನಡಿಯಂತಿದೆ. ಅದರಲ್ಲೇ ನಾವು ನೋಡಿಕೊಳ್ಳಬೇಕಾದುದು ಕೇವಲ ಭೂತಕಾಲವಲ್ಲ, ನಮ್ಮ ನೆನಪಿನ ವಿಧಾನವೂ ಹೌದು.



ಮೀರಾ ಬಾಯಿ ದೇವಸ್ಥಾನ

ಪೆನಾಂಗ್-ಬ್ಯಾಂಕಾಕ್ ಸೈಕಲ್ ಯಾತ್ರೆ

ವಯಸ್ಸು 65 ಆದರೂ ಕುಗ್ಗದು ಈ ಉತ್ಸಾಹ...

• ಪಿ ಎಚ್ ಪಾಟೀಲ್

ಥಾಯ್ಲೆಂಡ್ ಎಂದರೆ ಬಹುತೇಕ ಪ್ರವಾಸಿಗರಿಗೆ ಬ್ಯಾಂಕಾಕ್, ಪಟ್ಟಾಯ, ಪುಕೆಟ್ ಮಾತ್ರ ನೆನಪಿಗೆ ಬರುತ್ತವೆ. ಆದರೆ ಅದರ ನಿಜವಾದ ಸೌಂದರ್ಯ ಅಡಗಿರುವುದು ಗ್ರಾಮೀಣ ರಸ್ತೆಗಳ ಹಸಿರು ಹಾದಿಗಳಲ್ಲಿ, ಮಾರುಕಟ್ಟೆಗಳ ಜೀವಂತಿಕೆಯಲ್ಲಿ ಮತ್ತು ಜನರ ಸರಳ ಬದುಕಿನಲ್ಲಿ.

ಇದನ್ನು ಹತ್ತಿರದಿಂದ ಅನುಭವಿಸಲು ನಾವು ಸೈಕಲ್ ಯಾತ್ರೆಯನ್ನು ಆಯ್ಕೆ ಮಾಡಿದೆವು. ಜನವರಿಯ ಮೊದಲ ವಾರದಲ್ಲಿ, ನಾನು ಮತ್ತು ನನ್ನ ಇಬ್ಬರು ಸ್ನೇಹಿತರು ಪೆನಾಂಗ್ (ಮಲೇಷ್ಯಾ)ನಿಂದ ಬ್ಯಾಂಕಾಕ್ (ಥಾಯ್ಲೆಂಡ್) ಕಡೆಗೆ ನಮ್ಮ ಸೈಕಲ್ ಯಾನ ಆರಂಭಿಸಿದೆವು. ಸುಮಾರು 1500 ಕಿ.ಮೀ. ಪ್ರಯಾಣದ ಗುರಿ.

ಮಲೇಷ್ಯಾದಲ್ಲಿ ಬಾಲಿಕ್ ಪುಲಾವ್–ಬಟು ಫೆರಿಂಗಿ ಮಾರ್ಗದಿಂದ ಆರಂಭವಾದ ಸವಾರಿ ಭತ್ತದ ಗದ್ದೆಗಳು, ರಬ್ಬರ್ ಮತ್ತು ತಾಳೆ ತೋಟಗಳ ಮಧ್ಯೆ ಸಾಗಿತು. ಲಂಕಾವಿ ದ್ವೀಪದ ಕಡಲ ತೀರಗಳು, ಮ್ಯಾಂಗ್ರೋವ್ ಕಾಡುಗಳು ಮತ್ತು ಡ್ಯೂಟಿ ಫ್ರೀ ಮಾರುಕಟ್ಟೆಗಳು ನಮ್ಮ ಮೊದಲ ಅನುಭವ. ಇಲ್ಲಿಂದ ದೋಣಿಯಲ್ಲಿ ಸತೂನ್ ಮೂಲಕ ಥಾಯ್ಲೆಂಡ್ ಪ್ರವೇಶಿಸಿದೆವು.

ಥಾಯ್ಲೆಂಡ್‌ನಲ್ಲಿ ಸತೂನ್‌ನಿಂದ ಕ್ರಾಬಿವರೆಗೆ ಅಂಡಮಾನ್ ಕರಾವಳಿ ನಮ್ಮನ್ನು ಸ್ವಾಗತಿಸಿತು. ಸಮುದ್ರದ ದ್ವೀಪಗಳು, ದೋಣಿ ಪ್ರವಾಸಗಳು ಮತ್ತು ಯುರೋಪ್–ರಷ್ಯಾ ಪ್ರವಾಸಿಗರ ಗದ್ದಲ ಈ ಭಾಗವನ್ನು ವಿಶೇಷವಾಗಿಸಿತು. ನಂತರ ಸೂರತ್ ಥಾನಿ, ಹುವಾ ಹಿನ್, ಆಂಫಾವಾ ಮೂಲಕ ನಾವು ಒಳನಾಡಿನತ್ತ ಸಾಗಿದೆವು.

ಹುವಾ ಹಿನ್‌ನಲ್ಲಿ ಪ್ರತ್ಯೇಕ ಸೈಕಲ್ ಪಥಗಳು, ಉಪ್ಪು ಗದ್ದೆಗಳು ಮತ್ತು ಸಮತಟ್ಟಾದ ರಸ್ತೆಗಳು ಸೈಕ್ಲಿಂಗ್‌ಗೆ ಆನಂದಕರವಾಗಿದ್ದವು. ನದಿ ತೀರದ ಪಟ್ಟಣವಾದ ಆಂಫಾದ ತೇಲುವ ಮಾರುಕಟ್ಟೆ, ರೈಲು ಮಾರುಕಟ್ಟೆ, ಅಂದರೆ ರೈಲು ಹಾದಿಯಲ್ಲೇ ಇರುವ, ರೈಲು ಬಂದಾಗ ಕ್ಷಣಾರ್ಧದಲ್ಲಿ ಮುಚ್ಚಿ ಮತ್ತೆ ತೆರೆಯುವ ಮಾರುಕಟ್ಟೆ ವಿಶೇಷವಾಗಿತ್ತು.

ಕಂಚನಬುರಿಯಲ್ಲಿ ಎರಡನೇ ಮಹಾಯುದ್ಧದ ಇತಿಹಾಸ, ರೈಲು ಸೇತುವೆ ಮತ್ತು ಜಲಪಾತಗಳು ನಮ್ಮ ಪ್ರಯಾಣಕ್ಕೆ ಇತಿಹಾಸದ ಸ್ಪರ್ಶ ನೀಡಿದವು. ದಾರಿಯುದ್ದಕ್ಕೂ ತಾಳೆ, ರಬ್ಬರ್, ತೆಂಗು, ಭತ್ತದ ಗದ್ದೆಗಳು ಮತ್ತು ಹಸಿರು ರಸ್ತೆ ದೃಶ್ಯಗಳು ನಮ್ಮನ್ನು ಜೊತೆಯಾಗಿ ನಡೆಸಿದವು. ಥಾಯ್ಲೆಂಡ್‌ನಲ್ಲಿ ಯಶಸ್ಸಿನ ದ್ಯೋತಕವಾಗಿ ಮನೆ, ಮಂದಿರಗಳಲ್ಲಿ ಇರಿಸುವ ಹುಂಜದ ಪ್ರತಿಮೆಗಳು ಗಮನಸೆಳೆದವು.

ಈ ಇಪ್ಪತ್ತೆಂಟು ದಿನಗಳಲ್ಲಿ ನಾವು ಸುಮಾರು ಒಂದೂವರೆ ಸಾವಿರ ಕಿಲೊಮೀಟರ್ ಸೈಕ್ಲಿಂಗ್ ಮಾಡಿದೆವು. ಸರಾಸರಿ ದಿನದ ಖರ್ಚು ಕಡಿಮೆ, ಸ್ಥಳೀಯ ಜನರೊಂದಿಗೆ ನೇರ ಸಂಪರ್ಕ ಸಾಧ್ಯವಾಯಿತು. ಮಾರ್ಗದಲ್ಲಿ ಭೇಟಿಯಾದ ವಿವಿಧ ದೇಶಗಳ ಸೈಕ್ಲಿಸ್ಟ್‌ಗಳು ನಮ್ಮನ್ನು ಇನ್ನಷ್ಟು ಯಾತ್ರೆಗೆ ಪ್ರೇರೇಪಿಸಿದರು.

ಈ ಪ್ರಯಾಣ ನಮಗೆ ಕಲಿಸಿದ್ದು ಒಂದೇ ವಿಷಯ–ಸೈಕಲ್ ಮೇಲೆ ಜಗತ್ತು ನಿಧಾನವಾಗಿ ತೆರೆದುಕೊಳ್ಳುತ್ತದೆ, ಆದರೆ ಹೆಚ್ಚು ನಿಜವಾಗಿ ಕಾಣುತ್ತದೆ.

ಯಶಸ್ಸಿನ ದ್ಯೋತಕ ಈ ಪ್ರತಿಮೆ...

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಕೊಕ್ಕರೆ ಹೊಟ್ಟೆಗೆ ಮೀನು!



ಗುಂಡ ಮನೆ ಹತ್ತಿರದ ಅಕ್ವೇರಿಯಂ ಅಂಗಡಿಯಿಂದ ನೇರಳೆ ಬಣ್ಣದ ಮೀನೊಂದನ್ನು ಖರೀದಿಸಿ ತಂದು, ಅದನ್ನು ಗಾಜಿನ ಹೂಜಿಯಲ್ಲಿ ಹಾಕಿ ಮನೆಯೊಳಗಿರಿಸಿದ್ದ. ಆ ಹೂಜಿಯ ಹಿಂದೆಯೇ ಒಂದು ಕೊಕ್ಕರೆಯ ಚಿತ್ರವಿತ್ತು. ಒಂದು ದಿನ ಆ ಕೊಕ್ಕರೆಗೆ ಜೀವ ಬಂತು. ಜೋರಾಗಿ ಹಸಿದಿದ್ದ ಆ ಕೊಕ್ಕರೆ ಹೂಜಿಯಲ್ಲಿದ್ದ ಮೀನನ್ನು ತನ್ನ ಉದ್ದದ ಕೊಕ್ಕಿನಿಂದ ತೆಗೆದು ಹೊಟ್ಟೆಯೊಳಗಿಳಿಸಿ, ತನಗೇನೂ ಗೊತ್ತಿಲ್ಲದಂತೆ ಮತ್ತೆ ಚಿತ್ರದೊಳಗೆ ಸೇರಿಕೊಂಡಿತು...

ಗಣಿತದಲ್ಲಿ ಗರ್ದಿ ಗಮ್ಮತ್ತು

Check-ಚೌಕ

ಇಲ್ಲಿರುವ ಚೌಕಗಳ ಸಂಖ್ಯೆ ಎಷ್ಟು?



ಜಾಣಪದ ಆಟ

1. ಇಲ್ಲಿ ಕೊಟ್ಟಿರುವ ಎರಡಕ್ಷರಗಳ ನಡುವೆ ಪದಪಟ್ಟಿಯಿಂದ ಆಯ್ದು ಮಧ್ಯದಲ್ಲಿ ಎರಡಕ್ಷರ ತುಂಬಿ ನಾಲ್ಕಕ್ಷರಗಳ ಪದ ಮಾಡಿ.

1	ವಿ			ಕ
2	ವಿ			ಕ
3	ವಿ			ಕ
4	ವಿ			ಕ
5	ವಿ			ಕ
6	ಕ			ರ
7	ಕ			ರ
8	ಕ			ರ
9	ಕ			ರ
10	ಕ			ರ

ಪದಪಟ್ಟಿ

ಭಾ	ಲಾ	ಧ್ವಂ	ಯ	ಕ
ವೀ	ಧೇ	ರ	ಕ	ರಿ
ಮರ್ಶ	ನಾ	ಷ	ಸ	ನಿ
ಯ	ದೂ	ಶ	ನಾ	ದಾ

ಬ್ರೇನ್‌ವ್ಹೀಟಾ ಆಟ

You are between city

ಈ ವಾಕ್ಯವನ್ನು ಕೇವಲ ನಾಲ್ಕು ಅಕ್ಷರಗಳಲ್ಲಿ ಬರೆಯಬಲ್ಲಿರಾ?

ಉತ್ತರ: ______________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿರುವ ಎರಡು ಪದ ಸೇರಿಸಿ ಒಂದೇ ಪದ ಮಾಡಿ.

1.ಕವನ + ಲಾಭ = ________

2.ಕವನ + ಲೋಭ = ______

ವರ್ಡ್ ಗೇಮ್

ಇಲ್ಲಿ ಕೊಟ್ಟಿರುವ ಪದಗಳಲ್ಲಿನ ಅಕ್ಷರಗಳನ್ನೇ ಬಳಸಿಕೊಂಡು ಬೇರೊಂದು ಪದ ಮಾಡಿ.

1.STATE = ______

2.GARDEN = ________

ವಿನೋದ ಒಗಟುಗಳು

1	ಒಗಟು	ಉತ್ತರ
1	ಚಿನ್ನದ ಹಕ್ಕಿ ಬಾಲದಿಂದ ನೀರ ಕುಡಿತೈತಿ	
2	ಅಜ್ಜಿ ಮೈತುಂಬಾ ಕಜ್ಜಿ	
3	ಕರಿ ಹೊಲ್ದಾಗ ಕುರಿ ಮೇಯತಾವು	
4	ಬಿಳಿ ಕುದುರಿಗೆ ಹಸಿರು ಬಾಲ	
5	ಕಂಬದ ಮೇಲೆ ನಿಂಬೆ ಹಣ್ಣು	
6	ಕಟ್ಟೆ ಇಲ್ಲದ ಕೆರೆಯಲ್ಲಿ ತಟ್ಟೆ ತೇಲುವುದು	
7	ಲಟಪಟ ಲೇಡಿಗೆ ಒಂದೇ ಕಣ್ಣು	
8.	ಹಸಿರು ಗಿಡ್ದಾಗ ಮೊಸರು ಚೆಲ್ಲೈತಿ	
9	ಗಿಡ್ಡ ಹುಡುಗ ಅಡ್ಡ ಮಲಗ್ಯಾನ	
10	ಸಾವಿರ ಗಿಳಿಗಳಿಗೆ ಒಂದೇ ಕೊಕ್ಕು	

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನಲಿ	+	ಕನ್ನ	+	ಚಿ	=	
2	ದಾರ	+	ಸಳ	+	ರಿ	=	
3	ಮಾಟ	+	ರಾಮ	+	ನೆ	=	
4	ಗುಳಿ	+	ನರಿ	+	ಬಾ	=	
5	ಗತ	+	ಕಣಿ	+	ಲೋ	=	

2. ಇಲ್ಲಿ ಕೊಟ್ಟಿರುವ 'ಅನು' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಅ	ನು		
2	ಅ	ನು		
3	ಅ	ನು		
4	ಅ	ನು		
5	ಅ	ನು		

ಅಕ್ಷರ ಪಟ್ಟಿ

ಗ	ದ	ವಾ	ರಾ	ತಿ
ಮ	ಯಾ	ಭ	ವ	ಯಿ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಅಪೂರ್ಣ ಶಬ್ದಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದು ಒಂದಕ್ಷರ ತುಂಬಿ ಪದ ಪೂರ್ಣ ಮಾಡಿ.

1		A	T	E
2		A	T	E
3		A	T	E
4		A	T	E
5		A	T	E
6		A	I	L
7		A	I	L
8		A	I	L
9		A	I	L
10		A	I	L

ಅಕ್ಷರ ಪಟ್ಟಿ

R	D	D	H	R
S	T	G	L	F

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಪದ ಶೋಧ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಒಂದು ಕ್ರಮದಲ್ಲಿ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಎಸ್.ಎಲ್.ಭೈರಪ್ಪನವರ ಒಂದು ಕಾದಂಬರಿ ಹೆಸರನ್ನು ಹುಡುಕಿ.

1.ಸುಗಂಧನಾತ
2.ಜಿಮೀನು ಕಾಯಿರಿ
3.ನೀರಿನ ನೆಲೆ
4.ಸೊಳ್ಳೆಪರದೆ
5.ಕತೆಹೇಳುವೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ರೈತಮಹಿಳೆ 2.ಕೋಳಿಸಾಕಣೆ 3.ಬೀಜನಿಗಮ 4.ವಿಭೂತಿಪಟ್ಟ 5.ಆರತಿಮಾಡು

ಶಬ್ದಾಟ: ಸೂರ್ಯತಿಲಕ

ವರ್ಡ್‌ಗೇಮ್: Stories

ಜಾಣಪದ ಆಟ: 1.ಅಣಕ 2.ಮಣಕ 3.ಕಣಕ 4.ಗಣಕ 5.ಗುಣಕ 6.ಕರಡಿ 7.ಗರಡಿ 8.ಗರಡಿ 9.ಪರಡಿ 10.ಶಿರಡಿ

ಜಾಣಪದ ಆಟ 2: 1.ಸಹವಾಸ 2.ಸಹಕಾರ 3.ಸಹವರ್ತಿ 4.ಸಹಭಾಗಿ 5.ಸಹಧರ್ಮಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಶ್ರೀ ಹರ್ಷವರ್ಧನ ಎಚ್.ಎಂ., ಹಿರಿಯೂರು



ತೇಜಶ್ವಿನಿ ಪ್ರಿಯಾ ಆರ್. ಆನೇಕಲ್

ಮನ್ವಿತ ರಾಜೀವ್ ಬೆಂಗಳೂರು

ಮಿಥುನ್ ಆರ್. ಶಿರಾ



ಯುಕ್ತಗೌಡ ಮೈಸೂರು

ಪ್ರಾಪ್ತಿ ಕರ್ಕೇರ ಉಡುಪಿ

ಜಯದ ಹಾದಿಗೆ ಮರಳುವತ್ತ ಚಿತ್ತ

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಮುಂಬೈ ಇಂಡಿಯನ್ಸ್ ಹಣಾಹಣಿ ಇಂದು

ಬಲಾಬಲ

ಒಟ್ಟು ಪಂದ್ಯ	34
ಮುಂಬೈ ಗೆಲುವು	19
ಆರ್‌ಸಿಬಿ ಜಯ	15

ಪಿಟಿಐ/ಪ್ರಜಾವಾಣಿ ವಾರ್ತೆ

ಮುಂಬೈ: ಮುಂದಿನ ವರ್ಷದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವತ್ತ ಚಿತ್ತ ನೆಟ್ಟಿರುವ ಈ ಕಾಲಘಟ್ಟದ ಇಬ್ಬರು ದಿಗ್ಗಜರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿ ಆಗಲಿದ್ದಾರೆ.

ಈ ಪಂದ್ಯವು ಉಭಯ ತಂಡಗಳಿಗೆ ಟೂರ್ನಿಯಲ್ಲಿ ಗೆಲುವಿನ ಹಾದಿಗೆ ಮರಳಲು ವೇದಿಕೆಯಾಗಲಿದೆ. ಆದ್ದರಿಂದ ರೋಚಕ ಹಣಾಹಣಿಯ ನಿರೀಕ್ಷೆ ಕ್ರಿಕೆಟ್ ಅಭಿಮಾನಿಗಳಲ್ಲಿ ಗರಿಗೆದರಿದೆ. ಅದರಲ್ಲೂ ವಿರಾಟ್ ಮತ್ತು ರೋಹಿತ್ ಅವರನ್ನು ಎದುರು ಬದುರು ನೋಡುವ ಅವಕಾಶವೂ ಸಿಗಲಿದೆ. ವಿರಾಟ್ 2008ರಿಂದಲೂ ಆರ್‌ಸಿಬಿಯನ್ನು ಪ್ರತಿನಿಧಿಸುತ್ತಿದ್ದಾರೆ. ಹೋದ ವರ್ಷ ರಜತ್ ಪಾಟೀದಾರ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ಮುಂಬೈ ತಂಡವು ಐದು ಸಲ ಐಪಿಎಲ್ ಟ್ರೋಫಿ ಜಯಿಸಿದ್ದಾಗ ರೋಹಿತ್ ಅವರು ನಾಯಕರಾಗಿದ್ದರು. ಈ ಟೂರ್ನಿಯಲ್ಲಿ ವಿರಾಟ್–ರೋಹಿತ್ ಇಬ್ಬರೂ ಅಮೋಘ ಲಯದಲ್ಲಿದ್ದಾರೆ.

ಶುಕ್ರವಾರ ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ತಂಡದ 15ರ ಪೋರ ವೈಭವ್ ಸೂರ್ಯವಂಶಿಯ ಸಿಡಿಲಬ್ಬರದ ಬ್ಯಾಟಿಂಗ್ ಮುಂದೆ ಆರ್‌ಸಿಬಿ ತಂಡವು ತಲೆಬಾಗಿತ್ತು. ಜೋಷ್ ಹೇಜಲ್‌ವುಡ್, ಭುವನೇಶ್ವರ್ ಕುಮಾರ್, ಕೃಣಾಲ್ ಪಾಂಡ್ಯ ಅಂತಹ ಅನುಭವಿ ಬೌಲರ್‌ಗಳ ಎದುರು ವೈಭವ್ ಅರ್ಭಟಿಸಿದ್ದರು. ಅಲ್ಲದೇ ಧ್ರುವ ಜುರೇಲ್ ಕೂಡ ಅಮೋಘ ಆಟವಾಡಿ ರಾಜಸ್ಥಾನ ತಂಡವು ಸತತ 4ನೇ ಪಂದ್ಯ ಜಯಿಸಲು ಕಾರಣರಾಗಿದ್ದರು.

ವಿರಾಟ್ ಕೊಹ್ಲಿ

ಆರ್‌ಸಿಬಿ ತಂಡವು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲೆರಡು ಪಂದ್ಯಗಳಲ್ಲಿ ಭರ್ಜರಿ ಜಯ ಸಾಧಿಸಿತ್ತು. ಆದರೆ ಮೂರನೇ ಪಂದ್ಯದಲ್ಲಿ ಆಘಾತ ಅನುಭವಿಸಿತು. ರಾಯಲ್ಸ್ ಎದುರು ಕೂಡ ಆರ್‌ಸಿಬಿ ತಂಡವು 200ಕ್ಕಿಂತ ಹೆಚ್ಚು ರನ್ ಗಳಿಸಿತ್ತು. ನಾಯಕ ರಜತ್ ಪಾಟೀದಾರ್ ಅರ್ಧಶತಕ ಹೊಡೆದರು. ಆದರೆ ಫಿಲ್ ಸಾಲ್ಟ್ ಈ ಪಂದ್ಯದಲ್ಲಿಯೂ ಲಯಕ್ಕೆ ಮರಳಲಿಲ್ಲ. ವಿರಾಟ್, ರೊಮೆರಿಯೊ ಶೆಫರ್ಡ್ ಹಾಗೂ 9ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ವೆಂಕಟೇಶ್ ಅಯ್ಯರ್ ಅವರು ಉಪಯುಕ್ತ ಕಾಣಿಕೆ ನೀಡಿದ್ದರು.

ಇನ್ನೊಂದೆಡೆ ಮುಂಬೈ ತಂಡವು 13 ವರ್ಷಗಳ ನಂತರ ಐಪಿಎಲ್ ಟೂರ್ನಿಯಲ್ಲಿ ತನ್ನ ಆರಂಭಿಕ ಪಂದ್ಯವನ್ನು ಗೆದ್ದಿತ್ತು. ಆ ಪಂದ್ಯದಲ್ಲಿ ರೋಹಿತ್ ಚುರುಕಿನ ಅರ್ಧಶತಕ ಗಳಿಸಿದ್ದರು. ರಿಯಾನ್ ರಿಕೆಲ್ಟನ್ ಕೂಡ ಮಿಂಚಿದ್ದರು. ಆದರೆ ನಂತರದ ಎರಡೂ ಪಂದ್ಯಗಳಲ್ಲಿ ತಂಡವು ಸೋತಿತ್ತು. ರೋಹಿತ್ ಮತ್ತು ರಿಕೆಲ್ಟನ್ ಅವರು ಈ ಎರಡೂ ಪಂದ್ಯಗಳಲ್ಲಿ ಉತ್ತಮ ಆರಂಭ ನೀಡಿರಲಿಲ್ಲ. ಆ ಪಂದ್ಯಗಳು ಕ್ರಮವಾಗಿ ದೆಹಲಿ ಮತ್ತು ಗುವಾಹಟಿಯಲ್ಲಿ ನಡೆದಿದ್ದವು.

ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ರೋಹಿತ್ ಶರ್ಮಾ

ರಜತ್ ಪಾಟೀದಾರ್

ಇದೀಗ ಮತ್ತೆ ಮುಂಬೈ ತನ್ನ ತವರಿಗೆ ಮರಳಿದೆ. ಅದರಿಂದಾಗಿ ಹಾರ್ದಿಕ್ ಬಳಗದ ಆತ್ಮವಿಶ್ವಾಸವೂ ಮರುಕಳಿಸಿದೆ. ವಿರಾಟ್, ಸಾಲ್ಟ್, ದೇವದತ್ತ ಪಡಿಕ್ಕಲ್, ಟಿಮ್ ಡೇವಿಡ್, ಜಿತೇಶ್ ಶರ್ಮಾ, ವೆಂಕಟೇಶ್ ಅಯ್ಯರ್ ಹಾಗೂ ರಜತ್ ಅವರು ಇರುವ ಆರ್‌ಸಿಬಿಯ ಬಲಿಷ್ಠ ಬ್ಯಾಟಿಂಗ್ ಪಡೆಯು ಮುಂಬೈನ ಬೌಲಿಂಗ್ ಸವಾಲು ಎದುರಿಸಬೇಕಿದೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಟೂರ್ನಿಯಲ್ಲಿ ವಿಕೆಟ್ ಖಾತೆ ತೆರೆಯುವ ವಿಶ್ವಾಸದಲ್ಲಿದ್ದಾರೆ. ಶಾರ್ದೂಲ್ ಠಾಕೂರ್, ಟ್ರೆಂಟ್ ಬೌಲ್ಟ್, ಅಲ್ಲಾಹ ಘಜನಫರ್ ಅವರು ಪರಿಣಾಮಕಾರಿ ದಾಳಿ ಮಾಡುವ ಸಮರ್ಥರು.

ಮುಂಬೈ ಬ್ಯಾಟಿಂಗ್ ಬಲ ಕೂಡ ಹೆಚ್ಚು ಆಳವಾಗಿದೆ. ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಶೆರ್ಫೇನ್ ರುದರ್‌ಫೋರ್ಡ್ ಮತ್ತು ಉಳಿದ ಆಲ್‌ರೌಂಡರ್‌ಗಳು ತಮ್ಮ ಲಯಕ್ಕೆ ತಕ್ಕಂತೆ ಆಡಿದರೆ, ಆರ್‌ಸಿಬಿ ತಂಡಕ್ಕೆ ಹಾದಿ ಕಠಿಣವಾಗಬಹುದು. ಮುಂಬೈ ಕೂಡ ಅಷ್ಟೇ. ಹಾರ್ದಿಕ್ ನಾಯಕತ್ವದಲ್ಲಿ ತೋರುವ ಜಾಣ್ಮೆಯು ಫಲಿತಾಂಶದ ಮೇಲೆ ಪ್ರಮುಖ ಪಾತ್ರವಹಿಸಬಹುದು.

ಇಂದಿನ ಪಂದ್ಯ

ಲಖನೌ ಸೂಪರ್ ಜೈಂಟ್ಸ್	V/s	ಗುಜರಾತ್ ಟೈಟನ್ಸ್
ತಾಣ: ಲಖನೌ, ಆರಂಭ: ಮ. 3.30		
ಮುಂಬೈ ಇಂಡಿಯನ್ಸ್	V/s	ರಾಯಲ್ ಚಾಲೆಂಜರ್ಸ್ ಬೆಂಗಳೂರು
ತಾಣ: ಮುಂಬೈ, ಆರಂಭ: ರಾತ್ರಿ 7.30		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ವೈಭವ ಸೂರ್ಯವಂಶಿ, ಆರ್ ಆರ್ ಸೂಪರ್‌ಸ್ಟಾರ್ ಭರ್ಜರಿ ರನ್ ಮಳೆ ಸುರಿಸುತ್ತಿದ್ದಾರೆ !

ಓವರ್ಟನ್‌ಗೆ ನಾಲ್ಕು ವಿಕೆಟ್: ಗೆಲುವಿನ ಖಾತೆ ತೆರೆದ ಚೆನ್ನೈ

ಸಂಜು ಶತಕಕ್ಕೆ ಒಲಿದ ಜಯ

ಸಂಜು ಸ್ಯಾಮ್ಸನ್

115* ರನ್	15 ಬೌಂಡರಿ
56 ಎಸೆತ	4 ಸಿಕ್ಸರ್

ಚೆನ್ನೈ (ಪಿಟಿಐ): ಸತತ ಮೂರು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಸಂಜು ಸ್ಯಾಮ್ಸನ್ ಶನಿವಾರ ಚೆಪಾಕ್ ಕ್ರೀಡಾಂಗಣದಲ್ಲಿ ಮರಳಿ ಅರಳಿದರು. ಅವರ ಅಮೋಘ ಶತಕದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್‌ನ ಹಾಲಿ ಆವೃತ್ತಿಯಲ್ಲಿ ಮೊದಲ ಜಯ ದಾಖಲಿಸಿತು.

ಹ್ಯಾಟ್ರಿಕ್ ಸೋಲು ಅನುಭವಿಸಿದ್ದ ಋತುರಾಜ್ ಗಾಯಕವಾಡ್ ಬಳಗವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 23 ರನ್‌ಗಳ ಜಯ ದಾಖಲಿಸಿತು. ಅಕ್ಷರ್ ಪಟೇಲ್ ಪಡೆಗೆ ಇದು ಸತತ ಎರಡನೇ ಸೋಲು.

ರಾಜಸ್ಥಾನ ರಾಯಲ್ಸ್‌ನಿಂದ ಚೆನ್ನೈ ತಂಡಕ್ಕೆ ಬಂದ ಸಂಜು ಅವರಿಗೆ ಮೊದಲ ಮೂರು ಪಂದ್ಯಗಳಲ್ಲಿ ಒಂದಂಕಿ ದಾಟಲು ಸಾಧ್ಯವಾಗಿರಲಿಲ್ಲ. ಆದರೆ, ಈ ಪಂದ್ಯದಲ್ಲಿ 56 ಎಸೆತಗಳಲ್ಲಿ ಅಜೇಯ 115 ರನ್ ಬಾರಿಸಿದರು. ಐಪಿಎಲ್‌ನಲ್ಲಿ ಅವರಿಗೆ ಇದು ನಾಲ್ಕನೇ ಶತಕವಾಗಿದ್ದು, ಪ್ರಸಕ್ತ ಟೂರ್ನಿಯಲ್ಲಿ ದಾಖಲಾದ ಮೊದಲ ಶತಕ. ಅವರು ಮತ್ತು ಯುವತಾರೆ ಆಯುಷ್ ಮ್ಹಾತ್ರೆ (59; 36ಎ, 4x3, 6x4) ಅವರ ಆಟದ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 212 ರನ್ ಗಳಿಸಿತು.

ಕಠಿಣ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಇಂಗ್ಲೆಂಡ್‌ನ ವೇಗಿ ಜೇಮಿ ಓವರ್ಟನ್ (18ಕ್ಕೆ4) ಮತ್ತು ಅನ್ಶುಲ್ ಕಂಬೋಜ್ (35ಕ್ಕೆ3) ಕಡಿವಾಣ ಹಾಕಿದರು. ಇದರಿಂದಾಗಿ ನಿಗದಿತ ಓವರ್‌ಗಳಲ್ಲಿ 189 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಪಥುಮ್ ನಿಸಾಂಕ (41) ಮತ್ತು ಕೆ.ಎಲ್.ರಾಹುಲ್ (18) ಮೊದಲ ವಿಕೆಟ್‌ಗೆ 61 ಸೇರಿಸಿ ಉತ್ತಮ ಆರಂಭ ನೀಡಿದರು. ಆದರೆ, ನಂತರ ಕಂಬೋಜ್ ಮತ್ತು ಓವರ್ಟನ್ ದಾಳಿಗೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ಮಧ್ಯಮ ಕ್ರಮಾಂಕದಲ್ಲಿ ಟ್ರಿಸ್ಟನ್ ಸ್ಟಬ್ಸ್ (60; 38ಎ) ಏಕಾಂಗಿ ಹೋರಾಟ ತೋರಿದರೂ ಗೆಲುವಿನ ಗುರಿ ದೂರವಿತ್ತು.

ಇದಕ್ಕೂ ಮುನ್ನ ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಂಜು ಮತ್ತು ಋತುರಾಜ್ (15; 18ಎ) ಅವರು ಪವರ್‌ಪ್ಲೇ ಹಂತದಲ್ಲಿ 62 ರನ್ ಸೇರಿಸಿದರು. ಸ್ಪಿನ್ನರ್ ಅಕ್ಷರ್ ಪಟೇಲ್ ಅವರು ಋತುರಾಜ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಸಂಜು ಜೊತೆಗೂಡಿದ ಆಯುಷ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 68 ಎಸೆತಗಳಲ್ಲಿ 113 ರನ್ ಸೇರಿಸಿದರು.

ಆಯುಷ್ ಅವರು ಗಾಯಗೊಂಡು ನಿವೃತ್ತರಾಗಿ ಪೆವಿಲಿಯನ್‌ಗೆ ಮರಳಿದರು. ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಶಿವಂ ದುಬೆ 10 ಎಸೆತಗಳಲ್ಲಿ 20 ರನ್ ಹೊಡೆದರು.

ಸಂಜು ಹಿಂದಿನ ಪಂದ್ಯಗಳಲ್ಲಿ ಫಾರ್ಮ್ ಕಳೆದುಕೊಂಡಿದ್ದರು. ಆದರೆ, ಇಲ್ಲಿ ಅವರು ತಮ್ಮ ಬ್ಯಾಟಿಂಗ್ ಸೊಬಗನ್ನು ಚೆನ್ನೈ ಅಭಿಮಾನಿಗಳಿಗೆ ಉಣಬಡಿಸಿದರು. ಅವರ ಶತಕದಲ್ಲಿ 15 ಬೌಂಡರಿ ಹಾಗೂ 4 ಸಿಕ್ಸರ್ ಇದ್ದವು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 212 (ಸಂಜು ಸ್ಯಾಮ್ಸನ್ ಔಟಾಗದೇ 115, ಆಯುಷ್ ಮ್ಹಾತ್ರೆ ಗಾಯಗೊಂಡು ನಿವೃತ್ತಿ 59, ಶಿವಂ ದುಬೆ ಔಟಾಗದೇ 20, ಅಕ್ಷರ್ ಪಟೇಲ್ 39ಕ್ಕೆ1). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 189 (ಪಥುಮ್ ನಿಸಾಂಕ 41, ಟ್ರಿಸ್ಟನ್ ಸ್ಟಬ್ಸ್ 60, ಆಶುತೋಷ್ ಶರ್ಮಾ 19; ಜೇಮಿ ಓವರ್ಟನ್ 18ಕ್ಕೆ4, ಅನ್ಶುಲ್ ಕಂಬೋಜ್ 35ಕ್ಕೆ3).
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	4	4	0	0	8	2.055
ಪಿಬಿಕೆಎಸ್	4	3	0	1	7	0.720
ಆರ್‌ಸಿಬಿ	3	2	1	0	4	1.231
ಡಿಸಿ	4	2	2	0	4	0.322
ಎಲ್‌ಎಸ್‌ಜಿ	3	2	1	0	4	- 0.359
ಎಸ್‌ಆರ್‌ಎಚ್	4	1	3	0	2	- 0.024
ಜಿಟಿ	3	1	2	0	2	- 0.270
ಎಂಐ	3	1	2	0	2	- 0.715
ಸಿಎಸ್‌ಕೆ	4	1	3	0	2	- 1.532
ಕೆಕೆಆರ್	4	0	3	1	1	- 1.315

ಆರೇಂಜ್ ಕ್ಯಾಪ್–ವೈಭವ್ ಸೂರ್ಯವಂಶಿ, ಆರ್‌ಆರ್ (200 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (9 ವಿಕೆಟ್)

ಕ್ಯಾಂಡಿಡೇಟ್ಸ್ ಚೆಸ್ ವೈಶಾಲಿಗೆ ಅಗ್ರಸ್ಥಾನ

ಪಾಫೋಸ್ (ಸೈಪ್ರಸ್), (ಪಿಟಿಐ): ಭಾರತದ ಆರ್. ವೈಶಾಲಿ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮಹಿಳೆಯರ ವಿಭಾಗದ 11ನೇ ಸುತ್ತಿನಲ್ಲಿ ಗೆಲುವು ದಾಖಲಿಸಿ, ಏಕಾಂಗಿಯಾಗಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಶನಿವಾರ ನಡೆದ ಪಂದ್ಯದಲ್ಲಿ ವೈಶಾಲಿ ಅವರು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (5) ಅವರನ್ನು ಮಣಿಸಿ ಪೂರ್ಣ 1 ಅಂಕ ಸಂಪಾದಿಸಿದರು. ಒಟ್ಟು ನಾಲ್ಕು ಗೆಲುವುಗಳೊಂದಿಗೆ ಏಳು ಅಂಕ ಗಳಿಸಿರುವ ವೈಶಾಲಿ ಪ್ರಶಸ್ತಿಗೆ ಮತ್ತಷ್ಟು ಹತ್ತಿರವಾಗಿದ್ದಾರೆ.

ಇನ್ನು ಮೂರು ಸುತ್ತು ಉಳಿದಿವೆ. ಈ ಟೂರ್ನಿ ಗೆದ್ದವರು ಮಹಿಳಾ ವಿಶ್ವ ಚಾಂಪಿಯನ್, ಚೀನಾದ ಜು ವೆನ್‌ಜುನ್ ಅವರಿಗೆ ಸವಾಲು ಹಾಕಲಿದ್ದಾರೆ. ಎರಡನೇ ಸ್ಥಾನದಲ್ಲಿರುವ ಉಕ್ರೇನ್‌ನ ಅನ್ನಾ ಮುಝಿಚುಕ್ (6) ಅವರು ರಷ್ಯಾದ ಕ್ಯಾತರಿನಾ ಲಾಗ್ನೊ (5.5) ಅವರೊಂದಿಗೆ ಡ್ರಾ ಮಾಡಿಕೊಂಡರು.

ಓಪನ್ ವಿಭಾಗದ ನಾಲ್ಕೂ ಪಂದ್ಯಗಳು ಡ್ರಾಗೊಂಡವು. ಅಗ್ರಸ್ಥಾನದಲ್ಲಿರುವ ಉಜ್ಬೇಕಿಸ್ತಾನದ ಯುವತಾರೆ ಜಾವೊಖಿರ್ ಸಿಂದರೋವ್ (8.5 ಅಂಕ) ಅವರು ಫ್ಯಾಬಿಯಾನೊ ಕರುವಾನ (5) ಅವರೊಂದಿಗೆ ಡ್ರಾ ಮಾಡಿಕೊಂಡರು.

ಭಾರತದ ಆರ್.ಪ್ರಜ್ಞಾನಂದ (4.5) 11ನೇ ಸುತ್ತಿನಲ್ಲಿ ಜರ್ಮನಿಯ ಬ್ಲೂಬಾಮ್ ಮಥಾಯಿಸ್ (5) ಅವರೊಂದಿಗೆ ಅಂಕ ಹಂಚಿಕೊಂಡರು.

ಅಭಿಷೇಕ್ ಅಬ್ಬರಕ್ಕೆ ಸಿಗದ ಜಯ • ಪ್ರಿಯಾಂಶ್, ಪ್ರಭಸಿಮ್ರನ್ ಅಮೋಘ ಆಟ

ಪಂಜಾಬ್‌ಗೆ ಗೆಲುವಿನ 'ಶ್ರೇಯಸ್ಸು'

ಮುಲ್ಲನಪುರ, ಚಂಡೀಗಡ (ಪಿಟಿಐ): ಶ್ರೇಯಸ್ ಅಯ್ಯರ್ ಅವರು ಮತ್ತೊಮ್ಮೆ ತಮ್ಮ ನಾಯಕತ್ವ ಹಾಗೂ ಬ್ಯಾಟಿಂಗ್ ಸಾಮರ್ಥ್ಯವನ್ನು ಸಾಬೀತುಪಡಿಸಿದರು.

ಶನಿವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ತಮ್ಮ ತಂಡವನ್ನು ಸನ್‌ರೈಸರ್ಸ್ ಹೈದರಾಬಾದ್ ಎದುರು 6 ವಿಕೆಟ್‌ಗಳ ಅಂತರದ ಗೆಲುವಿನತ್ತ ಮುನ್ನಡೆಸಿದರು. 220 ರನ್ ಗುರಿಯನ್ನು ಪಂಜಾಬ್ ತಂಡವು ಬೆನ್ನಟ್ಟಿತ್ತು. ಶ್ರೇಯಸ್ 33 ಎಸೆತಗಳಲ್ಲಿ ಅಜೇಯ 69 ರನ್ ಗಳಿಸಿದರು. ಆರಂಭಿಕ ಜೋಡಿ ಪ್ರಿಯಾಂಶ್ ಆರ್ಯ (57; 20ಎ) ಮತ್ತು ಪ್ರಭಸಿಮ್ರನ್ ಸಿಂಗ್ (51; 25ಎ) ಮೊದಲ ವಿಕೆಟ್ ಜತೆಯಾಟದಲ್ಲಿ 99 ರನ್ ಸೇರಿಸಿದರು. ಈ ರನ್‌ಗಳು ಕೇವಲ 37 ಎಸೆತಗಳಲ್ಲಿ ಸೇರಿದವು.

ಈ ಗಟ್ಟಿಯಾದ ಅಡಿಪಾಯದ ಮೇಲೆ ಶ್ರೇಯಸ್ ಗೆಲುವಿನ ಸೌಧ ನಿರ್ಮಿಸಿದರು. ಅವರ ಬ್ಯಾಟಿಂಗ್‌ನಲ್ಲಿ 5 ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್‌ಗಳು ಇದ್ದವು. ಅವರ ಆಟದ ಬಲದಿಂದ ತಂಡವು 18.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 223 ರನ್ ಗಳಿಸಿತು. ನಾಲ್ಕನೇ ಪಂದ್ಯವಾಡಿದ ಪಂಜಾಬ್ ತಂಡಕ್ಕೆ ಇದು ಮೂರನೇ ಜಯ. ಒಂದು ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು.

ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಶ್ರೇಯಸ್ ಅಯ್ಯರ್ ಯೋಜನೆಯನ್ನು ಹೈದರಾಬಾದ್ ತಂಡದ 'ಸಿಡಿಲಮರಿ' ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ವಿಫಲಗೊಳಿಸಿದರು. ಅಭಿಷೇಕ್ ಅವರು ತಾವೆದುರಿಸಿದ ಮೊದಲ ಎಸೆತವನ್ನು ಸಿಕ್ಸರ್‌ಗೆ ಎತ್ತಲಿಲ್ಲ. ಆದರೆ ಆಟಕ್ಕೆ ಕುದುರಿಕೊಂಡ ನಂತರ ಎಂಟು ಸಿಕ್ಸರ್ ಹಾಗು ಐದು ಬೌಂಡರಿಗಳನ್ನು ಬಾರಿಸಿದರು. ಕೇವಲ 28 ಎಸೆತಗಳಲ್ಲಿ 74 ರನ್ ಸೂರೆ ಮಾಡಿದರು. ಅವರು ಅರ್ಷದೀಪ್ ಸಿಂಗ್ ಅವರ ಒಂದೇ ಓವರ್‌ನಲ್ಲಿ 24 ರನ್ ಗಳಿಸಿದರು. 18 ಎಸೆತಗಳಲ್ಲಿ ಅರ್ಧಶತಕ ದಾಟಿದರು.

ಶ್ರೇಯಸ್ ಅಯ್ಯರ್ ಪಿಟಿಐ ಚಿತ್ರ

